ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 16 ಮಂಗಳವಾರ 2023

ಸಂಪುಟ: 44 | ಸಂಚಿಕೆ: 30 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿದ್ದರಾಮಯ್ಯರಿಗೆ 'ಆಲ್ ದಿ ಬೆಸ್ಟ್': ಡಿಕೆಶಿ



ನವದೆಹಲಿ, ಮೇ 15– **ಕರ್ನಾಟಕ ಮುಖ್ಯಮಂತ್ರಿ ಸ್ಥಾನದ ಪ್ರಬಲ ಆಕಾಂಕ್ಷಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಸ್ಥಾನದ ಮತ್ತೊಬ್ಬ ಪ್ರಬಲ ಆಕಾಂಕ್ಷಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಶುಭ ಕೋರಿದ್ದಾರೆ. ಇದು ರಾಜಕೀಯ ವಲಯದಲ್ಲಿ ಅಚ್ಚರಿ ಮೂಡಿಸಿದೆ.**

ಇಂದು ರಾತ್ರಿ ತಮ್ಮ ಸದಾಶಿವನಗರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಸಿದ್ದರಾಮಯ್ಯ ಅವರಿಗೆ ಶಾಸಕರ ಸಂಖ್ಯಾ ಬಲವಿದೆ. ಅವರಿಗೆ ಆಲ್ ದಿ ಬೆಸ್ಟ್, ನಾನು ರೆಬಲ್ ಅಲ್ಲ, ಬ್ಲಾಕ್‌ಮೇಲ್ ಮಾಡುವುದಿಲ್ಲ, ನಾನು ಅಪ್ರಬುದ್ಧನೂ ಅಲ್ಲ, ನನಗೆ ದೂರದೃಷ್ಟಿ ಇದೆ. ಯಾವುದೇ ಷಡ್ಯಂತರಕ್ಕೆ ಬಲಿಯಾಗುವುದಿಲ್ಲ. ಪಕ್ಷಕ್ಕೆ ನಿಷ್ಠನಾಗಿರುತ್ತೇನೆ. ದೆಹಲಿಯಲ್ಲಿ ಏನು ನಡೆಯುತ್ತಿದ್ದೆಯೋ ನನಗೆ ಗೊತ್ತಿಲ್ಲ. ಇಂದು ಸಂಜೆ ದೆಹಲಿಗೆ ಹೋಗಬೇಕಿತ್ತು ಆರೋಗ್ಯ ಸಮಸ್ಯೆಯಿಂದಾಗಿ ಹೋಗಿಲ್ಲ. ನಾಲ್ಕು ಗಂಟೆ ಕಾಲ ವಿಶ್ರಾಂತಿ ಪಡೆದಿದ್ದೇನೆ. ಈಗ ಆರೋಗ್ಯ ಸುಧಾರಿಸಿದೆ. ನಾಳೆ ಬೆಳಗ್ಗೆ ದೆಹಲಿಗೆ ತೆರಳುತ್ತಿದ್ದೇನೆ" ಎಂದು ತಿಳಿಸಿದರು.

ನಾಳೆ ಸೋನಿಯಾ ಗಾಂಧಿ ಶಿಮ್ಲಾದಿಂದ ನವದೆಹಲಿಗೆ ಆಗಮಿಸುತ್ತಿದ್ದು, ಅವರನ್ನು ಭೇಟಿಯಾಗುವುದು ನನ್ನ ಮೊದಲ ಕಾರ್ಯಕ್ರಮ. ಅವರಿಗೆ ಎಲ್ಲಾ ವಿಚಾರವನ್ನು ತಿಳಿಸುತ್ತೇನೆ. ಆನಂತರ ಉಳಿದ ವಿಚಾರಗಳತ್ತ ಗಮನ ನೀಡುತ್ತೇನೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಇದೇ ವೇಳೆ ನವದೆಹಲಿಯಲ್ಲಿ ಇಂದು ಸಂಜೆ ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್.ಕೆ ಪಾಟೀಲ್, ನಾಳೆ ಸಂಜೆಯೊಳಗೆ ಕರ್ನಾಟಕ ಮುಖ್ಯಮಂತ್ರಿ ಯಾರು ಎಂಬುದು ಘೋಷಣೆಯಾಗಲಿದೆ ಎಂದರು. ಮುಖ್ಯಮಂತ್ರಿ ಆಯ್ಕೆ ಸಂಬಂಧ ಭಾನುವಾರ ದೆಹಲಿಯಿಂದ ಬೆಂಗಳೂರಿಗೆ ಆಗಮಿಸಿದ್ದ ಎಐಸಿಸಿ ವೀಕ್ಷಕರು ಶಾಸಕಾಂಗ ಪಕ್ಷದ ಸಭೆ ನಡೆಸಿ, ಶಾಸಕರ ಅಭಿಪ್ರಾಯ ಪಡೆದಿದ್ದರು. ಈ ವೇಳೆ ಸಭೆಯಲ್ಲಿ ಮುಖ್ಯಮಂತ್ರಿ ಆಯ್ಕೆ ನಿರ್ಧಾರವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬಿಡಲಾಗಿದೆ ಎಂದು ಒಂದು ಸಾಲಿನ ನಿರ್ಣಯ ಕೈಗೊಳ್ಳಲಾಯಿತಾದರೂ, ಸಿದ್ದರಾಮಯ್ಯ ಸೇರಿದಂತೆ ಹಲವು ಶಾಸಕರು ಸಿಎಂ ಆಯ್ಕೆ ವಿಚಾರವಾಗಿ ಶಾಸಕರ ಅಭಿಪ್ರಾಯ ಪಡೆಯಬೇಕೆಂದು ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ವೀಕ್ಷಕರು ಶಾಸಕರ ಅಭಿಪ್ರಾಯಗಳನ್ನು ಲಿಖಿತವಾಗಿ ತಿಳಿಸುವಂತೆ ಸೂಚಿಸಿ, ಲಿಖಿತ ಅಭಿಪ್ರಾಯ ಸಂಗ್ರಹಿಸಿ, ಇಂದು ದೆಹಲಿಗೆ ಆಗಮಿಸಿ, ಎಐಸಿಸಿ ಅಧ್ಯಕ್ಷರಿಗೆ ವರದಿ ಸಲ್ಲಿಸಿದ್ದರು.

ದೆಹಲಿಯಲ್ಲಿ ಸಿದ್ದು: ಇದೇ ವೇಳೆ ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರಿಗೆ ದೆಹಲಿಗೆ ಬರುವಂತೆ ಬುಲಾವ್ ನೀಡಿತ್ತು. ಸಿದ್ದರಾಮಯ್ಯ ಇಂದು ಬೆಳಗ್ಗೆಯೇ ತಮ್ಮ ಕೆಲ ಆಪ್ತ ಶಾಸಕರೊಡಗೂಡಿ ದೆಹಲಿಗೆ ಆಗಮಿಸಿ, ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಮತ್ತೊಂದೆಡೆ ▸ 8ನೇ ಪುಟಕ್ಕೆ

- ಸಿದ್ದರಾಮಯ್ಯರಿಗೆ ಸಂಖ್ಯಾಬಲ ಇದೆ, ಅವರಿಗೆ ಒಳ್ಳೆಯದಾಗಲಿ
- ಇಂದು ಡಿ.ಕೆ.ಶಿವಕುಮಾರ್ ದೆಹಲಿಗೆ, ಸೋನಿಯಾಗಾಂಧಿ ಭೇಟಿ
- ಮಂಗಳವಾರ ಸಂಜೆ ವೇಳೆಗೆ ನೂತನ ಮುಖ್ಯಮಂತ್ರಿ ಘೋಷಣೆ

> ಮಂಗಳವಾರ ಕರ್ನಾಟಕದ ರಾಜ್ಯ ನಾಯಕರೊಂದಿಗೆ ಎಐಸಿಸಿ ಅಧ್ಯಕ್ಷರು ಹಾಗೂ ಮುಖಂಡರ ಸಭೆ ನಡೆಯಲಿದ್ದು, ಆ ನಂತರ ಮುಖ್ಯಮಂತ್ರಿ ಯಾರೆಂಬುದು ನಿರ್ಧಾರವಾಗುತ್ತದೆ. ಬಹುಶಃ ನಾಳೆ (ಮೇ 16)ಸಂಜೆ ಕರ್ನಾಟಕ ಸಿಎಂ ಆಯ್ಕೆ ಪ್ರಕ್ರಿಯೆ ಅಂತಿಮಗೊಳ್ಳುವ ಸಾಧ್ಯತೆ ಇದೆ.
> –ರಣದೀಪ್‌ಸಿಂಗ್ ಸುರ್ಜೇವಾಲ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ



ಡಿಕೆಶಿ ಒಬ್ಬರೇ ಕೆಲಸ ಮಾಡಿದ್ದರೆ ನಾನ್ಯಾಕೆ ಪ್ರಚಾರದಲ್ಲಿ ತೊಡಗಬೇಕಿತ್ತು

ಸಿಎಂ ಕುರ್ಚಿಗೆ ಸಿದ್ದು ವಾದ

ಬೆಂಗಳೂರು: ಬಹುಮತದಿಂದ ಗೆದ್ದು ಗದ್ದುಗೆ ಏರಲು ತಯಾರಾಗಿರುವ ಕಾಂಗ್ರೆಸ್‌ಗೆ ಈಗ ಮುಖ್ಯಮಂತ್ರಿ ಕುರ್ಚಿ ತಲೆನೋವಾಗಿ ಪರಿಣಮಿಸಿದೆ. ಒಂದು ಕಡೆ ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿ ಪಟ್ಟಕ್ಕೆ ಪಟ್ಟು ಹಿಡಿದರೆ ಇನ್ನೊಂದು ಕಡೆ ಸಿದ್ದರಾಮಯ್ಯ ಕುರ್ಚಿಗಾಗಿ ಪಟ್ಟು ಹಿಡಿದಿದ್ದಾರೆ.

ಸಿದ್ದರಾಮಯ್ಯ ವಾದ: ಎಲ್ಲಾ ಕೆಲಸವನ್ನು ಪಕ್ಷದ ಅಧ್ಯಕ್ಷರೇ ಮಾಡಿದ್ದಾರೆ ಎನ್ನುವುದಾದರೆ, ಅವರು ಒಬ್ಬರೇ ಪ್ರಚಾರ ಮಾಡಬಹುದಿತ್ತು. ನಾನು ಚುನಾವಣಾ ಪ್ರಚಾರಕ್ಕೆ ಹೋಗುವ ಅಗತ್ಯ ಇರಲಿಲ್ಲ. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬರಲು ನಾನು ಮುಖ್ಯಮಂತ್ರಿ ಅವಧಿಯಲ್ಲಿ ಜನಪರವಾಗಿ ಮಾಡಲಾದ ಕೆಲಸಗಳು ಕೈ ಹಿಡಿದಿವೆ. ನನ್ನ ವರ್ಚಸ್ಸು ಜನರನ್ನು ಕಾಂಗ್ರೆಸ್ ಕಡೆಗೆ ತಿರುಗುವಂತೆ ಮಾಡಿದೆ ಎಂದು ಸಿದ್ದರಾಮಯ್ಯ ವಾದಿಸಿದ್ದಾರೆ. ಒಬ್ಬರ ನೇತೃತ್ವದಲ್ಲಿ ಚುನಾವಣೆ ನಡೆದಿಲ್ಲ. ನಾನು ಡಿ.ಕೆ ಶಿವಕುಮಾರ್ ಸೇರಿ ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಿ ಗೆಲುವು ಸಾಧಿಸಿದ್ದೇವೆ. ನನ್ನ ಕೈಲಾದ ಮಟ್ಟಿಗೆ ಅಭ್ಯರ್ಥಿಗಳಿಗೆ ಆರ್ಥಿಕ ನೆರವು ನೀಡಿದ್ದೇನೆ. ಇಬ್ಬರ ಶ್ರಮದಿಂದ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿದಿದೆ. ನಾನು ಪೂರ್ಣ 5 ವರ್ಷದ ಅವಧಿಗೆ ಸಿಎಂ ಸ್ಥಾನ ಕೇಳುತ್ತಿಲ್ಲ. ರಾಜೀ ಆಗಿದ್ದೇನೆ, ಡಿಕೆಶಿಯೂ ರಾಜೀ ಆಗಬೇಕು ಎಂದಿದ್ದಾರೆ. ಪಕ್ಷ ಘೋಷಿಸಿದ್ದ ಗ್ಯಾರಂಟಿಗಳು ಚುನಾವಣೆಯಲ್ಲಿ ಕೈ ಹಿಡಿದಿದೆ. ಬಡವರ ಪರವಾದ ಆ ಯೋಜನೆಗಳ ಜಾರಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿ ಈಡೇರಿಸುತ್ತಾರೆ ಎಂದು ಜನ ಮತ ಹಾಕಿದ್ದಾರೆ. ಅಹಿಂದ ವರ್ಗದ ಮತಗಳು ದೊಡ್ಡ ಮಟ್ಟದಲ್ಲಿ ಕೆಲಸ ಮಾಡಿದೆ. ನಮಗೆ ಸಿಕ್ಕ ಮತಗಳ ವಿವರವನ್ನು ಪರಿಶೀಲಿಸಿದರೆ ಈ ಬಗ್ಗೆ ಅರಿವಾಗುತ್ತದೆ. ಅಲ್ಲದೆ ಶಾಸಕರ ಹೆಚ್ಚಿನ ಬೆಂಬಲ ನನಗೆ ಇದೆ ಎನ್ನುವ ನಂಬಿಕೆ ಇದೆ. ಬೇಕಾದರೆ ಬಹಿರಂಗವಾಗಿ ಇನ್ನೊಮ್ಮೆ ಆಯ್ಕೆ ನಡೆಯಲಿ ಎಂದು ಸವಾಲು ಹಾಕಿದ್ದಾರೆ.

ವರಿಷ್ಠರಿಗೆ ಮುಖ್ಯಮಂತ್ರಿ ಆಯ್ಕೆ ಕಗ್ಗಂಟು

ಮುಖ್ಯಮಂತ್ರಿ ಮಾಡಿದರೆ ಮಾಡಿ ಇಲ್ಲ ರಾಜಕೀಯ ಬಿಟ್ಟು ಬಿಸಿನೆಸ್ ಮಾಡ್ತೇನೆ...

ವೀಕ್ಷಕರಲ್ಲಿ ಡಿ.ಕೆ.ಶಿವಕುಮಾರ್ ಖಡಕ್ ನುಡಿ



ಬೆಂಗಳೂರು, ಮೇ 15(ಕೆಎಂಶಿ)–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಮ್ಮ ಪಟ್ಟು ಸಡಿಲಿಸಲು ಮುಂದಾಗದ ಕಾರಣ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ತೀವ್ರ ಬಿಕ್ಕಟ್ಟಾಗಿ ಪರಿಗಣಿಸಿದ್ದು, ದೆಹಲಿ ವರಿಷ್ಠರಿಗೆ ತಲೆನೋವಾಗಿದೆ. ಕರ್ನಾಟಕದಲ್ಲಿ ಸ್ಪಷ್ಟ ಬಹುಮತದಿಂದ ಪಕ್ಷ ಅಧಿಕಾರ ಹಿಡಿದಿದ್ದರೂ, ನಾಯಕನ ಆಯ್ಕೆ ವಿಚಾರದಲ್ಲಿ ವರಿಷ್ಠರು ತತ್‌ಕ್ಷಣ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ.

ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಾಗಿರುವ ಈ ಉಭಯ ನಾಯಕರ ಮನವೊಲಿಸಿ, ಒಮ್ಮತದ ಆಯ್ಕೆ ಮಾಡಲು ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರನ್ನು ದೆಹಲಿಗೆ ಬರುವಂತೆ ವರಿಷ್ಠರು ಆಹ್ವಾನಿಸಿದ್ದಾರೆ. ವರಿಷ್ಠರ ಆಹ್ವಾನದ ಮೇರೆಗೆ ಸಿದ್ದರಾಮಯ್ಯ ದೆಹಲಿ ತಲುಪಿದ್ದಾರೆ. ಆರೋಗ್ಯ ಸಮಸ್ಯೆಯಿಂದ ಇಂದಿನ ದೆಹಲಿ ಪ್ರಯಾಣ ರದ್ದು ಮಾಡಿದ ಡಿಕೆಶಿ ನಾಳೆ ದೆಹಲಿಗೆ ತೆರಳಲಿದ್ದಾರೆ. ಐದು ವರ್ಷಗಳ ಆಡಳಿತಾವಧಿಯನ್ನು ಹಂಚಿಕೊಂಡು ಆಡಳಿತ ನಡೆಸಲು ಉಭಯ ನಾಯಕರು ಸಮ್ಮತಿಸಿದ್ದರೂ, ಯಾರು ಮೊದಲು ಎಂಬ ವಿಷಯದಲ್ಲಿ ತಮ್ಮ ಪಟ್ಟನ್ನು ಬಿಟ್ಟುಕೊಡುತ್ತಿಲ್ಲ. ಇದೇ ವರಿಷ್ಠರಿಗೆ ತಲೆನೋವಾಗಿರುವುದು.

ದೆಹಲಿಯ ವರಿಷ್ಠರು ಪಕ್ಷದ ಶಾಸಕರ ಅಭಿಪ್ರಾಯ ಸಂಗ್ರಹ ಮಾಡಿ, ಪೂರ್ಣಗೊಂಡ ನಂತರ ತಮ್ಮ ಸಹೋದರ ಸುರೇಶ್ ಜೊತೆಗೂಡಿ ಶಾಂಗ್ರಿಲಾ ಹೊಟೇಲ್‌ನಲ್ಲಿ ತಂಗಿರುವ ರಾಜ್ಯದ ಉಸ್ತುವಾರಿ ಹೊಣೆಹೊತ್ತ ರಣದೀಪ್‌ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿ, ಮುಖ್ಯಮಂತ್ರಿ ಸ್ಥಾನದ ಹಕ್ಕಿಗಾಗಿ ಡಿಕೆಶಿ ಒತ್ತಾಯಿಸಿದ್ದಾರೆ. ಸಂಕಷ್ಟದಲ್ಲಿದ್ದ ಪಕ್ಷವನ್ನು ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಕಟ್ಟಿ ಬೆಳೆಸಿ, ಪಕ್ಷವನ್ನು ಅಧಿಕಾರಕ್ಕೆ ತಂದಿದ್ದೇನೆ. ನನ್ನನ್ನು ಮುಖ್ಯಮಂತ್ರಿ ಮಾಡಬೇಕೆಂದೇ ಅಲ್ಪಸಂಖ್ಯಾತರು, ಒಕ್ಕಲಿಗರು, ಪರಿಶಿಷ್ಟರು ಹಾಗೂ ಉತ್ತರ ಕರ್ನಾಟಕ ಭಾಗದಲ್ಲಿ ಲಿಂಗಾಯತ ಸಮುದಾಯ ಪಕ್ಷಕ್ಕೆ ಸಂಪೂರ್ಣ ಬೆಂಬಲ ನೀಡಿದ್ದರಿಂದ ನಾವು 135 ಸ್ಥಾನ ಗೆದ್ದಿದ್ದೇವೆ.

ಹಗಲು ರಾತ್ರಿ ಎನ್ನದೇ ಪಕ್ಷಕ್ಕಾಗಿ ದುಡಿದಿದ್ದೇನೆ. ಇದನ್ನು ನೀವು ಸಮೀಪದಲ್ಲೇ ಕಂಡಿದ್ದೀರಿ. ನನಗೆ ಅಧಿಕಾರ ಕೊಡಬೇಕು. ನನಗೆ ಕೊಡಲು ನಿಮಗೆ ಇಷ್ಟ ಇಲ್ಲ ಎಂದರೆ ನಾನು ವಿಧಾನಸಭಾ ಸದಸ್ಯತ್ವಕ್ಕೆ ಮತ್ತು ಪಕ್ಷದ ರಾಜ್ಯಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ, ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತನಂತೆ ನಿಷ್ಠನಾಗಿರುತ್ತೇನೆ.

ರಾಜಕೀಯದಿಂದ ದೂರ ಸರಿದು, ನನ್ನ ಬಿಸಿನೆಸ್ ನೋಡಿಕೊಂಡು ಆರಾಮವಾಗಿರುತ್ತೇನೆ. ಇನ್ನು ಉಳಿದ ವಿಚಾರವಾಗಿ ನಾನು ಏನನ್ನೂ ಹೇಳುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿ ಹೊರ ಬಂದಿದ್ದಾರೆ. ವೀಕ್ಷಕರ ಮುಂದೆ ಪಕ್ಷದ ಕೆಲವು ಹಿರಿಯ ನಾಯಕರು ಸಿದ್ದರಾಮಯ್ಯನವರ ಪರ ನಿಂತಿರುವುದರಿಂದ ಬೇಸತ್ತ ಶಿವಕುಮಾರ್ ಇಂತಹ ನಿರ್ಧಾರ ಕೈಗೊಂಡರೆಂದು ಹೇಳಲಾಗಿದೆ. ವೀಕ್ಷಕರು ಶಾಂಗ್ರಿಲಾ ಹೊಟೇಲ್‌ನಲ್ಲಿ ಶಾಸಕರ ಅಭಿಪ್ರಾಯ ಸಂದರ್ಭದಲ್ಲಿ ಬಹುತೇಕರು ತಟಸ್ಥವಾಗಿ ಉಳಿದು, ನಾಯಕನ ಆಯ್ಕೆಯನ್ನು ವರಿಷ್ಠರಿಗೆ ಬಿಟ್ಟಿದ್ದಾರೆ.

ಉಳಿದವರಲ್ಲಿ ಕೆಲವರು ಶಿವಕುಮಾರ್ ಪರ ವಕಾಲತ್ತು ವಹಿಸಿದ್ದರೆ, ಇನ್ನೂ ಕೆಲ ಶಾಸಕರು ಸಿದ್ದರಾಮಯ್ಯನವರೇ ಮುಖ್ಯಮಂತ್ರಿ ಏತಕ್ಕೆ ಆಗಬೇಕೆಂದು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ಶಿವಕುಮಾರ್‌ಗಿಂತ ಸಿದ್ದರಾಮಯ್ಯ ಪರ ವಕಾಲತ್ತು ವಹಿಸಿದ ಶಾಸಕರೇ ಹೆಚ್ಚು. ಅದರಲ್ಲಿ ಆರ್.ವಿ. ದೇಶಪಾಂಡೆ, ಕೆ.ಜೆ.ಜಾರ್ಜ್, ಕೆ.ಎನ್.ರಾಜಣ್ಣ, ಬಸವರಾಜ ರಾಯರೆಡ್ಡಿ, ಜಮೀರ್ ಅಹಮದ್‌ಖಾನ್, ▸ 8ನೇ ಪುಟಕ್ಕೆ

ಅಧಿಕಾರ ಹಂಚಿಕೆಗೆ ಸಿದ್ದರಾಮಯ್ಯ ಒಪ್ಪಿಗೆ

ಬೆಂಗಳೂರು: ಕರ್ನಾಟಕ ವಿಧಾನ ಸಭಾ ಚುನಾವಣೆಯ ಭರ್ಜರಿ ಜನಾದೇಶದ ನಂತರ, ಕಾಂಗ್ರೆಸ್ ನೂತನ ಮುಖ್ಯಮಂತ್ರಿಯನ್ನು ಅಂತಿಮಗೊಳಿಸುವ ಕಾರ್ಯದಲ್ಲಿ ನಿರತವಾಗಿದೆ.

ಶಿವಕುಮಾರ್ ಅವರೊಂದಿಗೆ ಮುಖ್ಯಮಂತ್ರಿ ಸ್ಥಾನವನ್ನು ಹಂಚಿಕೊಳ್ಳಲು ಸಿದ್ಧವಿರುವುದಾಗಿ ಸಿದ್ದರಾಮಯ್ಯ ಹೈಕಮಾಂಡ್ ಮುಂದೆ ಪ್ರಸ್ತಾಪಿಸಿದ್ದಾರೆ ಎಂದು ಎಐಸಿಸಿ ಮೂಲಗಳು ಸುದ್ದಿ ಸಂಸ್ಥೆ ಐಎಎನ್‌ಎಸ್‌ಗೆ ತಿಳಿಸಿವೆ.

ಆದರೆ, ಸಿದ್ದರಾಮಯ್ಯ ಅವರು ಮೊದಲ ಅವಧಿಗೆ ಮುಖ್ಯಮಂತ್ರಿ ಹುದ್ದೆಯನ್ನು ಬಯಸಿದ್ದಾರೆ, ಮೊದಲ ಎರಡು ವರ್ಷಗಳ ನಂತರ ಅಧಿಕಾರವನ್ನು ತ್ಯಜಿಸುತ್ತಾರೆ ಮತ್ತು ಉಳಿದ ಅವಧಿಯಲ್ಲಿ ಡಿಕೆ ಶಿವಕುಮಾರ್ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಬಹುದು ಎಂದು ಮೂಲಗಳು ತಿಳಿಸಿವೆ. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರು ಕುರುಬ ಸಮುದಾಯ ಮತ್ತು ಒಕ್ಕಲಿಗ ಸಮುದಾಯದ ಪ್ರಬಲ ▸ 8ನೇ ಪುಟಕ್ಕೆ

ನಾಳೆಯಿಂದ ಕರ್ನಾಟಕ ಸೇರಿ ದಕ್ಷಿಣದ ರಾಜ್ಯಗಳಲ್ಲಿ 3 ದಿನಗಳ ಕಾಲ ಆನೆ ಗಣತಿ



ಬೆಂಗಳೂರು: ಈಗಾಗಲೇ ಹುಲಿ ಗಣತಿಯನ್ನು ಮಾಡಲಾಗಿದ್ದು, ಅರಣ್ಯ ಇಲಾಖೆಯು ಈಗ ದಕ್ಷಿಣದ ರಾಜ್ಯಗಳಲ್ಲಿ ಆನೆ ಗಣತಿ ನಡೆಸಲು ಮುಂದಾಗಿದೆ.

ಮೂರು ದಿನಗಳ ಗಣತಿಯು ಮೇ 17 ರಂದು ಪ್ರಾರಂಭವಾಗಲಿದೆ. ಅಖಿಲ ಭಾರತ ಗಣತಿಯನ್ನು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (MoEFCC) ಇನ್ನೂ ಘೋಷಿಸದ ಕಾರಣ ಕರ್ನಾಟಕ ಅರಣ್ಯ ಇಲಾಖೆಯು ಈ ಪ್ರಕ್ರಿಯೆಯನ್ನು ಪ್ರಾರಂಭಿಸುವಲ್ಲಿ ಮುಂದಾಳತ್ವ ವಹಿಸಿದೆ. ಗಣತಿಯು ನೇರ ಮತ್ತು ಪರೋಕ್ಷ ಮೌಲ್ಯಮಾಪನ ವಿಧಾನಗಳನ್ನು ಒಳಗೊಂಡಿರುತ್ತದೆ. ನೀರಿನ ಹೊಂಡಗಳಲ್ಲಿ ಎಣಿಕೆ, ಸಗಣಿ ವಿಶ್ಲೇಷಣೆ, ಸಸ್ಯವರ್ಗ ಮತ್ತು MoEFCC ಪಟ್ಟಿ ಮಾಡಿರುವ ಎಲ್ಲಾ ಮಾರ್ಗಸೂಚಿಗಳನ್ನು ಅನುಸರಿಸಲಾಗುವುದು ಎಂದು ವನ್ಯಜೀವಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಜೀವ್ ರಂಜನ್ ತಿಳಿಸಿದ್ದಾರೆ. ಗಣತಿಯನ್ನು ಒಂದೇ ಸ್ವರೂಪದಲ್ಲಿ ಮತ್ತು ಅದೇ ಸಮಯದಲ್ಲಿ ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮತ್ತು ಗೋವಾದಲ್ಲಿಯೂ ಮಾಡಲಾಗುತ್ತದೆ. ಇದು ಅಲೆದಾಡುವ ಆನೆಗಳ ಸಂಖ್ಯೆಯನ್ನು ತಿಳಿಯಲು ನೆರವಾಗುತ್ತದೆ. ಕರ್ನಾಟಕದ ಆನೆಗಳು ಈ ಎರಡು ರಾಜ್ಯಗಳಲ್ಲಿ ಹೆಚ್ಚಾಗಿ ಅಲೆ ದಾಡುತ್ತಿರುವ ಕಾರಣ ಮಹಾರಾಷ್ಟ್ರ ಮತ್ತು ಗೋವಾವನ್ನು ಸಹ ಗಣತಿಯ ವ್ಯಾಪ್ತಿಗೆ ತರಲಾಗಿದೆ ಎಂದು ರಂಜನ್ ಹೇಳಿದರು.

ಕರ್ನಾಟಕವು ಆರೋಗ್ಯವಂತ ಹುಲಿ ಮತ್ತು ಆನೆಗಳ ತವರು. ಕಳೆದ ಗಣತಿ ವರದಿಯ ಪ್ರಕಾರ, ಕರ್ನಾಟಕದಲ್ಲಿ 6,000 ಆನೆಗಳಿದ್ದು, ಅರಣ್ಯ ಅಧಿಕಾರಿಗಳು ತಮ್ಮ ನಿರೀಕ್ಷೆಗಳನ್ನು ನಿರ್ದಿಷ್ಟಪಡಿಸದಿದ್ದರೂ, ರಾಜ್ಯವು ಏರಿಕೆಯನ್ನು ದಾಖಲಿಸುವ ನಿರೀಕ್ಷೆಯಲ್ಲಿದೆ. ಗಣತಿಗಾಗಿ ಎಲ್ಲ ರಾಜ್ಯಗಳ ಅರಣ್ಯ ಇಲಾಖೆ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಗಣತಿಯನ್ನು ದಾಖಲಿಸಲಾಗುತ್ತದೆ ಮತ್ತು ಛಾಯಾಚಿತ್ರ ತೆಗೆಯಲಾಗುತ್ತದೆ. ಕ್ಯಾಮೆರಾ ಟ್ರ್ಯಾಪ್ ಚಿತ್ರಗಳನ್ನು ಸಹ ಬಳಸಲಾಗುತ್ತದೆ. ವರದಿಗಳನ್ನು ಪ್ರತಿದಿನವೂ MOEFCCಯೊಂದಿಗೆ ಹಂಚಿಕೊಳ್ಳಲಾಗುತ್ತದೆ. ನೀಲಗಿರಿ ಜೀವಗೋಳದಲ್ಲಿ ಅತಿ ಹೆಚ್ಚು ಆನೆಗಳು ನೆಲೆಸಿರುವ ನಿರೀಕ್ಷೆಯಿದೆ ಎಂದು ಮತ್ತೊಬ್ಬ ಅರಣ್ಯಾಧಿಕಾರಿ ಹೇಳಿದರು. ಮಾನವ–ಆನೆ ಸಂಘರ್ಷದ ಇತ್ತೀಚಿನ ಘಟನೆಗಳ ಹಿನ್ನೆಲೆಯಲ್ಲಿ, ಈ ಬಾರಿ ಮೌಲ್ಯಮಾಪನಕ್ಕೆ ಸ್ವಯಂಸೇವಕರು ಅಥವಾ ವಿದ್ಯಾರ್ಥಿಗಳನ್ನು ಬಳಸಿಕೊಳ್ಳದಿರಲು ಅರಣ್ಯ ಇಲಾಖೆ ಅಧಿಕಾರಿಗಳು ನಿರ್ಧರಿಸಿದ್ದಾರೆ. ಸಿಬ್ಬಂದಿ ಮತ್ತು ಜನರ ಸುರಕ್ಷತೆಗಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ರಂಜನ್ ಹೇಳಿದ್ದಾರೆ.

ದುಬಾರೆ ಶಿಬಿರದಲ್ಲಿ ಆನೆ ಸವಾರಿ: ದುಬಾರೆ ಆನೆ ಶಿಬಿರದಲ್ಲಿ ಆನೆ ಸವಾರಿ ಆರಂಭಿಸಲು ಮುಂದಾಗಿರುವ ಅರಣ್ಯ ಇಲಾಖೆ ವಿರುದ್ಧ ಪರಿಸರ ಸಂರಕ್ಷಣಾವಾದಿಗಳು ಹಾಗೂ ನಾಗರಿಕರು ▸ 8ನೇ ಪುಟಕ್ಕೆ

ನನಗೆ ಆಸೆಯೂ ಇರಲಿಲ್ಲ, ಕನಸೂ ಇರಲಿಲ್ಲ ಚಾಮುಂಡೇಶ್ವರಿ ಕೃಪೆಯಿಂದ ಈ ಜವಾಬ್ದಾರಿ ಸಿಕ್ಕಿದೆ

- 'ಮೈಸೂರು ಮಿತ್ರ'ನಿಗೆ ನಿಯೋಜಿತ ಸಿಬಿಐ ನಿರ್ದೇಶಕ ಡಿಜಿಪಿ ಪ್ರವೀಣ್‌ಸೂದ್ ಪ್ರತಿಕ್ರಿಯೆ
- ಮೇ 25ಕ್ಕೆ ಅಧಿಕಾರ ಸ್ವೀಕಾರ



ಮೈಸೂರು, ಮೇ 15(ಆರ್‌ಕೆ)– ನನಗೆ ಆಸೆಯೂ ಇರಲಿಲ್ಲ, ಕನಸೂ ಇರಲಿಲ್ಲ. ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ಕೃಪೆಯಿಂದ ಸೆಂಟ್ರಲ್ ಬ್ಯುರೋ ಆಫ್ ಇನ್ವೆಸ್ಟಿಗೇಷನ್ (ಸಿಬಿಐ) ನಿರ್ದೇಶಕ ಹುದ್ದೆ ಲಭಿಸಿದೆ ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ತಿಳಿಸಿದ್ದಾರೆ.

ಸೋಮವಾರ ದೂರವಾಣಿ ಮೂಲಕ ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ನಾನು ರಾಜ್ಯದ ಪೊಲೀಸ್ ಇಲಾಖೆಯ ಅತ್ಯುನ್ನತ ಜವಾಬ್ದಾರಿ ನಿರ್ವಹಿಸುತ್ತಿದ್ದೇನೆ ಕಾನೂನು–ಸುವ್ಯವಸ್ಥೆ ಕಾಪಾಡುವುದು, ಅಪರಾಧ ತಡೆ, ಪತ್ತೆ ಕಾರ್ಯದ ಮೂಲಕ ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆ ಕಾಯ್ದುಕೊಂಡು ಹೋಗುತ್ತಿದ್ದೇನೆ. ಇದಕ್ಕಿಂತ ಉನ್ನತ ಸ್ಥಾನವನ್ನು ನಾನೆಂದೂ ನಿರೀಕ್ಷಿಸಿರಲಿಲ್ಲ. ನನಗೆ ಸಿಬಿಐ ನಿರ್ದೇಶಕ ಹುದ್ದೆಯ ಆಸೆಯೂ ಇರಲಿಲ್ಲ, ಕನಸಲ್ಲೂ ನೆನೆಸಿರಲಿಲ್ಲ. ಚಾಮುಂಡೇಶ್ವರಿ ಆಶೀರ್ವಾದದಿಂದ ಈ ಹುದ್ದೆ ಲಭಿಸಿದೆ ಎಂದರು. ಮೇ 25ರಂದು ನಾನು ನವದೆಹಲಿಯಲ್ಲಿ ಸಿಬಿಐ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಳ್ಳಬೇಕಾಗಿದೆ. ಅಷ್ಟರೊಳಗೆ ಒಮ್ಮೆ ಮೈಸೂರಿಗೆ ಬಂದು ಚಾಮುಂಡೇಶ್ವರಿ ದರ್ಶನ ಪಡೆಯುತ್ತೇನೆ. ಹಿರಿಯ ಐಪಿಎಸ್ ಅಧಿಕಾರಿ, ಅಗ್ನಿಶಾಮಕ ಸೇವೆಗಳ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರಿಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿ ಪ್ರಭಾರ ಜವಾಬ್ದಾರಿ ವಹಿಸಲು ತಯಾರಿ ನಡೆದಿದೆ ಎಂದು ಪ್ರವೀಣ್ ಸೂದ್ ತಿಳಿಸಿದರು.

200 ಯೂನಿಟ್ ಉಚಿತ ವಿದ್ಯುತ್ ಕಾಂಗ್ರೆಸ್ ಗ್ಯಾರಂಟಿ; ಇಂಧನ ಇಲಾಖೆಗೆ ಪೀಕಲಾಟ

ಸರ್ಕಾರ ರಚನೆಗೆ ಮುನ್ನವೇ ವಿದ್ಯುತ್ ಬಿಲ್ ಪಾವತಿಸಲು ಗ್ರಾಹಕರು ತಕರಾರು

■ ಎಸ್.ಟಿ.ರವಿಕುಮಾರ್

ಮೈಸೂರು, ಮೇ 15–ಹಲವು ಉಚಿತ ಸೌಕರ್ಯಗಳನ್ನು ನೀಡುವುದಾಗಿ ಚುನಾವಣೆಯಲ್ಲಿ ಘೋಷಿಸಿ ಕಾಂಗ್ರೆಸ್ ಪಕ್ಷ ಸ್ಪಷ್ಟ ಬಹುಮತ ಪಡೆದಿದ್ದು, ಅಧಿಕಾರ ಗದ್ದುಗೆಗೇರುವ ಮುನ್ನವೇ ಜನರು ಯೋಜನೆಯ ಫಲ ದಕ್ಕಿದ ವಿಶ್ವಾಸದಲ್ಲಿದ್ದಾರೆ.

ಪ್ರತೀ ತಿಂಗಳು 200 ಯೂನಿಟ್‌ವರೆಗೆ ಎಲ್ಲಾ ಕುಟುಂಬಗಳ ಮನೆಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸುತ್ತೇವೆಂಬುದೂ ಸೇರಿದಂತೆ 2023ರ ಚುನಾವಣಾ ಪ್ರಣಾಳಿಕೆಯಲ್ಲಿ 5 ಉಚಿತ ಗ್ಯಾರಂಟಿಯನ್ನು ಕಾಂಗ್ರೆಸ್ ಪಕ್ಷ ಘೋಷಿಸಿತ್ತು.

ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಆ ಎಲ್ಲಾ ಗ್ಯಾರಂಟಿಗಳನ್ನೂ ಮೊದಲ ಸಚಿವ ಸಂಪುಟ ಸಭೆಯಲ್ಲೇ ಘೋಷಿಸಿ ತಕ್ಷಣದಿಂದಲೇ ಯೋಜನೆಗಳನ್ನು ಜಾರಿಗೆ ತರುತ್ತೇವೆಂದು ಭರವಸೆ ನೀಡಿದ್ದರಿಂದ 5 ವರ್ಷ ಬಿಜೆಪಿ ಸರ್ಕಾರದ ಆಡಳಿತ ವೈಖರಿಯಿಂದ ಬೇಸತ್ತಿದ್ದ ಜನರು, ಈ ಬಾರಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪರ ಮತ ಚಲಾಯಿಸಿ ರಾಜ್ಯದಲ್ಲಿ ಆ ಪಕ್ಷಕ್ಕೆ ಸ್ಪಷ್ಟ ಬಹುಮತ ಬರುವಂತೆ ಮಾಡಿದ್ದಾರೆ.

ಮೇ 13ರಂದು ಮತ ಎಣಿಕೆ ನಡೆದು ಕಾಂಗ್ರೆಸ್‌ಗೆ 135 ಸ್ಥಾನಗಳು ಲಭಿಸಿದ್ದು ಈಗಾಗಲೇ ಸರ್ಕಾರ ರಚನೆ ಪ್ರಕ್ರಿಯೆ ನಡೆಯುತ್ತಿದೆ. ಸರ್ಕಾರ ರಚನೆಯಾಗುವ ಮೊದಲೇ ಜನರು ಗೃಹ ಜ್ಯೋತಿ ಯೋಜನೆಯಡಿ 200 ಯೂನಿಟ್ ಉಚಿತ ವಿದ್ಯುತ್ ನೀಡುತ್ತೇವೆಂದು ಘೋಷಿಸಿದ್ದ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯುತ್ತಿರುವುದರಿಂದ ತಮ್ಮ ತಮ್ಮ ಮನೆಯ ವಿದ್ಯುತ್ ಬಿಲ್ ಪಾವತಿಸಲು ನಿರಾಕರಿಸಲಾರಂಭಿಸಿದ್ದಾರೆ.

ಶನಿವಾರ ಚುನಾವಣಾ ಫಲಿತಾಂಶ ಹೊರ ಬಿದ್ದಿದ್ದು, ಭಾನುವಾರ ರಜಾ ದಿನವಾಗಿತ್ತು. ಇಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚೆಸ್ಕಾಂ)ದ ಕೌಂಟರ್‌ಗಳಲ್ಲಿ ವಿದ್ಯುತ್ ಬಿಲ್ ಪಾವತಿಸುವವರ ಸಂಖ್ಯೆ ತೀರಾ ಕಡಿಮೆ ಇತ್ತು. ಗ್ರಾಹಕರ ಸೇವಾ ಕೇಂದ್ರಗಳು, ಕರ್ನಾಟಕ ಒನ್ (ಮೈಸೂರು ಒನ್) ಕೇಂದ್ರಗಳಲ್ಲೂ ಎಲೆಕ್ಟ್ರಿಕ್ ಬಿಲ್ ಕಟ್ಟಲು ಜನರೇ ಬರುತ್ತಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆನ್‌ಲೈನ್‌ನಲ್ಲಿ ಬಿಲ್ ಪಾವತಿಸುವವರ ಸಂಖ್ಯೆಯೂ ಇಳಿಮುಖವಾಗಿದೆ. ಮೀಟರ್ ರೀಡರ್‌ಗಳು ಮನೆ ಮನೆಗೆ ತೆರಳಿ ಬಿಲ್ ಕೊಡುತ್ತಿದ್ದಂತೆಯೇ ಕೆಲವರು ಸ್ಥಳದಲ್ಲೇ ವಿದ್ಯುತ್ ಶುಲ್ಕ ಪಾವತಿಸುತ್ತಿದ್ದರು. ಆದರೆ ಇಂದು ಮೈಸೂರಿನ ಕೆಲ ಬಡಾವಣೆಗಳಲ್ಲಿ ಬಿಲ್ ನಿರಾಕರಿಸಿ, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ ವಿದ್ಯುತ್ ಉಚಿತ ಎಂದು ಹೇಳಿಲ್ವಾ, ನಾವು ಕಟ್ಟುವುದಿಲ್ಲ ಎಂದು ಮೀಟರ್ ರೀಡರ್‌ಗಳಿಗೆ ಹೇಳಿ ಕಳುಹಿಸುತ್ತಿರುವುದು ಕಂಡುಬಂದಿತು.

ಇನ್ನು ಜಿಲ್ಲೆಯ ಎಲ್ಲಾ ತಾಲೂಕುಗಳ ಕೆಲ ಗ್ರಾಮಗಳಲ್ಲಿ ವಿದ್ಯುತ್ ಬಿಲ್ ವಸೂಲಿಗೆ ಹೋದ ಚೆಸ್ಕಾಂ ಸಿಬ್ಬಂದಿಗಳಿಗೆ ಅವಾಜ್ ಹಾಕಿ ಕಳುಹಿಸಲಾಗುತ್ತಿದ್ದು, ಕೆಲವೆಡೆ ಹಲ್ಲೆಗೂ ಮುಂದಾಗಿರುವುದು ವರದಿಯಾಗಿದೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರೇ ಪ್ರತಿ ಮನೆಗೆ ಉಚಿತ ವಿದ್ಯುತ್ ಕೊಡುತ್ತೇವೆಂದು ಹೇಳಿಲ್ವಾ... ಅವರೇ ಮುಖ್ಯಮಂತ್ರಿಗಳಾಗುತ್ತಾರೆ. ನಾವು ವಿದ್ಯುತ್ ಬಿಲ್ ಕಟ್ಟಲ್ಲ ಎಂದು ಹೇಳಿ ಕಳುಹಿಸುತ್ತಿರುವುದು ಕಂಡುಬಂದಿದೆ.

ಇನ್ನೂ ಸರ್ಕಾರ ರಚನೆಯಾಗಿಲ್ಲ, ಅಧಿಕೃತ ಆದೇಶ, ಸುತ್ತೋಲೆಗಳೂ ಬಂದಿಲ್ಲ, ಈಗ ವಿದ್ಯುತ್ ಬಿಲ್ ಪಾವತಿಸಿ. ಆದೇಶ ಬಂದ ಮೇಲೆ ನೋಡೋಣ ಎಂದು ಹೇಳಿದರೂ ಕೇಳದ ಕೆಲ ಗ್ರಾಹಕರು, ಆದೇಶ ಆದ್ಮೇಲೆ ನೋಡೋಣ ಹೋಗಿ ಎಂದು ಹೇಳಿ ಕಳುಹಿಸುತ್ತಿದ್ದಾರೆ. ಅತ್ತ ಇಲಾಖೆ ಮೇಲಧಿಕಾರಿಗಳು ವಿದ್ಯುತ್ ಬಾಕಿ ವಸೂಲಿ ಮಾಡಿ, ಪಾವತಿಸದ ಗ್ರಾಹಕರ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಎಂದು ಸಿಬ್ಬಂದಿಗೆ ತಾಕೀತು ಮಾಡುತ್ತಿದ್ದಾರೆ. ಮತ್ತೊಂದೆಡೆ ಜನರು ಬಿಲ್ ಪಾವತಿಸುತ್ತಿಲ್ಲ. ಸಂಪರ್ಕ ಕಡಿತಗೊಳಿಸಲು ಹೋದರೆ ಬೈದು ಕಳಿಸುತ್ತಿದ್ದಾರೆ ಎಂದು ಸಿಬ್ಬಂದಿ ಅಳಲು ತೋಡಿಕೊಳ್ಳುತ್ತಿದ್ದಾರೆ.

ಹೆಚ್ಚು ಒತ್ತಾಯ ಮಾಡಿದರೆ ಶಾಸಕರಿಗೆ ಹೇಳುತ್ತೇವೆ. ಉಚಿತ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದರಿಂದಲೇ ನಾವೆಲ್ಲಾ ಓಟಾಕಿ ಗೆಲ್ಲಿಸಿದ್ದೇವೆ ಎಂದು ಅವಾಜ್ ಹಾಕುತ್ತಿರುವ ಜನರು, ಮಾತೆತ್ತಿದರೆ ನೂತನ ಶಾಸಕರಿಗೆ ಅಥವಾ ಅವರ ಆಪ್ತರಿಗೆ ಫೋನ್ ಮಾಡಿ ಬಿಲ್ ವಸೂಲಾತಿಗೆ ಹೋದ ಸಿಬ್ಬಂದಿಗೆ ಮಾತನಾಡುವಂತೆ ಕೊಡುತ್ತಾರೆ. ಆ ಕಡೆಯಿಂದ ಅವರು ಸ್ವಲ್ಪ ಸುಮ್ಮನಿರಿ ಎಂದು ಹೇಳುತ್ತಿದ್ದಂತೆಯೇ ಬರಿಗೈಯಲ್ಲಿ ಹಿಂದಿರುಗುವಂತಾಗಿದೆ. ನೂತನ ಕಾಂಗ್ರೆಸ್ ಶಾಸಕರಂತೂ ಚೆಸ್ಕಾಂ ಸಿಬ್ಬಂದಿಗಳನ್ನು ಫೋನ್‌ನಲ್ಲೇ ಗದರಿಸಿ ಕಳುಹಿಸುತ್ತಿದ್ದಾರಂತೆ. "ನಮ್ಮ ಸರ್ಕಾರ ಬಂದಿಲ್ವೇನ್ರೀ, 200 ಯೂನಿಟ್ ವಿದ್ಯುತ್ ಫ್ರೀ ಅಂತಾ ಹೇಳಿಲ್ವಾ..., ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆಯೇ ಮುಖ್ಯಮಂತ್ರಿಯಾದವರು ಗೃಹ ಜ್ಯೋತಿ ಯೋಜನೆ ಘೋಷಿಸುತ್ತಾರೆ. ಅಲ್ಲಿವರೆಗೆ ಇರ್ರೀ..." ಎಂದು ಶಾಸಕರು ಹೇಳುತ್ತಿದ್ದಾರೆಂದು ಹೆಸರೇಳಲಿಚ್ಛಿಸದ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ▸ 8ನೇ ಪುಟಕ್ಕೆ

ಬಿಲ್ ವಸೂಲಿಗೆ ಹೋದ ಚೆಸ್ಕಾಂ ಸಿಬ್ಬಂದಿಗೆ ಛೀಮಾರಿ

ಘೋಷಣೆವರೆಗೆ ವಸೂಲಿ ಮಾಡಬೇಡ್ರಿ...: ಶಾಸಕರ ತಾಕೀತು

ಚುನಾವಣೆ ವೇಳೆಯೇ ಘೋಷಣೆ ಆಗಿದೆ ಎಂದು ವಾದ–ವಾಗ್ವಾದ



> ಗೃಹಲಕ್ಷ್ಮಿ ಯೋಜನೆಯಡಿ ಮನೆ ಯಜಮಾನಿಗೆ ತಿಂಗಳಿಗೆ 2000 ರೂ. ನಗದು, ಅನ್ನಭಾಗ್ಯ ಯೋಜನೆಯಡಿ ಬಡವರಿಗೆ ತಲಾ 10 ಕೆಜಿ ಅಕ್ಕಿ ಉಚಿತ. ಯುವನಿಧಿ ಯೋಜನೆಯಲ್ಲಿ ನಿರುದ್ಯೋಗಿ ಪದವೀಧರರಿಗೆ ಪ್ರತೀ ತಿಂಗಳೂ 3,000 ರೂ. ಹಾಗೂ ನಿರುದ್ಯೋಗಿ ಡಿಪ್ಲೊಮಾ ಪೂರ್ಣಗೊಳಿಸಿರುವವರಿಗೆ 1,500 ರೂ. ಸಹಾಯಧನ ಮತ್ತು ಮಹಿಳೆಯರಿಗೆ ಉಚಿತ ಸಾರಿಗೆ ಬಸ್ ಪ್ರಯಾಣ ಯೋಜನೆಯನ್ನು ಕಾಂಗ್ರೆಸ್ ಗ್ಯಾರಂಟಿ ಪ್ರಣಾಳಿಕೆಯಲ್ಲಿ ಘೋಷಿಸಿರುವುದನ್ನು ಸ್ಮರಿಸಬಹುದಾಗಿದೆ.

ಮೈಸೂರು ಮಿತ್ರ



ಸೋಮವಾರ ಮೈಸೂರಿಗೆ ಆಗಮಿಸಿದ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಬಿಜೆಪಿ ಮುಖಂಡರು ಆತ್ಮೀಯವಾಗಿ ಬರಮಾಡಿಕೊಂಡರು. ಚಿತ್ರದಲ್ಲಿ ಸಂಸದ ಪ್ರತಾಪ್ ಸಿಂಹ, ನೂತನ ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್ ಇನ್ನಿತರರನ್ನು ಕಾಣಬಹುದು.

ಪಾಕಿಸ್ತಾನ ಜಿಂದಾಬಾದ್ ಘೋಷಣೆ ವಿವಾದ

ದೇಶದ್ರೋಹ ಚಟುವಟಿಕೆ ಆರಂಭ... ನನಗೆ ಬೆದರಿಕೆ ಕರೆ ಬಂದಿದೆ: ಈಶ್ವರಪ್ಪ

ಶಿವಮೊಗ್ಗ: ಕರ್ನಾಟಕ ಚುನಾವಣೆ ವಿಜಯದ ಬೆನ್ನಲ್ಲೇ ಬೆಳಗಾವಿಯಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು 'ಪಾಕಿಸ್ತಾನ ಜಿಂದಾಬಾದ್' ಘೋಷಣೆ ಕೂಗಿದ ವಿಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿ ಹಿರಿಯ ನಾಯಕ ಕೆಎಸ್ ಈಶ್ವರಪ್ಪ ಕಾಂಗ್ರೆಸ್ ಪಕ್ಷದ ವಿರುದ್ಧ ಕಿಡಿಕಾರಿದ್ದಾರೆ.

ಶಿವಮೊಗ್ಗ ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಮಾಜಿ ಶಾಸಕ ಕೆ.ಎಸ್.ಈಶ್ವರಪ್ಪ, ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ದೇಶದ್ರೋಹಿ ಚಟುವಟಿಕೆಗಳು ಹೆಚ್ಚಾಗಿವೆ ಎಂದು ಆರೋಪಿಸಿದ್ದಾರೆ.

ಬೆಳಗಾವಿಯ ತಿಲಕವಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ವಿಜಯೋತ್ಸವದಲ್ಲಿ ಪಾಕ್ ಪರ ಘೋಷಣೆ ಕೂಗಲಾಗಿದೆ. ಈ ಬಗ್ಗೆ ಪೊಲೀಸ್ ಅಧಿಕಾರಿಯೇ ದೂರು ನೀಡಿದ್ದಾರೆ. ಶಿರಸಿಯಲ್ಲೂ ಹಸಿರು ಬಾವುಟ ಹಾರಾಡಿದೆ ಎಂದರು.



ನನಗೆ ಬೆದರಿಕೆ ಕರೆ: ಇನ್ನು ನಿನ್ನೆ ರಾತ್ರಿ ಕಝಕಸ್ತಾನದಿಂದ ರಾತ್ರಿ 12 ಗಂಟೆಗೆ ನನಗೆ ಬೆದರಿಕೆ ಕರೆ ಬಂದಿದೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಲಿದ್ದೇನೆ. ನಾನು ಕಾಲ್ ರಿಸೀವ್ ಮಾಡಿಲ್ಲ. ಸೈಲೆಂಟ್ ಮೋಡ್ ನಲ್ಲಿಟ್ಟಿದ್ದೆ. ಈ ಹಿಂದೆ ಮಹಾರಾಷ್ಟ್ರದ ವ್ಯಕ್ತಿ ಯೊಬ್ಬರನ್ನು ಬಂಧಿಸಿದಾಗ ಕೇಂದ್ರ ಸಚಿವ ನಿತಿನ್ ಗಡ್ಕರಿಗೆ ಬೆದರಿಕೆ ಕರೆ ಮಾಡಿದ್ದು, ಆತ ಶಾಹೀರ್ ಶೇಖ್ ಎಂದು ಗೊತ್ತಾಗಿತ್ತು. ಆತನ ಡೈರಿಯಲ್ಲಿ ನನ್ನ ಹೆಸರು ಉಲ್ಲೇಖವಾಗಿತ್ತು. ಈ ಹಿನ್ನೆಲೆಯಲ್ಲಿ ನನಗೆ +7 (678)815 415 ನಂಬರ್‌ನಿಂದ ಕರೆ ಬಂದಿದೆ ಎಂದು ಈಶ್ವರಪ್ಪ ಹೇಳಿದರು.

ಸಿದ್ದು–ಡಿಕೆಶಿ ಚುನಾವಣೆಗೆ ಮೊದಲು ಬಿಜೆಪಿಯನ್ನು ಕೋಮುವಾದಿ ಪಕ್ಷ ಎಂದಿದ್ದರು. ಆದರೆ ಈಗ ಸಿದ್ದರಾಮಯ್ಯ ಪರವಾಗಿ ಕುರುಬರು ಹಾಗೂ ಡಿ.ಕೆ.ಶಿವಕುಮಾರ್ ಪರವಾಗಿ ಒಕ್ಕಲಿಗರು ಲಾಬಿ ಮಾಡುತ್ತಿದ್ದಾರೆ. ಇದರಿಂದ ಸಿದ್ದು ಮತ್ತು ಡಿಕೆಶಿ ಜಾತಿವಾದ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಜೆಡಿಎಸ್ ಅಭ್ಯರ್ಥಿ ವಿರುದ್ಧ ಚಿಕ್ಕಮಗಳೂರಿನ ಭೋಜೇಗೌಡ ಕೆಲಸ ಮಾಡಿದ್ದು ಹಾಲಿನ ಅಭಿಷೇಕ ಮಾಡಿಸಿಕೊಂಡಿದ್ದಾರೆ. ಇಂದು ಲಜ್ಜೆಗೇಡಿ ವರ್ತನೆ. ಜೆಡಿಎಸ್ ನಾಯಕರು ಹೇಗೆ ಸಹಿಸಿಕೊಳ್ಳುತ್ತಾರೋ ಗೊತ್ತಿಲ್ಲ ಎಂದು ಕಿಡಿಕಾರಿದರು.

ಇಂದಿನಿಂದ ಮೇ 23ರವರೆಗೆ ಆಯುರ್ವೇದ ಪಂಚಕರ್ಮ ಶಿಬಿರ

ಮೈಸೂರು, ಮೇ 15– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮೇ 16ರಿಂದ 23ರವರೆಗೆ ಸೋರಿಯಾಸಿಸ್, ಇಸುಬು, ಹುಳಕಡ್ಡಿ, ಬಿಳಿಮಚ್ಚೆ, ಮೊಡವೆ, ಪಿತ್ತ ಗಂಧೆ, ಚಿಬ್ಬಿ ಅಲರ್ಜಿ ಚರ್ಮರೋಗಗಳಿಗೆ ಆಯುರ್ವೇದ ಪಂಚಕರ್ಮ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9663468619, ದೂ. 0821–2548231 ಸಂಪರ್ಕಿಸಬಹುದು.

ಗ್ಯಾಸ್ಟ್ರೈಟಿಸ್ ಚಿಕಿತ್ಸಾ ಶಿಬಿರ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮೇ 16ರಿಂದ 23ರವರೆಗೆ ಗ್ಯಾಸ್ಟ್ರೈಟಿಸ್ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 6362 582116, ದೂ. 0821–2548231 ಸಂಪರ್ಕಿಸಿ.



ಕೃಷ್ಣರಾಜ ಕ್ಷೇತ್ರದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ರಘುನಂದನ್, ಸಹಕಾರ ಪ್ರಕೋಷ್ಠದ ರಾಜ್ಯ ಸದಸ್ಯ ಶ್ರೀನಿವಾಸ್, ವೇಣುಗೋಪಾಲ್‌ಗೌಡ, ಅನಿಲ್‌ರಾಜ್, ಸ್ನೇಹಿತರು, ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಮೇ 15– ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ಹಿರಿಯ ಕಾರ್ಯದರ್ಶಿ ಹಾಗೂ ಹೆಚ್ಚುವರಿ ಆಡಳಿತ ಹೊಣೆಗಾರಿಕೆಯಾಗಿ ಮೆಲ್ಲಹಳ್ಳಿಯ ಸಿ.ರಾಜೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಆದೇಶ ಪತ್ರದಲ್ಲಿ ತಿಳಿಸಲಾಗಿದೆ.

ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ: ಒಕ್ಕಲಿಗ ಮುಖಂಡರ ಸಭೆಯಲ್ಲಿ ಬೆಂಬಲ

ಮೈಸೂರು, ಮೇ 15 (ಎಂಟಿವೈ)– ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯಾಗಿ ಘೋಷಿಸುವಂತೆ ಒತ್ತಾಯಿಸಿ ಮೈಸೂರಲ್ಲಿ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥಸ್ವಾಮಿ ನೇತೃತ್ವದಲ್ಲಿ ನಡೆದ ಒಕ್ಕಲಿಗರ ಮುಖಂಡರ ಸಭೆಯಲ್ಲಿ ಡಿ.ಕೆ.ಶಿವಕುಮಾರ್‌ಗೆ ಬೆಂಬಲ ಸೂಚಿಸಲು ನಿರ್ಧರಿಸಲಾಯಿತು.



ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿರುವ ಬಂದಂತಮ್ಮ ದೇವಾಲಯ ಆವರಣದಲ್ಲಿ ಸೋಮವಾರ ಒಕ್ಕಲಿಗರ ಹಿತಚಿಂತಕರು ವೇದಿಕೆ ಆಯೋಜಿಸಿದ್ದ ಮುಖಂಡರ ಸಭೆಯಲ್ಲಿ ಪಾಲ್ಗೊಂಡಿದ್ದ ಮೈಸೂರಿನ ವಿವಿಧ ಒಕ್ಕಲಿಗ ಸಂಘಟನೆಯ ಮುಖಂಡರು ಡಿ.ಕೆ.ಶಿವಕುಮಾರ್ ಪರ ಬ್ಯಾಟಿಂಗ್ ಮಾಡಿ, ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡವನ್ನುಂಟು ಮಾಡುವ ಪ್ರಯತ್ನ ಮಾಡಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಆದಿ ಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಮಾತನಾಡಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಯುವಕರಿದ್ದಾರೆ. ಕಾಂಗ್ರೆಸ್ ಏಳಿಗೆಗೆ ತಮ್ಮದೇ ಆದ ಸೇವೆ ಸಲ್ಲಿಸಿದ್ದಾರೆ. ರಾಜ್ಯದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 135 ಸ್ಥಾನ ಗಳಿಸಲು ಡಿ.ಕೆ.ಶಿವಕುಮಾರ್ ಶ್ರಮ ಹೆಚ್ಚಾಗಿದೆ. ಪಕ್ಷ ಸಂಘಟನೆ ವೇಳೆ ಹಿರಿಯ ನಾಯಕರು ಹಾಗೂ ಕಿರಿಯರನ್ನು ಒಟ್ಟಿಗೆ ಕೊಂಡೊಯ್ದು ಕೆಲಸ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸೇವೆ ಸಲ್ಲಿಸಲು ಅವರಿಗೆ ಅವಕಾಶ ಮಾಡಿಕೊಡಬೇಕು. ಕಾಂಗ್ರೆಸ್‌ನಿಂದ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂಬ ಕಾರಣದಿಂದಾಗಿಯೇ 135 ಮಂದಿ ಶಾಸಕರು ಆಯ್ಕೆಯಾಗಿದ್ದಾರೆ ಎಂದರು.

> ❝ ಕಳೆದ ನಾಲ್ಕು ವರ್ಷಗಳಿಂದ ಡಿ.ಕೆ.ಶಿವಕುಮಾರ್ ಸಾಕಷ್ಟು ತೊಂದರೆ ಎದುರಿಸಿದ್ದಾರೆ. ವಿವಿಧ ಕೇಸ್‌ಗಳ ಮೂಲಕ ತೊಂದರೆ ನೀಡಲಾಗಿದೆ. ಈಗಲಾದರೂ ಕಾಂಗ್ರೆಸ್ ಹೈಕಮಾಂಡ್ ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯಾಗಿ ಮಾಡಬೇಕು. ಸಮಾಜಕ್ಕೆ ಕೀರ್ತಿ ತರುವವರಿಗೆ ಶ್ರೀ ಮಠ ಮೊದಲಿನಿಂದಲೂ ಸಹಕಾರ ನೀಡುತ್ತಾ ಬಂದಿದೆ. ಯಾವುದೇ ರಾಜಕೀಯ ಉದ್ದೇಶವಿಲ್ಲದೆ ಡಿ.ಕೆ.ಶಿವಕುಮಾರ್ ಅವರಿಗೆ ಬೆಂಬಲ ನೀಡುತ್ತಿದ್ದೇವೆ. **–ಶ್ರೀ ಸೋಮನಾಥ ಸ್ವಾಮೀಜಿ**

ಒಕ್ಕಲಿಗರ ಹಿತಚಿಂತಕರ ವೇದಿಕೆ ಅಧ್ಯಕ್ಷ ಎಂ.ಮೋಹನ್‌ಕುಮಾರ್‌ಗೌಡ ಮಾತನಾಡಿ, ಚುನಾವಣೆಗೂ ಮುನ್ನ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಪ್ರವಾಸ ಮಾಡಿ ಒಕ್ಕಲಿಗರ ಸಂಘದ ಮುಂದೆ ಬೆಂಬಲಯಾಚಿಸಿದ್ದರು. ಇದುವರೆಗೂ ಬೇರೆ ಸಂದರ್ಭದಲ್ಲಿ ಕೆಲವರಿಗೆ ಆಶೀರ್ವಾದ ಮಾಡಿದ್ದೀರಿ. ನನಗೊಂದು ಬಾರಿ ಅವಕಾಶ ಕೊಡಿ ಎಂದು ಒಕ್ಕಲಿಗ ಸಮುದಾಯವನ್ನು ಕೇಳಿದ್ದರು. ಇದರಿಂದ ಈ ಬಾರಿ ಡಿ.ಕೆ.ಶಿವಕುಮಾರ್ ಅವರಿಗೆ ಒಳ್ಳೆಯದಾಗುತ್ತದೆ ಎಂದು ನಮ್ಮ ಸಮುದಾಯ ಕಾಂಗ್ರೆಸ್‌ಗೆ ಬೆಂಬಲ ನೀಡಲಾಗಿತ್ತು. ಹಾಗಾಗಿ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಎಂದು ಘೋಷಣೆ ಮಾಡಬೇಕು. ಇಲ್ಲದಿದ್ದರೆ ಒಕ್ಕಲಿಗ ಸಮುದಾಯ ಬೀದಿಗಿಳಿದು ಹೋರಾಟ ಮಾಡುತ್ತದೆ. ಈ ಹಿಂದೆಯೂ ಅನೇಕ ಬಾರಿ ಸಮುದಾಯದ ನಾಯಕರಿಗೆ ಅಧಿಕಾರ ಸಿಗದೇ ಇದ್ದಾಗ ಹೋರಾಟ ಮಾಡಿ ಅಧಿಕಾರ ಪಡೆದಿರುವ ಹಲವು ನಿದರ್ಶನಗಳಿವೆ. ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಪಟ್ಟ ದಕ್ಕಬೇಕು ಎಂದು ಆಗ್ರಹಿಸಿದರು.

ಸಭೆಯಲ್ಲಿ ಒಕ್ಕಲಿಗ ಹಿತಚಿಂತಕರು ವೇದಿಕೆಯ ಶಂಕರ್, ಟಿ.ರವಿಗೌಡ, ರಾಜು, ಸುರೇಶ್, ಸಿ.ರಮೇಶ್, ಡಿ.ರಮೇಶ್, ಬಂದಂತಮ್ಮ ಕಾಳಮ್ಮ ದೇವಾಲಯದ ಅಧ್ಯಕ್ಷ ಶ್ರೀನಿವಾಸ್, ಮುಖಂಡರಾದ ಶಂಭು, ರವೀಂದ್ರ, ತಾಲೂಕು ಒಕ್ಕಲಿಗರ ಸಂಘದ ಕಾರ್ಯದರ್ಶಿ ಕೃಷ್ಣೇಗೌಡ, ಶ್ರೀನಿವಾಸ್, ವಕೀಲರಾದ ಕೃಷ್ಣ, ಬಸವರಾಜ್, ದಿನೇಶ್, ಜಗ್ಗೇಶ್, ಪ್ರಶಾಂತ್‌ಗೌಡ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಡಿಕೆಶಿ ಹುಟ್ಟುಹಬ್ಬ ಆಚರಣೆ: ಮೈಸೂರಿನ ಅಗ್ರಹಾರ ವೃತ್ತದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ 62ನೇ ಜನ್ಮದಿನವನ್ನು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಡಿ.ಕೆ.ಶಿವಕುಮಾರ್ ಅಭಿಮಾನಿಗಳು ಸಿಹಿಯನ್ನು ಸಾರ್ವಜನಿಕರಿಗೆ ವಿತರಿಸಿ ಸಂಭ್ರಮಿಸಿದರು. ಡಿ.ಕೆ.ಶಿವಕುಮಾರ್ ಅವರ ಭಾವಚಿತ್ರ ಹಿಡಿದು ದಾರಿಹೋಕರಿಗೆ, ವಾಹನ ಸವಾರರಿಗೆ ಸಿಹಿ ವಿತರಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿದ್ದರಾಜು, ಡೈರಿ ವೆಂಕಟೇಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.



ಮೈಸೂರು ಶಾರದಾ ನಿಕೇತನ ಕಲ್ಯಾಣ ಮಂಟಪದಲ್ಲಿ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ ಮತ್ತು ಚಿಗುರು ಮಕ್ಕಳ ಕಲಾ ಸಂಸ್ಥೆ ವತಿಯಿಂದ ಸಮಾಜ ಸೇವಕಿ ಶ್ರೀಮತಿ ನಂ. ನಾಗಲಕ್ಷ್ಮಿ ಅವರಿಗೆ ಪ್ರೇರಣಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದೇ ವೇಳೆ ನಾಗರಾಜ್, ರಾಮಪ್ರಸಾದ್, ವಿದ್ವಾನ್ ವೇದಬ್ರಹ್ಮ ಡಾ.ಟಿ.ವಿ.ಸತ್ಯನಾರಾಯಣ ಅವರನ್ನು ಗೌರವಿಸಲಾಯಿತು. ಚಿಗುರು ಸಂಸ್ಥೆಯ ಅಧ್ಯಕ್ಷೆ ಡಾ.ಶ್ರೀವಳ್ಳಿ, ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ, ಪದಾಧಿಕಾರಿಗಳು ಚಿತ್ರದಲ್ಲಿದ್ದಾರೆ.

ಕಾಂಗ್ರೆಸ್ ವಿಜಯೋತ್ಸವ ವೇಳೆ ನಡೆದ ಗಲಾಟೆ: ಬಿಜೆಪಿ ಕಾರ್ಯಕರ್ತನ ಕೊಲೆ

ಹೊಸಕೋಟೆ: ವಿಧಾನಸಭಾ ಚುನಾವಣೆಯ ಫಲಿತಾಂಶ ಹೊರ ಬಿದ್ದ ಬೆನ್ನಲ್ಲೇ ಬಿಜೆಪಿ ಕಾರ್ಯಕರ್ತನೊಬ್ಬನ ಹತ್ಯೆ ಹೊಸಕೋಟೆಯಲ್ಲಿ ನಡೆದಿದೆ. ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ಅಭ್ಯರ್ಥಿ ಶರತ್ ಬಚ್ಚೇಗೌಡ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಡಿ ಶೆಟ್ಟಿಹಳ್ಳಿಯ ಬಿಜೆಪಿ ಕಾರ್ಯಕರ್ತನೊಬ್ಬನ ಮನೆಯ ಮುಂದೆ ಪಟಾಕಿ ಸಿಡಿಸಿ, ಗಲಾಟೆ ಮಾಡಿ ನಂತರ ಆತನನ್ನು ಹತ್ಯೆಗೈದಿದ್ದಾರೆ.

ಕೃಷ್ಣಪ್ಪ (55) ಮೃತ ಬಿಜೆಪಿ ಕಾರ್ಯಕರ್ತ. ಶರತ್ ಬಚ್ಚೇಗೌಡ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನವರು ಕೃಷ್ಣಪ್ಪನ ಮನೆಯ ಮುಂದೆ ಹೋಗಿ ಪಟಾಕಿ ಸಿಡಿಸಿ ಗಲಾಟೆ ತೆಗೆದಿದ್ದರು. ಈ ವೇಳೆ ಮಾತಿಗೆ ಮಾತು ಬೆಳೆದಿದ್ದು ಕೃಷ್ಣಪ್ಪ ಹಾಗೂ ಕುಟುಂಬಸ್ಥರ ಮೇಲೆ ಭೀಕರವಾಗಿ ಹಲ್ಲೆ ನಡೆಸಿದ್ದಾರೆ. ಈ ವೇಳೆ ಕೃಷ್ಣಪ್ಪನ ಎದೆ ಹಾಗೂ ಭುಜಕ್ಕೆ ಕೊಡಲಿಯಿಂದ ಹೊಡೆದ ಕಾರಣದಿಂದಾಗಿ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಅವರ ಪತ್ನಿ ಹಾಗೂ ಪುತ್ರನಿಗೂ ಎದೆ ಹಾಗೂ ಭುಜಕ್ಕೆ ಬಲವಾಗಿ ಪೆಟ್ಟು ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾರೆ.

ಸಿಬಿಎಸ್‌ಇ : ಜೆಎಸ್‌ಎಸ್ ಪಬ್ಲಿಕ್ ಶಾಲೆಗೆ ಶೇ.100 ಫಲಿತಾಂಶ

ಮೈಸೂರು, ಮೇ 15– ಮೈಸೂರು ಸಿದ್ಧಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆ, 2022–23ನೇ ಸಾಲಿನ ಸಿಬಿಎಸ್‌ಇ 10ನೇ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಸಾಧಿಸಿದೆ. ಶಾಲೆಯ 108 ವಿದ್ಯಾರ್ಥಿಗಳಲ್ಲಿ ಸರ್ವೇಶ್ ಕುಮಾರ್ (ಶೇ.96), ಬಿ.ಹೆಚ್. ಹಿತೇಶ್ (ಶೇ.95.17), ಎನ್.ಪ್ರತೀಕ್ಷಾ (ಶೇ.94.67), ಹೆಚ್.ಶರತ್(ಶೇ.94) ಸೇರಿ 18 ಮಂದಿ ಶೇ.90ಕ್ಕಿಂತ ಅಧಿಕ ಅಂಕ ಪಡೆದಿದ್ದು, ಒಟ್ಟು 41 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಪರಿಶೀಲನಾ ವರದಿ ಸಲ್ಲಿಸಲು ದಿನಾಂಕ ನಿಗದಿ

ಮೈಸೂರು, ಮೇ 15– ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ–2022ಕ್ಕೆ ಸಂಬಂಧಿಸಿದಂತೆ 1:1ರ ಅಂತಿಮ ತಾತ್ಕಾಲಿಕ ಪಟ್ಟಿಯಲ್ಲಿ ಆಯ್ಕೆಗೊಂಡಿರುವ ಅಭ್ಯರ್ಥಿಗಳ ಮೂಲ ದಾಖಲಾತಿ ಪಡೆದು ನೈಜತೆ ಪರಿಶೀಲನೆ ಸಂಬಂಧ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸೂಚನೆ ನೀಡಿರುವುದರಿಂದ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ವಿಷಯವಾರು ನೇಮಕಗೊಂಡ ಅಭ್ಯರ್ಥಿಗಳಿಂದ ಮೂಲ ದಾಖಲಾತಿ ಪಡೆಯಲು ವ್ಯವಸ್ಥೆ ಮಾಡಲಾಗಿದೆ. ಅರ್ಹ ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳನ್ನು ಹಾಗೂ 2 ಜೆರಾಕ್ಸ್ ಪ್ರತಿಗಳನ್ನು ಮತ್ತು ನೈಜತೆ ಸಂಬಂಧ ಸಂಬಂಧಿಸಿದ ವಿವಿಗಳಿಗೆ ಪಾವತಿ ಮಾಡಿರುವ ಹಣದ ಚಲನ್, ರಶೀತಿ ಮತ್ತು ಸಿಂಧುತ್ವಕ್ಕೆ ಸಂಬಂಧಿಸಿದಂತೆ ಕೋರಿರುವ ಮೀಸಲಾತಿಗನುಗುಣವಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರುವ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನಾಧಿಕಾರಿಗಳಿಗೆ ಒಪ್ಪಿಸಬೇಕು.

ಮೇ 16ರಂದು ಆಂಗ್ಲ ಭಾಷೆ, ಮೇ 17ರಂದು ಜೀವ ವಿಜ್ಞಾನ, ಮೇ 18 ಮತ್ತು ಮೇ 19ರಂದು ಗಣಿತ, ಮೇ 20, 22 ಹಾಗೂ 23ರಂದು ಸಮಾಜ ಪಾಠಗಳು ವಿಷಯಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸಲಾಗುವುದು. ಪೂರ್ವ ಸಿದ್ಧತಾ ಕ್ರಮಗಳು ಪೂರ್ಣಗೊಂಡ ನಂತರ ಬೆಂಗಳೂರಿನ ಕೇಂದ್ರೀಕೃತ ದಾಖಲಾತಿ ಘಟಕದ ವಿಶೇಷಾಧಿಕಾರಿಗಳು ನೀಡುವ ಸೂಚನೆಯಂತೆ ಕ್ರಮ ವಹಿಸಲಾಗುವುದು.



ಮೈಸೂರು ಜಿಲ್ಲಾ ಕಾಂಗ್ರೆಸ್ ಮುಖಂಡ ಕೆಂಡಗಣ್ಣ ವಿಶ್ವಕರ್ಮ ನೇತೃತ್ವದಲ್ಲಿ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ಗದ್ದಿಗೆಯ ಶ್ರೀಕೆಂಡಗಣ್ಣೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಸಿಹಿ ವಿತರಿಸಲಾಯಿತು. ಇದೇ ವೇಳೆ ಡಿಕೆಶಿ ಸಿಎಂ ಆಗುವಂತೆ ಪ್ರಾರ್ಥಿಸಿ, ಈ ವೇಳೆ ತಾಪಂ ಮಾಜಿ ಸದಸ್ಯ ದೇವರಾಜ್, ವಿಎಸ್‌ಎಸ್‌ಎನ್ ಸದಸ್ಯ ಜೆ.ಶಿವಪ್ಪ, ಗ್ರಾಪಂ ಸದಸ್ಯರಾದ ಪ್ರಕಾಶ್, ಶಂಕರ್, ಮುಖಂಡರಾದ ಮಹೇಶ್‌ಗೌಡ, ಪ್ರೇಮ್, ಲೋಕೇಶ್, ಸೋಮಶೇಖರ್, ಮಧು ಇನ್ನಿತರರಿದ್ದರು.



ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ಅವರನ್ನು ಯುವ ಮುಖಂಡ ಎಚ್.ಎಸ್.ಸುಜೀತ್‌ಕುಮಾರ್ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಸಿ.ಮಂಜುನಾಥ್, ರವಿಕುಮಾರ್, ಜಗದೀಶ್, ಪ್ರಕಾಶ್, ಧನುಷ್‌ಗೌಡ, ದೀಕ್ಷಿತ್‌ಗೌಡ, ಮಂಡಿ ಪ್ರವೀಣ್, ಮಹೇಶ್ ಇನ್ನಿತರರು ಉಪಸ್ಥಿತರಿದ್ದರು

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಮೇ 15–ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ–2023ಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿ ವರ್ಷ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಲಾಗುತ್ತಿದೆ. ಅದರಂತೆ 2023ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ನಿಬಂಧನೆಗಳು: ಅರ್ಜಿ ಸಲ್ಲಿಸುವ ವಿದ್ಯಾರ್ಥಿಯ ತಂದೆ–ತಾಯಿ ಸರ್ಕಾರಿ ನೌಕರರಾಗಿರಬೇಕು ಹಾಗೂ ಸರ್ಕಾರಿ ನೌಕರರ ಸಂಘದ ಸದಸ್ಯರಾಗಿರಬೇಕು. ಸಂಘದಿಂದ ನಿಗದಿಪಡಿಸಿರುವ ನಮೂನೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ, ತಾಲೂಕು, ಯೋಜನಾ ಶಾಖೆ ಅಧ್ಯಕ್ಷರು ಮತ್ತು ಬೆಂಗಳೂರು ನಗರ ರಾಜ್ಯ ಪರಿಷತ್ ಸದಸ್ಯರಿಂದ ದೃಢೀಕರಿಸಿ ಸಲ್ಲಿಸುವುದು. ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಖಾಸಗಿ ಹಾಗೂ ಅನುದಾನಿತ ವಿದ್ಯಾಸಂಸ್ಥೆಯ ನೌಕರರಾಗಿದ್ದಲ್ಲಿ ಅರ್ಜಿ ಸಲ್ಲಿಸುವಂತಿಲ್ಲ. ನಮೂನೆ ಹಾಗೂ ಅಗತ್ಯ ದಾಖಲೆಗಳಿಲ್ಲದಿದ್ದಲ್ಲಿ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿ ಸಲ್ಲಿಸಲು ಮೇ 31 ಕೊನೆಯ ದಿನವಾಗಿರುತ್ತದೆ ಎಂದು ಜಿಲ್ಲಾಧ್ಯಕ್ಷ ಜೆ. ಗೋವಿಂದರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಆಳಂದ ಕ್ಷೇತ್ರದ ನೂತನ ಶಾಸಕ ಬಿ.ಆರ್.ಪಾಟೀಲ್ ಸೋಮವಾರ ಸುತ್ತೂರು ಕ್ಷೇತ್ರಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು.

ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 15– 2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ನಂತರ ಪ್ರಥಮ ವರ್ಷದ ಡಿಪ್ಲೊಮಾ ಪ್ರವೇಶ ಬಯಸುವ ಆಟೋಮೊಬೈಲ್ ಅಭ್ಯರ್ಥಿಗಳಿಗೆ ಇಂಜಿನಿಯರಿಂಗ್, ಕಮರ್ಷಿಯಲ್ ಪ್ರಾಕ್ಟೀಸ್ ಕನ್ನಡ ಮತ್ತು ಕಮರ್ಷಿಯಲ್ ಪ್ರಾಕ್ಟೀಸ್ ಇಂಗ್ಲಿಷ್ 3 ವಿಭಾಗಗಳಿಗೆ ಖುದ್ದಾಗಿ ನಗರದ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಮೇ 31ರ ಸಂಜೆ 5.30ರವರೆಗೆ ಅರ್ಜಿ ಸಲ್ಲಿಸಬಹುದು. ಸಿವಿಲ್ ವಿಭಾಗ, ಗಣಕಯಂತ್ರ ವಿಭಾಗ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ವಿಭಾಗ, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗ, ಮೆಕ್ಯಾನಿಕಲ್ ವಿಭಾಗ ಮತ್ತು ಮಿಷನ್‌ಟೂಲ್ ಟೆಕ್ನಾಲಜಿ ವಿಭಾಗಗಳಿಗೆ ಮೆರಿಟ್ ಆಧಾರದ ಮೇಲೆ ಸೀಟು ನೀಡುವುದರಿಂದ ಮೊದಲು ಅರ್ಜಿ ಸಲ್ಲಿಸಿದವರಿಗೆ ಮೊದಲ ಆದ್ಯತೆ ನೀಡಿ ಪ್ರವೇಶವನ್ನು ನೀಡಲಾಗುವುದು. ಮಾಹಿತಿಗಾಗಿ dtek.karnataka.gov.in ವೆಬ್‌ಸೈಟ್ ಅನ್ನು ವೀಕ್ಷಿಸಬಹುದು.

ನಿಧನ

ಬುಟ್ಟಿಯಂಡ ಮುತ್ತಣ್ಣ ಪೂವಯ್ಯ



ಮೈಸೂರು, ಮೇ 15– ಮೈಸೂರಿನ ವಿ.ವಿ.ಮೊಹಲ್ಲಾದ ಡಿಆರ್‌ಎಂ ಆಸ್ಪತ್ರೆ ಹಿಂಭಾಗ, 3ನೇ ಮುಖ್ಯ ರಸ್ತೆಯಲ್ಲಿರುವ ಡಾಮ್‌ಡೇನ್ ಬೆರ್ಲಿ ಅಪಾರ್ಟ್‌ಮೆಂಟ್‌ನ 301ರ ನಿವಾಸಿ ಬುಟ್ಟಿಯಂಡ ಮುತ್ತಣ್ಣ ಪೂವಯ್ಯ ಭಾನುವಾರ ನಿಧನರಾದರು. ಅವರಿಗೆ 83 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಎಸ್. ಮಹದೇವಸ್ವಾಮಿ



ಸುತ್ತೂರು: ನಂಜನಗೂಡು ಜೆಎಸ್‌ಎಸ್ ಕಾಲೇಜಿನ ನಿವೃತ್ತ ಸೂಪರಿಂಟೆಂಡೆಂಟ್ ಹಾಗೂ ಸುತ್ತೂರು ನಿವಾಸಿ ಎಸ್.ಎಸ್.ಮಹದೇವಸ್ವಾಮಿ (74) ಹೃದಯಾಘಾತದಿಂದ ಸೋಮವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಸುತ್ತೂರಲ್ಲಿ ನೆರವೇರಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.5.2023 ಮಂಗಳವಾರ, ಮಳೆ ನಕ್ಷತ್ರ: ಕೃತ್ತಿಕ, 11.05.2023 ರಿಂದ 24.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಭಾರತೀಯ ಅಂಚೆ ಇಲಾಖೆ, ಗೃಹ ಸಚಿವಾಲಯ, ರೈಲ್ವೆ ಸಚಿವಾಲಯ, ನಿಮ್ಹಾನ್ಸ್, ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಮತ್ತು ಸಂಪರ್ಕ ಲೆಕ್ಕ ನಿಯಂತ್ರಕರು :** ಉದ್ಯೋಗ ಮೇಳ–ಮಿಷನ್ ನೇಮಕಾತಿ – 5ನೇ ರಾಷ್ಟ್ರೀಯ ಸಮಾರಂಭ, ಉದ್ಘಾಟನೆ : ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಸ್ಥಳ: ಜ್ಞಾನ ಉದ್ಯಾನ ಸಭಾಂಗಣ, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಜೆಎಸ್‌ಎಸ್ ಮಹಾವಿದ್ಯಾಪೀಠ :** ಅಧ್ಯಯನ ಶಿಬಿರ, ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸ ಚಾರಿತ್ರ್ಯ, ಉಪನ್ಯಾಸ–1, ಲಿಂಗಮೂರ್ತಿಸ್ಥಲ–ಅಂಗಸ್ಥಲ ಡಾ. ಶೀಲಾದೇವಿ ಎಸ್. ಮಳೀಮಠ ಅವರಿಂದ, ಉಪನ್ಯಾಸ–2, ಡಾ. ಪ್ರೇಮ ಸಿದ್ದರಾಜು ಅವರಿಂದ ಸಂಸಾರ ಸಂಬಂಧ ಸ್ಥಲ–ಪಿಂಡಸ್ಥಲ, ಉಪನ್ಯಾಸ –3, ಡಾ.ಸಿ. ಶಿವಕುಮಾರಸ್ವಾಮಿ ಅವರಿಂದ ಪಿಂಡಜ್ಞಾನ ಸ್ಥಲ–ಸಂಸಾರಹೇಯ ಸ್ಥಲ, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ, ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ – ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ– ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ– ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ, ಪ್ರಸ್ತುತಿ– ಉಮೇಶ್. ಎಸ್.ಎಸ್. 8.30 ಕರೆಗೊಂದು ಗೀತೆ, 10.00 ಮೌನದಾಚೆಯ ಬೆಳಕು– ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ. ನಿರ್ದೇಶನ ಹಾಗೂ ನಿರೂಪಣ ಸಾಹಿತ್ಯ– ಎಸ್. ಶಂಕರ್ ನಿರ್ಮಾಣ– ಗೀತಾ ರಮಾನಂದ್, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ–ಬಸವರಾಜ ರಾಜ್ ಗುರು, 1.20 ಭಾವಗೀತೆಗಳು– ಎ.ಎನ್ ಶೀಲ, 3.00 ಅನಯಂಪಟ್ಟಿ ಎಸ್. ಗಣೇಶನ್ – ಜಲತರಂಗ್, 4.00 ಕಥಾ ಕಾಲಕ್ಷೇಪ "ಶ್ರೀ ಕೃಷ್ಣಗಾರುಡಿ" ಪ್ರಸ್ತುತಿ– ವಿದ್ವಾನ್ ಆರ್. ಗುರುರಾಜುಲು ನಾಯ್ಡು, 5.05 ಮಿಶ್ರಮಾಧುರ್ಯ, 6.50 ಕೃಷಿರಂಗ – ಕಿಸಾನ್‌ವಾಣಿ– ಹೂವು ಹಾಗೂ ಸುಗಂಧ ಸಸ್ಯಗಳ ಕೃಷಿಯಲ್ಲಿನ ಅನುಭವ ಕುರಿತು ಬಿ.ಎನ್. ನಾಗೇಶ್ ಅವರೊಂದಿಗೆ ಸಂದರ್ಶನ, 9.15 ಯಕ್ಷಗಾನದ ಹಾಡುಗಳು– ಪ್ರಸಾದ್ ಭಟ್ ಬಲಿಪ, 9.30 ಬಾಂಬೆ ಸಹೋದರಿಯರು–ಹಾಡುಗಾರಿಕೆ, 10.30 ಗಮಕ ವ್ಯಾಖ್ಯಾನ, ವಾಚನ– ಪದ್ಮಾ ಶ್ರೀವತ್ಸ್, ವ್ಯಾಖ್ಯಾನ– ಡಾ.ಎನ್.ಕೆ.ರಾಮಶೇಷನ್.

- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪ್ರಸಿದ್ಧ ಪ್ರವಚನಕಾರರಾದ ಪಂಡಿತ್ ನರಸಿಂಹಚಾರ್ಯ ಘೋಟೆ ಅವರಿಂದ ಭಗವದ್ಗೀತೆ 83ನೇ ಅಧ್ಯಯನ ಕುರಿತು ಪ್ರವಚನ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 5 ಗಂಟೆಗೆ.
- **ಶ್ರೀ ಉತ್ತರಾದಿ ಮಠ :** ಶ್ರೀ ಭಗವದ್ಗೀತಾ ಅಭಿಯಾನ, ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಸತ್ಯ ಸಂಕಲ್ಪತೀರ್ಥರು ಹಾಗೂ ಶ್ರೀ ಸತ್ಯ ಸಂತುಷ್ಟ ತೀರ್ಥರ ಸನ್ನಿಧಾನ, ಪರಮಪೂಜ್ಯ ಶ್ರೀ ಶ್ರೀ 1008 ಶರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಹೆಸರಾಂತ ಪ್ರವಚನಕಾರ ಪಂ. ಶ್ರೀ ನರಸಿಂಹಾಚಾರ್ಯ ಘೋಟೆ ಅವರಿಂದ ಭಗವದ್ಗೀತೆ ಅಧ್ಯಾಯ 8 ಕುರಿತು ಪ್ರವಚನ, ಸ್ಥಳ: ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30 ರಿಂದ.

ಡೆಂಗ್ಯೂ ಜ್ವರ ಮಾರಣಾಂತಿಕವೂ ಆಗಬಹುದು

–ಎಂ.ಬಿ.ಪವನ್‌ಮೂರ್ತಿ

ಮೈಸೂರು,ಮೇ 15– 'ಡೆಂಗ್ಯೂ ಜ್ವರ' ಮಾರಣಾಂತಿಕವೂ ಆಗಬಹುದೆಂದು ವೈದ್ಯ ಲೋಕ ಉಲ್ಲೇಖಿಸಿದೆ. 'ಈಡಿಸ್ ಈಜಿಪ್ಟೈ ಸೊಳ್ಳೆ' ಕಚ್ಚುವಿಕೆಯೇ ಇದರ ಮೂಲ. ಹಾಗಾಗಿಯೇ ಈ ಸೊಳ್ಳೆ ವಾಸಸ್ಥಾನಕ್ಕೆ ಅವಕಾಶವಿಲ್ಲದಂತೆ ಯಾವೆಲ್ಲಾ ಕ್ರಮ ವಹಿಸಬೇಕೆಂಬ ಬಗ್ಗೆ ವಿಶೇಷ ರೀತಿಯಲ್ಲಿ ಜಾಗೃತಿ ಮೂಡಿಸಲು ಇಡೀ ದೇಶದಲ್ಲಿ 'ಮೇ 16' ಅನ್ನು 'ರಾಷ್ಟ್ರೀಯ ಡೆಂಗ್ಯೂ ದಿನ'ವೆಂದು ಆಚರಿಸಲಾಗುತ್ತಿದೆ.

ಇದೇ ಸೊಳ್ಳೆ ಚಿಕುನ್‌ಗುನ್ಯಾ ಜ್ವರಕ್ಕೂ ಕಾರಣ. ಆದರೆ ಈ ಜ್ವರ ಮಾರಣಾಂತಿಕವಲ್ಲ ಎಂಬುದು ಸಮಾಧಾನದ ಸಂಗತಿ. ಮನುಷ್ಯರು ಇರುವಲ್ಲಿಯೇ ಈ ಸೊಳ್ಳೆಯ ಜನ್ಮಸ್ಥಳ ಹಾಗೂ ಚಟುವಟಿಕೆಯ ತಾಣ. ಈ ಸೊಳ್ಳೆಗಳು ಮನುಷ್ಯರ ಹೊರತಾಗಿ ಬೇರೆ ಯಾವುದೇ ಪ್ರಾಣಿಗಳನ್ನು ಕಚ್ಚುವುದಿಲ್ಲ ಎಂಬುದು ಗಮನಾರ್ಹದೊಂದಿಗೆ ಕೌತುಕವೂ ಹೌದು.

ಮುಂಗಾರು ಮಳೆ ಸಂದರ್ಭದಲ್ಲಿ ಮನೆ ಆವರಣದಲ್ಲಿ ಸಣ್ಣ ಸಣ್ಣ ಪ್ರಮಾಣದಲ್ಲಿ ನೀರು ನಿಲ್ಲುವುದು ಹೆಚ್ಚಾಗಿ ಈ ಸೊಳ್ಳೆಗಳೂ ಹೆಚ್ಚಾಗುತ್ತವೆ. ಈ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ಸಮಾಜದಲ್ಲಿ ಜಾಗೃತಿ ಮೂಡಿಸಲು ಮುಂಗಾರು ಮಳೆ ಆರಂಭಕ್ಕೂ ಮೊದಲು ಮೇ 16ರಂದು 'ರಾಷ್ಟ್ರೀಯ ಡೆಂಗ್ಯೂ ದಿನ' ಆಚರಿಸಲಾಗುತ್ತದೆ. ಎಲ್ಲಾ ವಯೋಮಾನದವರಲ್ಲಿ ಹಾಗೂ ಮಹಿಳೆ–ಪುರುಷರು ಎಂಬ ಭೇದವಿಲ್ಲದೆ, ಈ ಎರಡು ಜ್ವರಗಳು ಕಾಣಿಸಿಕೊಳ್ಳುತ್ತವೆ. ಈ ಎರಡೂ ರೀತಿಯ ಜ್ವರಗಳಿಂದ ತಪ್ಪಿಸಿಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಈಡಿಸ್ ಈಜಿಪ್ಟೈ ಸೊಳ್ಳೆ ಕಚ್ಚುವಿಕೆಯಿಂದ ತಪ್ಪಿಸಿಕೊಳ್ಳುವುದಾಗಿದೆ. ಅದಕ್ಕಾಗಿ ನೀರು ನಿಲ್ಲದಂತೆ ಮಾರ್ಗೋಪಾಯಗಳ ಮೊರೆ ಹೋಗಬೇಕಾಗುತ್ತದೆ.

ಮನುಷ್ಯನೇ ಮೂಲ!: 'ಈಡಿಸ್ ಈಜಿಪ್ಟೈ ಸೊಳ್ಳೆ' ಎಂಬ ಎಲ್ಲಾ ಸೊಳ್ಳೆಯಲ್ಲಿಯೂ ಸೋಂಕು ಇರುವುದಿಲ್ಲ. ವಿವಿಧ ಸೋಂಕಿನಿಂದ ಕಾಯಿಲೆಗೆ ತುತ್ತಾಗಿರುವವರನ್ನು ಕಚ್ಚಿದ ಈ ವಿಧದ ಸೊಳ್ಳೆಯೂ ಸೋಂಕಿಗೆ ತುತ್ತಾಗುತ್ತದೆ. ರೋಗಿಯ ರಕ್ತದ ಮೂಲಕ ಸೊಳ್ಳೆಯೂ ಸೋಂಕಿಗೆ ಒಳಗಾಗುತ್ತದೆ. ವೈರಾಣು ಸೊಳ್ಳೆಯೊಳಗೆ ಅಭಿವೃದ್ಧಿ ಹೊಂದಲು ಐದಾರು ದಿನಗಳು ತಗಲುತ್ತದೆ. ಬಳಿಕ ಸೋಂಕಿತ ಸೊಳ್ಳೆಯು ಆರೋಗ್ಯವಂತ ವ್ಯಕ್ತಿಗೆ ಕಚ್ಚಿದರೆ ಸೋಂಕು ಉಂಟಾಗುತ್ತದೆ. ಸೋಂಕಿಲ್ಲದ ಈ ವಿಧದ ಸೊಳ್ಳೆಯ ಕಚ್ಚುವಿಕೆಯಿಂದ ಡೆಂಗ್ಯೂ ಮತ್ತು ಚಿಕುನ್‌ಗುನ್ಯಾ ಸೋಂಕು ಬರುವುದಿಲ್ಲ.

ಲಕ್ಷಣವೇನು: ತೀವ್ರ ಜ್ವರ, ವಿಪರೀತ ತಲೆನೋವು, ಕಣ್ಣುಗುಡ್ಡೆ ಹಿಂಭಾಗದಲ್ಲಿ ವಿಪರೀತ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು ಕಾಣಿಸಿಕೊಳ್ಳುವುದು ಡೆಂಗ್ಯೂ ಜ್ವರದ ಲಕ್ಷಣಗಳು. ಜೊತೆಗೆ ಸೋಂಕು ತೀವ್ರವಾದಲ್ಲಿ ಬಾಯಿ, ಮೂಗು ಮತ್ತು ವಸಡುಗಳಿಂದ ರಕ್ತಸ್ರಾವ ಹಾಗೂ ಚರ್ಮದ ಮೇಲೆ ಅಲ್ಲಲ್ಲಿ ರಕ್ತಸ್ರಾವದ ಗುರುತುಗಳು ಕಾಣಿಸಿಕೊಳ್ಳುತ್ತವೆ. ಇದನ್ನು 'ಡೆಂಗ್ಯೂ ರಕ್ತಸ್ರಾವ ಜ್ವರ' ಮತ್ತು 'ಡೆಂಗ್ಯೂ ಆಘಾತಕರ ಜ್ವರ' ಎಂದು ಗುರುತಿಸಲಾಗುತ್ತದೆ. ಈ ಹಂತದಲ್ಲಿ ಮರಣವೂ ಉಂಟಾಗಬಹುದು.

ಇದ್ದಕ್ಕಿದ್ದಂತೆ ಸಾಧಾರಣದಿಂದ ತೀವ್ರ ಜ್ವರ, ಕಣ್ಣುಗಳು ಕೆಂಪಾಗುವಿಕೆ, ಸ್ನಾಯುನೋವು, ಕೀಲುಗಳಲ್ಲಿ ಅಸಾಧ್ಯ ನೋವಿನಿಂದ ಕೈಕಾಲುಗಳನ್ನು ಆಡಿಸಲು ಕಷ್ಟವಾಗುವುದು ಹಾಗೂ ಜಢತ್ವ ಚಿಕುನ್‌ಗುನ್ಯಾ ಜ್ವರದ ಲಕ್ಷಣಗಳಾಗಿವೆ. ಈ ಎರಡೂ ವಿಧದ ಜ್ವರಕ್ಕೂ ಯಾವುದೇ ನಿರ್ದಿಷ್ಟ ಚಿಕಿತ್ಸೆ ಇಲ್ಲವಾದರೂ ರೋಗದ ಲಕ್ಷಣಗಳಿಗೆ ಅನುಗುಣವಾಗಿ ವೈದ್ಯರಿಂದ ಸೂಕ್ತ ಚಿಕಿತ್ಸೆ ಪಡೆಯಬೇಕಾಗುತ್ತದೆ. ಸರ್ಕಾರದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ಸೌಲಭ್ಯ ಲಭ್ಯವಿದೆ.

ಸೊಳ್ಳೆ ತಡೆಗಟ್ಟುವ ಕ್ರಮ: ಮನೆಯ ಒಳಗೆ ಹಾಗೂ ಹೊರಾವರಣದಲ್ಲಿ ನೀರನ್ನು ಶೇಖರಿಸುವ ಸಿಮೆಂಟ್ ತೊಟ್ಟಿ, ಮಣ್ಣಿನ ಮಡಿಕೆ, ಉಪಯೋಗಿಸದ ಒರಳುಕಲ್ಲು, ಏರ್ ಕೂಲರ್‌ಗಳು, ಹೂವಿನ ಕುಂಡಗಳು, ಎಳನೀರು ಚಿಪ್ಪುಗಳಲ್ಲಿ ನೀರು ನಿಲ್ಲದಂತೆ ಕ್ರಮ ವಹಿಸಿದ್ದಲ್ಲಿ ಈ ಸೊಳ್ಳೆಗಳ ಉತ್ಪತ್ತಿ ತಡೆಗಟ್ಟಬಹುದು. ಮಳೆಗಾಲದಲ್ಲಿ ನೀರು ನಿಲ್ಲಲು ಅವಕಾಶವಿರುವ ತ್ಯಾಜ್ಯಗಳ ಬಿಸಾಡುವಿಕೆ ತಪ್ಪಿಸಬೇಕು. ಇಲ್ಲವಾದರೆ ಇವುಗಳಲ್ಲೇ ಈ ಸೊಳ್ಳೆ ಜನ್ಮತಾಳುತ್ತವೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ, ಈ ಸೊಳ್ಳೆ ವರ್ಷದ ಎಲ್ಲಾ ಋತುವಿನಲ್ಲಿ ಇರುತ್ತವೆ. ನೀರು ನಿಲ್ಲುವಲ್ಲಿ ಇವು ಉತ್ಪತ್ತಿಯಾಗುತ್ತವೆ. ಕೆರೆ ಕಟ್ಟೆಯಲ್ಲಿ ಇವು ಉತ್ಪತ್ತಿಯಾಗುವುದಿಲ್ಲ. ಸಣ್ಣ ಪ್ರಮಾಣದಲ್ಲಿ ನಿಲ್ಲುವ ನೀರಿನಲ್ಲಿ ಇವು ಬೆಳವಣಿಗೆಯಾಗುತ್ತವೆ. ಹೀಗಾಗಿ ಮನೆ ಒಳಗೆ ಮತ್ತು ಆವರಣದಲ್ಲಿ ಸಣ್ಣ ಪ್ರಮಾಣದ ನೀರು ನಿಲ್ಲುವುದನ್ನು ತಡೆಗಟ್ಟುವುದು ಮುಖ್ಯವಾಗುತ್ತದೆ ಎಂದರು.

ಡೆಂಗ್ಯೂ ಮಾತ್ರವಲ್ಲದೆ, ಚಿಕುನ್‌ಗುನ್ಯಾ ಜ್ವರಕ್ಕೂ ಇದೇ ಸೊಳ್ಳೆಯ ಕಚ್ಚುವಿಕೆಯೇ ಕಾರಣ. ಚಿಕುನ್‌ಗುನ್ಯಾ ಮಾರಣಾಂತಿಕವಲ್ಲ. ಆದರೆ ಡೆಂಗ್ಯೂ ಜ್ವರ ಸಾವನ್ನೂ ತಂದೊಡ್ಡಬಹುದು. ಸೋಂಕು ತಗುಲಿದ ಮೊದಲ ಮೂರು ದಿನ ಎರಡೂ ಜ್ವರದ ಲಕ್ಷಣಗಳು ಒಂದೇ ರೀತಿ ಇದ್ದು, ನಾಲ್ಕನೇ ದಿನದಿಂದ ಬೇರೆ ಬೇರೆಯಾಗುತ್ತವೆ ಎಂದರು.

ಡೆಂಗ್ಯೂ ಲಕ್ಷಣ ಇರುವ ಎಲ್ಲರನ್ನು ಪರೀಕ್ಷೆ ಒಳಪಡಿಸಲಾಗುತ್ತಿದ್ದು, ಸರ್ಕಾರಿ, ಆರೋಗ್ಯ ಕೇಂದ್ರ, ಆಸ್ಪತ್ರೆಗಳು, ಖಾಸಗಿ ಕ್ಲಿನಿಕ್ ಮತ್ತು ಆಸ್ಪತ್ರೆಗಳು ಎಲ್ಲಾ ಕಡೆಗಳಿಂದಲೂ ರಕ್ತದ ಮಾದರಿ ಪಡೆದು ಗರಿಷ್ಠ ಪ್ರಮಾಣದ ಪರೀಕ್ಷೆಗಳನ್ನು ಮಾಡಿಸಲಾಗುತ್ತಿದೆ. ನಾಲ್ಕೈದು ವರ್ಷಗಳು ಇದೇ ರೀತಿಯಲ್ಲಿ ಪರೀಕ್ಷೆಗಳನ್ನು ಹೆಚ್ಚಳ ಮಾಡಿದರೆ ಡೆಂಗ್ಯೂ ನಿಯಂತ್ರಣಕ್ಕೆ ತರಬಹುದು. ಯಾವುದೇ ಜ್ವರವಿದ್ದರೂ ನಿರ್ಲಕ್ಷ್ಯ ಮಾಡದೇ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು.



ಇಂದು ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ

ಮೈಸೂರಿನ ನಜರ್‌ಬಾದಿನಲ್ಲಿರುವ ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿ ಆವರಣದ ವೈದ್ಯರ ಭವನದಲ್ಲಿ ನಾಳೆ (ಮೇ 16) ಬೆಳಗ್ಗೆ 10.30ಕ್ಕೆ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಡೆಂಗ್ಯೂ ಹಾಗೂ ಚಿಕುನ್‌ಗುನ್ಯಾ ಜ್ವರಗಳ ತಡೆಗಟ್ಟುವಿಕೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಆರೋಗ್ಯ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ.

ಡೆಂಗ್ಯೂ: ಮೈಸೂರು ಜಿಲ್ಲೆಯ ಅಂಕಿ–ಅಂಶ

ಪ್ರಸಕ್ತ ವರ್ಷದಲ್ಲಿ ಮೇ 14ರವರೆಗೆ ಜಿಲ್ಲೆಯಲ್ಲಿ ಡೆಂಗ್ಯೂ ಸಂಬಂಧ 1,804 ಮಂದಿಯ ರಕ್ತದ ಮಾದರಿ ಪರೀಕ್ಷೆಗೆ ಒಳಪಡಿಸಿದ್ದು, ಈ ಪೈಕಿ 154 ಮಂದಿಗೆ ಡೆಂಗ್ಯೂ ಜ್ವರ ಪತ್ತೆಯಾಗಿದೆ. ಇದರಲ್ಲಿ ಮೈಸೂರು ನಗರಕ್ಕೆ ಸಂಬಂಧಿಸಿದಂತೆ 519 ಮಂದಿಯ ರಕ್ತದ ಮಾದರಿ ಪರೀಕ್ಷೆ ನಡೆಸಿದ್ದು, ಇದರಲ್ಲಿ 53 ಮಂದಿಗೆ ಡೆಂಗ್ಯೂ ದೃಢಪಟ್ಟಿದೆ. 2022ರಲ್ಲಿ 4,845 ಮಂದಿಯ ರಕ್ತದ ಮಾದರಿ ಪರೀಕ್ಷಿಸಿದ್ದು, ಇದರಲ್ಲಿ 789 ಮಂದಿಗೆ ಡೆಂಗ್ಯೂ ದೃಢಪಟ್ಟಿದೆ. 2021ರಲ್ಲಿ 825 ಮಂದಿಯ ರಕ್ತ ಮಾದರಿ ಪರೀಕ್ಷೆಯಲ್ಲಿ 182 ಮಂದಿಯಲ್ಲಿ ಡೆಂಗ್ಯೂ ಪತ್ತೆಯಾಗಿದೆ.

ರಾಜ್ಯದ 21 ರೈಲು ನಿಲ್ದಾಣಗಳಲ್ಲಿ 'ಒಂದು ನಿಲ್ದಾಣ, ಒಂದು ಉತ್ಪನ್ನ' ಮಳಿಗೆ



ಮೈಸೂರು, ಮೇ 15–ರಾಜ್ಯದ 21 ರೈಲು ನಿಲ್ದಾಣಗಳಲ್ಲಿ "ಒಂದು ನಿಲ್ದಾಣ, ಒಂದು ಉತ್ಪನ್ನ" ಯೋಜನೆಯಡಿ ವಿಶೇಷ ಮಳಿಗೆಗಳನ್ನು ಆರಂಭಿಸಲಾಗಿದೆ. ವೋಕಲ್ ಫಾರ್ ಲೋಕಲ್ ಪರಿಕಲ್ಪನೆಯಡಿ ಈಗಾಗಲೇ ಮೇಕ್ ಇನ್ ಇಂಡಿಯಾಗೆ ಒತ್ತು ನೀಡಲಾಗಿದೆ. ಅದರಂತೆ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಲು ರೈಲು ನಿಲ್ದಾಣಗಳಲ್ಲಿ ಈ ರೀತಿ ಮಳಿಗೆಗಳನ್ನು ಆರಂಭಿಸಲಾಗಿದೆ. 2022ರ ಮಾರ್ಚ್‌ನಲ್ಲಿ ಪ್ರಾಯೋಗಿಕವಾಗಿ ಯೋಜನೆ ಆರಂಭಿಸಲಾಗಿತ್ತು. ಈಗ ಮೇ ವರೆಗೆ ದೇಶದ ಒಟ್ಟು 21 ರಾಜ್ಯ, 3 ಕೇಂದ್ರಾಡಳಿತ ಪ್ರದೇಶದಲ್ಲಿನ 728 ನಿಲ್ದಾಣಗಳಲ್ಲಿ ಈ ರೀತಿಯ ಮಳಿಗೆಗಳನ್ನು ಆರಂಭಿಸಲಾಗಿದೆ. ಎಲ್ಲ ನಿಲ್ದಾಣಗಳು ಒಂದೇ ಮಾದರಿಯಲ್ಲಿ ಇರಬೇಕು ಎಂದು ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಡಿಸೈನ್ ಮಳಿಗೆಗಳ ವಿನ್ಯಾಸ ಮಾಡಿದೆ. ಈ ಮಳಿಗೆಗಳಲ್ಲಿ ಚನ್ನಪಟ್ಟಣ ಬೊಂಬೆಗಳು, ಮೈಸೂರು ಸ್ಯಾಂಡಲ್ ಉತ್ಪನ್ನಗಳು, ತಿಪಟೂರು ತೆಂಗಿನಕಾಯಿ ಉತ್ಪನ್ನಗಳು, ಗಾಣದ ಎಣ್ಣೆ, ಔಷಧಗಳು, ಇತರೆ ಸಾಂಪ್ರದಾಯಿಕ ವಸ್ತುಗಳು ಲಭ್ಯವಾಗಲಿವೆ.

ಮಹಿಳಾ ಒಕ್ಕೂಟಗಳು, ಮಹಿಳಾ ಸ್ವಸಹಾಯ ಸಂಘಗಳು ಹಾಗೂ ಇನ್ನಿತರರಿಗೆ ಅನುಕೂಲವಾಗಲು ಈ ರೀತಿ ಮಳಿಗೆಗಳನ್ನು ಆರಂಭಿಸಲಾಗಿದೆ ಎಂದು ರೈಲ್ವೆ ಇಲಾಖೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೇ 22ರವರೆಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು, ಮೇ 15–2023–24ನೇ ಸಾಲಿನ ಮೈಸೂರಿನ ರಂಗಸಮುದ್ರ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ಮೇ 2ರಿಂದ 29ರವರೆಗೆ ಪಹಣಿ ಹೊಂದಿರುವ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ (ರೈತರ ಮಕ್ಕಳು) ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ 10 ತಿಂಗಳ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 18ರಿಂದ 30 ವರ್ಷ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 18ರಿಂದ 33 ವರ್ಷ ಹಾಗೂ ಮಾಜಿ ಸೈನಿಕರಿಗೆ 33ರಿಂದ 65 ವರ್ಷದವರೆಗೆ ವಯೋ ಸಡಿಲಿಕೆ ನೀಡಲಾಗಿದೆ. 10 ತಿಂಗಳ ತರಬೇತಿ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಲು ಮೇ 22ರ ಸಂಜೆ 5:30ರವರೆಗೆ ವಿಸ್ತರಿಸಲಾಗಿದೆ. ಅರ್ಜಿ ಫಾರಂಗಳನ್ನು ತೋಟಗಾರಿಕೆ ಉಪನಿರ್ದೇಶಕರು, ಜಿಪಂ ಮೈಸೂರು, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ರಾಜ್ಯ ವಲಯ ಮೈಸೂರು ಕಚೇರಿಯಲ್ಲಿ ಅಥವಾ https://horticulturedir.karnataka. gov.inನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾಹಿತಿಗೆ ನಗರದ ಕರ್ಜನ್ ಪಾರ್ಕ್‌ನಲ್ಲಿರುವ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ (ದೂ.ಸಂ.0821–2977572) ಸಂಪರ್ಕಿಸಿ.

ವಿದ್ಯಾಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 15– ಜವಾಹರ ನವೋದಯ ವಿದ್ಯಾಲಯದಲ್ಲಿ 11ನೇ ತರಗತಿಗಾಗಿ 2023–24ನೇ ಶೈಕ್ಷಣಿಕ ವರ್ಷಕ್ಕಾಗಿ ಖಾಲಿ ಇರುವ ಸ್ಥಾನಗಳ ಪ್ರವೇಶ ಪರೀಕ್ಷೆಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಮೇ 31ರೊಳಗೆ www.navodaya.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಯು 2022–23ನೇ ಸಾಲಿನಲ್ಲಿ 10ನೇ ತರಗತಿಯನ್ನು ಸರ್ಕಾರಿ, ಮಾನ್ಯತೆ, ಸರ್ಕಾರದ ಅನುಮತಿ ಪಡೆದಿರುವ ಮೈಸೂರು ಜಿಲ್ಲೆಯ ಶಾಲೆಯಲ್ಲಿ ಮಾಡಿರಬೇಕು. ವಿದ್ಯಾರ್ಥಿಯು 2006ರ ಜೂನ್ 1ರಿಂದ 2008ರ ಜೂನ್ 31 ರೊಳಗೆ ಜನಿಸಿರಬೇಕು. ಪರೀಕ್ಷೆಯು ಜುಲೈ 22 (ಶನಿವಾರ) ರಂದು ನಡೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ www.navodaya.gov.in ಅಥವಾ ದೂ.ಸಂ. 0821–2970040 ಅನ್ನು ಸಂಪರ್ಕಿಸಬಹುದು ಎಂದು ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿನಯ್ ಕುಲಕರ್ಣಿಗೆ ಡಿಸಿಎಂ ಸ್ಥಾನ ಕೊಡುವಂತೆ ಮುರುಘಾ ಮಠದ ಶ್ರೀ ಒತ್ತಾಯ

ಧಾರವಾಡ: ಧಾರವಾಡ ಗ್ರಾಮೀಣ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಸಾಧಿಸಿರುವ ವಿನಯ್ ಕುಲಕರ್ಣಿಯವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಮುರುಘಾಮಠದ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿನಯ್ ಕುಲಕರ್ಣಿ ಜನಪ್ರಿಯ ಶಾಸಕರು. ಉತ್ತರ ಕರ್ನಾಟಕದ ಪ್ರಬಲ ನಾಯಕರು. ಅವರಿಗೆ ಡಿಸಿಎಂ ಸ್ಥಾನ ನೀಡಿದರೆ ಚೆನ್ನಾಗಿರುತ್ತದೆ. ಇದು ನನ್ನ ಸ್ವಂತ ವಿಚಾರ. ಸಾಮಾಜಿಕವಾಗಿ ನಾನು ನನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ ಎಂದಿದ್ದಾರೆ.

ವಿನಯ್ ಕುಲಕರ್ಣಿ ಮುರುಘಾಮಠದ ಕಾರ್ಯಾಧ್ಯಕ್ಷರು. ಅವರ ಜೊತೆ ಉಳಿದ ಲಿಂಗಾಯತ ಶಾಸಕರಿಗೂ ಒಳ್ಳೆಯ ಸ್ಥಾನಮಾನ ಕೊಡಬೇಕು. ವಿನಯ್ ಕುಲಕರ್ಣಿ ಈ ಹಿಂದೆಯೂ ಸಚಿವರಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಡಿಸಿಎಂ ಸ್ಥಾನ ಕೊಟ್ಟಿದ್ದೇ ಆದಲ್ಲಿ ಅವರು ಇನ್ನೂ ಎತ್ತರಕ್ಕೆ ಬೆಳೆಯಲು ಪುಷ್ಟಿ ನೀಡಿದಂತಾಗುತ್ತದೆ ಎಂದರು.

ನಿಖಿಲ್ ಕುಮಾರಸ್ವಾಮಿಗೆ ಕರೆ ಮಾಡಿ ಸಾಂತ್ವನ ಹೇಳಿದ ಡಿಕೆಶಿ

ರಾಮನಗರ: ರಾಮನಗರ ಕ್ಷೇತ್ರದಲ್ಲಿ ಸೋಲನುಭವಿಸಿದ ನಿಖಿಲ್





ಕುಮಾರಸ್ವಾಮಿಗೆ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಕರೆ ಮಾಡಿ ಸಾಂತ್ವನ ಹೇಳಿದ್ದಾರೆ. ಫೋನ್ ಮೂಲಕ ಸಾಂತ್ವನ ಹೇಳಿದ ಡಿಕೆಶಿ, ನೀನು 2 ಬಾರಿ ಸೋತಿದ್ದೀಯಾ, ಆದರೆ ನಿನಗೆ ರಾಜಕೀಯ ಕುಟುಂಬದ ಹಿನ್ನೆಲೆ ಇದೆ. ನನಗೆ ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದೇ ಇಷ್ಟು ಮಟ್ಟಕ್ಕೆ ಬೆಳೆದಿದ್ದೇನೆ. ಈ ಸೋಲಿನಿಂದ ಕಂಗೆಡಬೇಡ, ಕ್ಷೇತ್ರದಲ್ಲಿ ಓಡಾಟ ನಡೆಸಿ ಜನರ ಜೊತೆ ನಿಲ್ಲಬೇಕು. ಸೋಲಿನಿಂದ ಹತಾಶನಾಗಬೇಡ ಎಂದು ಧೈರ್ಯ ತುಂಬಿದ ಅವರು, ರಾಜಕೀಯದಲ್ಲಿ ಏಳು–ಬೀಳು ಸಹಜ. ಮುಂದಿನ ದಿನಗಳಲ್ಲಿ ನಿನಗೆ ರಾಜಕೀಯದಲ್ಲಿ ಭವಿಷ್ಯ ಇದೆ ಎಂದು ಹಾರೈಸಿದ್ದಾರೆ ಎಂದು ತಿಳಿದು ಬಂದಿದೆ.

ಈ ಬಾರಿಯ ರಾಮನಗರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿಯನ್ನು ಕಾಂಗ್ರೆಸ್ ಅಭ್ಯರ್ಥಿ ಇಕ್ಬಾಲ್ ಹುಸೇನ್ ಪರಾಭವಗೊಳಿಸಿ, ಭರ್ಜರಿ ಗೆಲುವು ದಾಖಲಿಸಿದ್ದರು. ಈ ಹಿಂದೆ ಮಂಡ್ಯ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗಲೂ ಸುಮಲತಾ ವಿರುದ್ಧ ಸೋಲನುಭವಿಸಿದ್ದರು. ಇದೀಗ ಸತತ ಸೋಲಿನಿಂದ ಕಂಗೆಟ್ಟಿದ ನಿಖಿಲ್ ಕುಮಾರಸ್ವಾಮಿಗೆ ಡಿಕೆ ಶಿವಕುಮಾರ್ ಸಮಾಧಾನ ತಿಳಿಸಿದರು.

ಡಾ.ಸುಧಾಕರ್‌ಗೆ ಸೋಲು: ಬೆಂಬಲಿಗ ಆತ್ಮಹತ್ಯೆ

ಚಿಕ್ಕಬಳ್ಳಾಪುರ: ಮಾಜಿ ಆರೋಗ್ಯ ಸಚಿವ ಡಾ.ಸುಧಾಕರ್ ಸೋತಿದ್ದಕ್ಕೆ ಅವರ ಅಭಿಮಾನಿಯೊಬ್ಬ ಆತ್ಮಹತ್ಯೆಗೆ ಶರಣಾದ ಘಟನೆ ತಾಲೂಕಿನ ವಡ್ರೆಪಾಳ್ಯದಲ್ಲಿ ನಡೆದಿದೆ. ಕೋಟೆ ನಿವಾಸಿ ಚಿತ್ತಾರ ವೆಂಕಟೇಶ್ ಆತ್ಮಹತ್ಯೆಗೆ ಶರಣಾದ ಬೆಂಬಲಿಗ. ಈತ ವಡ್ರೆಪಾಳ್ಯದಲ್ಲಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸುಧಾಕರ್ ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿದ್ದರು. ಈ ಬಾರಿಯ ಚುನಾವಣೆಯಲ್ಲಿ ಸುಧಾಕರ್ ಸೋಲನ್ನು ಕಂಡಿದ್ದರು. ಚಿಕ್ಕಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಆಪರೇಷನ್ ಕಮಲದ ಮೂಲಕ ಬಿಜೆಪಿ ಸೇರಿದ್ದ ಸುಧಾಕರ್ ವಿರುದ್ಧ ಕಾಂಗ್ರೆಸ್‌ನ ಪ್ರದೀಪ್ ಈಶ್ವರ್ 10,642 ಮತಗಳ ಅಂತರದಿಂದ ಗೆಲುವು ದಾಖಲಿಸಿದ್ದಾರೆ. ರಾಜಕಾರಣಕ್ಕೆ ಹೊಸದಾಗಿ ಪಾದಾರ್ಪಣೆ ಮಾಡಿ ತಿಂಗಳ ಕಾಲ ಚುನಾವಣಾ ಪ್ರಚಾರ ಮಾಡಿದ್ದ ಪ್ರದೀಪ್ ಈಶ್ವರ್ ಸುಧಾಕರ್ ಅವರನ್ನು ಮಣಿಸಿದ್ದು ಅಚ್ಚರಿಗೆ ಕಾರಣವಾಗಿದೆ.

ನಕ್ಕರೆ ಅದೇ ಸ್ವರ್ಗ

ಅವರು : "ನೀವೇ ನೋಡಿದ್ದೀರಲ್ಲ ನಿನ್ನೆ. ನನ್ನ ಧ್ವನಿ ಹೇಗೆ ಸಭಾ ಭವನದಲ್ಲಿ ತುಂಬಿ ಬಂದಿತ್ತು!"

ಇವರು : "ನೋಡಿದೆ, ಅದಕ್ಕೆ ಸ್ಥಳ ಕೊಡಲೆಂದು ಎಷ್ಟೋ ಜನ ತಮ್ಮ ಸ್ಥಳ ತೆರವು ಮಾಡಿ ಹೊರಗೆ ಹೋದದ್ದನ್ನು ಕೂಡ ನೋಡಿದೆ!"

ಮೈಸೂರು ಮಿತ್ರ

ಮಂಗಳವಾರ, 16 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಬೇಸರಿಸದಿರುವುದು, ದಕ್ಷತೆ ಮತ್ತು ಮಾನಸಿಕ ಸ್ಥೈರ್ಯ
– ಇವು ಕಾರ್ಯಸಿದ್ಧಿಯ ಮೂಲ ಕಾರಣಗಳು –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಅತ್ತರಂತೆ

ನಿಮ್ಮ ಪತ್ರಗಳು

ಇಂದಿಗೂ ಬಸವಣ್ಣನವರ ವಚನಗಳ ಸಾರ ಪ್ರಸ್ತುತ!!

ಮಾನ್ಯರೆ,

ಬಸವಣ್ಣನವರ ವಚನಗಳಲ್ಲಿ ನಡೆ–ನುಡಿ, ನೆನಹುಗಳ ಪುರುಷ, ನೆಲದಿಂದ ಶೂನ್ಯದವರೆಗೆ ಹರಹಿದ ಮನಸ್ಸು ಅವರದು, ಹೃದಯದಲ್ಲಿ ಭಕ್ತಿ ರಸಾಬ್ಧಿ, ನೋಟದಲ್ಲಿ ಕಾರುಣ್ಯ, ಕಳೆ ಕರುಳಿಲ್ಲದ ಅನುರಾಗ, ಮೇರೆ ಇಲ್ಲದ ಲೋಕ ಹಿತಾನುಭವ, ಅವರು ಶ್ರದ್ಧೆಯ ಅಶ್ವವನ್ನೇರಿ ನಿಷ್ಠೆ, ಅವಧಾನ, ಅನುಭವ ಆನಂದಪಥವಿಡಿದು ಶಿವ ಸಾಮರಸ್ಯ ಹೊಂದಿದ ಮಹಾಯೋಗಿ.

ಬಸವಣ್ಣನವರು ಕನ್ನಡದ ಮೊಟ್ಟ ಮೊದಲ ವಚನ ಕ್ರಾಂತಿಯ ಹರಿಕಾರ, ಶರಣರ ಜೀವನಕ್ಕೆ ಹಿಡಿದ ಕೈಗನ್ನಡಿ, ಶರಣರ ಅನುಭಾವದ ಅಕ್ಷರರೂಪ. ಶರಣ ಪಥದಲ್ಲಿ ಸಾಗ ಬಯಸುವ ಪ್ರತಿಯೊಬ್ಬ ಪಥಿಕನ ದಾರಿದೀಪಗಳು. ಮೌಢ್ಯದ ಕೊಳೆಯನ್ನು ತೊಳೆಯುವ, ಅಂಧಕಾರದ ಮನಕ್ಕೆ ಅಂಟಿದ ಕಿಲುಬನ್ನು ತೊಳೆದು, ಸ್ವಚ್ಛಗೊಳಿಸಿ ಫಳಫಳ ಹೊಳೆಯುವಂತೆ ಮಾಡಬಲ್ಲ ವಿಚಾರ ತರಂಗಿಣಿಗಳು. ಅಂತಹ ವಚನಗಳನ್ನು ಪ್ರತಿಯೊಬ್ಬರು ಓದಿ ಸರಿಯಾಗಿ ಅರ್ಥ ಮಾಡಿಕೊಂಡು ಅವುಗಳ ಸಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದುದು ಬಸವ ಪಥಿಕರ ಆದ್ಯ ಕರ್ತವ್ಯವಾಗಿದೆ. ಬಸವಣ್ಣನವರ ವಚನಗಳು ತುಂಬಾ ಆಳ ಮತ್ತು ವಿಜ್ಞಾನಕ್ಕೆ ಹತ್ತಿರವಾಗಿವೆ, ಮನುಷ್ಯನ ವ್ಯಕ್ತಿತ್ವ ವಿಕಸನಕ್ಕೆ ದಾರಿದೀಪವಾಗಿವೆ. ಸಮಾಜದಲ್ಲಿ ಅಂದಿನ ಕಾಲದಲ್ಲಿ ನಡೆಯುತ್ತಿದ್ದ ಘಟನೆಗಳನ್ನು, ಅನುಭವಗಳನ್ನು ಮೂಢನಂಬಿಕೆಗಳನ್ನು, ಅನಿಷ್ಟ ಪದ್ಧತಿಗಳನ್ನು, ಆಧರಿಸುವುದರ ಮೂಲಕ ಎಲ್ಲರಿಗೂ ಅರ್ಥವಾಗುವಂತೆ ಸುಲಭವಾಗಿ ಪ್ರಸ್ತುತಪಡಿಸಿದ್ದಾರೆ. ಈ ವಚನಗಳು ಯಾವುದೇ ಜಾತಿ, ಧರ್ಮ, ಪಂಥಗಳಿಗೆ ಸೀಮಿತವಾಗದೆ, ಎಂದೆಂದಿಗೂ ಸಕಾಲಿಕ, ವಾಸ್ತವಿಕ, ಕಟುಸತ್ಯವಾಗಿರುತ್ತವೆ ಎಂದು ಹೇಳಬಹುದು, ಇಂದಿನ ಸುಖ, ಶಾಂತಿ, ನೆಮ್ಮದಿಯ ಜೀವನಕ್ಕಾಗಿ ಬಸವಣ್ಣನವರ ವಚನಗಳು ಪ್ರಸ್ತುತವಾಗಿದ್ದು, ಎಲ್ಲರೂ ಅವುಗಳನ್ನು ಚೆನ್ನಾಗಿ ಓದಿ, ತಾತ್ಪರ್ಯವನ್ನು ಅರ್ಥ ಮಾಡಿಕೊಂಡು, ಜೀವನದಲ್ಲಿ ಅಳವಡಿಸಿಕೊಂಡು ಜೀವನ ಮತ್ತು ಸಮಾಜವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಎಲ್ಲರೂ ಒಂದಾಗಿ ಕೈಜೋಡಿಸೋಣ...

– ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು.

ನ್ಯಾಯಾಂಗ ವ್ಯವಸ್ಥೆಗೂ ಕೈ ಹಾಕಿದ ಸರ್ಕಾರ

ಮಾನ್ಯರೆ

ಗುಜರಾತ್ ಸರ್ಕಾರ ತನ್ನ ಅಧಿಕಾರ ವ್ಯಾಪ್ತಿಗೆ ಬರದಿದ್ದರೂ 68 ಜಡ್ಜ್‌ಗಳಿಗೆ ಪದೋನ್ನತಿ ನೀಡಿದೆ ಎಂದು ಮಾಧ್ಯಮಗಳಲ್ಲಿ ಪ್ರಸಾರವಾಗಿದೆ.

ನ್ಯಾಯಾಂಗ ಅಧಿಕಾರಿಗಳ ಬಡ್ತಿಗೆ, ಅದರದೇ ಆದ ಸೇವಾ ನಿಯಮಗಳಿವೆ. ಅದರಂತೆ ಬಡ್ತಿ ಪ್ರಕ್ರಿಯೆಗಳು ನಡೆಯುತ್ತವೆ. ಆದರೆ ಗುಜರಾತ್ ಸರ್ಕಾರ ಆ ಸೇವಾ ನಿಯಮಗಳನ್ನು ಉಲ್ಲಂಘಿಸಿ, ಗುಜರಾತ್‌ನ 68 ಕೆಳಹಂತದ ನ್ಯಾಯಾಂಗ ಅಧಿಕಾರಿಗಳಿಗೆ ಬಡ್ತಿ ನೀಡಿದ ಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶ ಕೇಡರ್ ಅಧಿಕಾರಿಗಳು, ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದು, ಇದಕ್ಕೆ ಸಂಬಂಧಪಟ್ಟಂತೆ, ಸುಪ್ರೀಂಕೋರ್ಟ್, ಗುಜರಾತ್ ಸರ್ಕಾರ ಮತ್ತು ಹೈಕೋರ್ಟ್ ರಿಜಿಸ್ಟ್ರಾರ್‌ಗೆ ನೋಟೀಸ್ ಜಾರಿಮಾಡಿ, ಪದೋನ್ನತಿ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿತ್ತು.

ಸರ್ಕಾರ ಸುಪ್ರೀಂ ಆಕ್ಷೇಪದ ನಡುವೆಯೂ ಪದೋನ್ನತಿ ಆದೇಶ ಹೊರಡಿಸಿದೆ. ಸರ್ಕಾರದ ಈ ಆದೇಶದ ಬಗ್ಗೆ ಸುಪ್ರೀಂಕೋರ್ಟ್, ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿ, ಸದರಿ ಪ್ರಕರಣ ಸುಪ್ರೀಂಕೋರ್ಟ್ ಅಂಗಳದಲ್ಲಿದೆ ಎಂಬ ಅರಿವಿದ್ದರೂ ಸರ್ಕಾರ ಪದೋನ್ನತಿ ಆದೇಶ ನೀಡಿರುವುದು ದುರದೃಷ್ಟಕರ ಎಂಬ ಒಕ್ಕಣೆಯೊಂದಿಗೆ ನೀಡಿರುವ ತಡೆಯಾಜ್ಞೆ ಸರ್ಕಾರಕ್ಕೆ ತಪರಾಕಿ ಕೊಟ್ಟಂತೆ ಆಗಿದೆ. ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಪ್ರಜಾಪ್ರಭುತ್ವದ ಮೂರು ಅಂಗಗಳು, ಆದರೆ ಈ ಅಂಗಗಳಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗದ ಮೇಲೆ ಜನ ನಂಬಿಕೆ ಕಳೆದುಕೊಂಡಿದ್ದಾರೆ. ಉಳಿದಿರುವ ನಂಬಿಕೆ ಎಂದರೆ ನ್ಯಾಯಾಂಗ, ಆದರೆ ಸರ್ಕಾರಗಳು ತಮ್ಮ ಸ್ವಾರ್ಥಕ್ಕಾಗಿ ನ್ಯಾಯಾಂಗವನ್ನು ಮಲಿನ ಮಾಡಲು ಹೊರಟಿರುವುದು ಅಕ್ಷಮ್ಯ.

ಒಂದು ವೇಳೆ ನ್ಯಾಯಾಂಗ ಕಲುಷಿತಗೊಂಡರೆ ದೇಶದಲ್ಲಿ ಅರಾಜಕತೆ ಉಂಟಾಗುತ್ತದೆ. ಸರ್ಕಾರದ ಈ ಕ್ರಮವನ್ನು ನಾಗರಿಕರು ಗಮನಿಸುತ್ತಿದ್ದಾರೆ. ಈ ದೇಶದ ಒಬ್ಬ ಪ್ರಭಾವಿ ವ್ಯಕ್ತಿಗೆ ಈ ದೇಶದ ಜನರ ಪೂರ್ಣ ಬೆಂಬಲವಿದೆ ಎಂಬ ಮನೋಭಾವದಿಂದ ತಮ್ಮಿಷ್ಟ ಬಂದಂತೆ ವರ್ತಿಸುತ್ತಿದ್ದರೆ, ಅದಕ್ಕೆ ತಕ್ಕ ಪಾಠವನ್ನು ಕರ್ನಾಟಕದ ಪ್ರಜ್ಞಾವಂತ ಮತದಾರ ನಿನ್ನೆ ನಡೆದ ಚುನಾವಣೆಯಲ್ಲಿ ತೋರಿಸಿಕೊಟ್ಟಿದ್ದಾನೆ. ಆದುದರಿಂದ ಒಬ್ಬ ವ್ಯಕ್ತಿ ಪ್ರಭಾವಿಯೆಂದು ಭಾವಿಸಿ ಆತನ ಪ್ರಭಾವ ಬಳಸಿಕೊಂಡು ತಮ್ಮಿಷ್ಟ ಬಂದಂತೆ ಮತ್ತು ತಮ್ಮ ವ್ಯಾಪ್ತಿಗೆ ಬರದಿದ್ದರೂ ಅದರಲ್ಲಿ ತಲೆ ತೂರಿಸಲು ಹೋದರೆ ಮುಖಭಂಗ ಆಗುತ್ತದೆ ಎಂಬ ಅರಿವು ಆಳುವ ಸರ್ಕಾರಗಳಿಗೆ ಇರಬೇಕು, ಇಲ್ಲದಿದ್ದರೆ ಜನತಾ ಜನಾರ್ಧನ ತನ್ನ ಕೋರ್ಟಿನಲ್ಲಿ ಸರಿಯಾದ ನ್ಯಾಯದಾನ ನೀಡುತ್ತಾನೆ ಎಂಬುದಕ್ಕೆ ಕರ್ನಾಟಕವೇ ನಿದರ್ಶನ.

– ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಕಡಿಮೆ ಅಂತರದಿಂದ ಸೋತವರ ಮತ ಮರು ಎಣಿಕೆಯಾಗಲಿ

ಮಾನ್ಯರೆ,

ಇದೇ 13 ರಂದು ನಡೆದ ಮತಗಳ ಎಣಿಕೆಯಲ್ಲಿ ಬೆಂಗಳೂರಿನ ಜಯನಗರ ವಿಧಾನಸಭಾ ಕ್ಷೇತ್ರದ ಮತಗಳ ಎಣಿಕೆ ಕಾರ್ಯ ಮುಕ್ತಾಯವಾದಾಗ ಅಲ್ಲಿನ ಎಣಿಕಾಧಿಕಾರಿಗಳು, 160 ಮತಗಳಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸೌಮ್ಯ ರೆಡ್ಡಿಯವರು ಜಯಗಳಿಸಿದ್ದಾರೆಂದು ಘೋಷಣೆ ಮಾಡಿದ್ದರು.

ಇದನ್ನು ಪ್ರಶ್ನಿಸಿ ಬಿಜೆಪಿ ಅಭ್ಯರ್ಥಿ ಸಿ.ಕೆ.ರಾಮಮೂರ್ತಿಯವರು ಮರು–ಎಣಿಕೆಗೆ ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದರು. ಮರು–ಎಣಿಕೆ ಕಾರ್ಯ ಮುಗಿದ ನಂತರ ಅಲ್ಲಿನ ಎಣಿಕಾಧಿಕಾರಿಗಳು ಬಿಜೆಪಿ ಅಭ್ಯರ್ಥಿ ಸಿ.ಕೆ.ರಾಮಮೂರ್ತಿಯವರು 16 ಮತಗಳಿಂದ ಜಯ ಗಳಿಸಿದ್ದಾರೆಂದು ಮತ್ತೆ ಘೋಷಣೆ ಮಾಡಿದ್ದಾರೆ.

ಇದು ಎಣಿಕಾ ಸಿಬ್ಬಂದಿಗಳ ಮತ್ತು ಅಲ್ಲಿನ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನಕ್ಕೆ ಕಾರಣವೋ ಅಥವಾ ಏನಾದರೂ ಗೋಲ್‌ಮಾಲ್ ನಡೆದಿರಬಹುದೇ. ಇಂತಹ ನಿರ್ಲಕ್ಷ್ಯ ಅಧಿಕಾರಿಗಳ ವಿರುದ್ಧವೇಕೆ ಚುನಾವಣಾ ಆಯೋಗ ಕ್ರಮ ಕೈಗೊಳ್ಳಬಾರದು.

ಒಂದು ವೇಳೆ ಮರು–ಎಣಿಕೆ ಮನವಿ ಮಾಡದಿದ್ದರೆ, ಫಲಿತಾಂಶವೇ ಏರುಪೇರು ಆಗುವ ಸಾಧ್ಯತೆ ಇತ್ತು. ಈಗಲೂ ಚುನಾವಣಾ ಫಲಿತಾಂಶದ ವೆಬ್‌ಸೈಟ್‌ನಲ್ಲಿ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ 294 ಮತಗಳಿಂದ ಮುಂದಿದ್ದಾರೆ ಎಂದು ತೋರಿಸುತ್ತಿದೆ. ಇದು ಒಂದಕ್ಕೊಂದು ತಾಳೆಯಾಗುವುದೇ ಇಲ್ಲ. ಭಾರತ ಚುನಾವಣಾ ಆಯೋಗಕ್ಕೆ ನನ್ನದೊಂದು ಮನವಿ, 1000 ಮತಗಳ ಅಂತರದಿಂದ ಸೋತ ಎಲ್ಲಾ ಪಕ್ಷದ ಅಭ್ಯರ್ಥಿಗಳ ಮನವಿ ಮೇರೆಗೆ ಮರು–ಎಣಿಕೆ ನಡೆಯುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು

ತಿದ್ದುಪಡಿ ಹಾಗೂ ಸ್ಪಷ್ಟನೆ

'ಮೈಸೂರು ಮಿತ್ರ' ಭಾನುವಾರದ ಸಂಚಿಕೆಯ 10ನೇ ಪುಟದಲ್ಲಿ ಪ್ರಕಟವಾಗಿರುವ ಫಲಿತಾಂಶದಲ್ಲಿ ಹಾಸನದಲ್ಲಿ ಕಾಂಗ್ರೆಸ್ ನಾಲ್ಕು ಸ್ಥಾನವನ್ನು ಗೆದ್ದಿದೆ ಎಂದು ಪ್ರಕಟವಾಗಿದ್ದು, ಅದನ್ನು ಒಂದು ಸ್ಥಾನ ಎಂದು ಓದಿಕೊಳ್ಳುವುದು. ಹಾಸನ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಜೆಡಿಎಸ್–4 (ಹಾಸನ, ಹೊಳೆನರಸೀಪುರ, ಅರಕಲಗೂಡು, ಶ್ರವಣಬೆಳಗೊಳ), ಬಿಜೆಪಿ–2 (ಬೇಲೂರು, ಸಕಲೇಶಪುರ) ಹಾಗೂ ಕಾಂಗ್ರೆಸ್ –1 (ಅರಸೀಕೆರೆ) ಸ್ಥಾನ ಗಳಿಸಿವೆ. –ಸಂ.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಇಡ್ಲಿ–ವಡೆಯ ಡೆಡ್ಲಿ ಕಥೆ!

ಕೆಲವು ಯಶಸ್ವೀ ಉದ್ಯಮಿಗಳು ರಾತ್ರಿ ಕಳೆದು ಬೆಳಗಾಗುವುದರೊಳಗೆ ದಿಢೀರ್ ಅಂತ ಬೆಳೆದುಬಿಡುವುದಿಲ್ಲ. ತಮ್ಮ ಆರ್ಥಿಕ ಬಲದ ಅಭಿವೃದ್ಧಿಗೆ ಸಾಕಷ್ಟು ಹಿಟ್ಟು ರುಬ್ಬಿರುತ್ತಾರೆ. ಅಂದರೆ ಕಷ್ಟಪಟ್ಟಿರುತ್ತಾರೆ ಎಂದರ್ಥ. ಹಿಟ್ಟು ರುಬ್ಬುವುದು ಎಂದ ಕೂಡಲೇ ನನಗೆ ದೋಸೆ ಹಿಟ್ಟು ನೆನಪಾಯಿತು. ದೋಸೆ ಹಿಟ್ಟು ರುಬ್ಬಿ ದೋಸೆ ಕಿಂಗ್ ಎನ್ನಿಸಿಕೊಂಡ ತಮಿಳುನಾಡಿನ ರಾಜಗೋಪಾಲ್ ಎಂಬ ಶ್ರೀಮಂತ ಉದ್ಯಮಿಯ ಕತೆಯಿದು. ಕೇಳಿ!

ಇತ್ತೀಚೆಗೆ ಕೆಲಸದ ನಿಮಿತ್ತ ತಮಿಳುನಾಡಿಗೆ ಹೋಗಿದ್ದೆ. ಚೆನ್ನೈನಲ್ಲಿ ಊಟಕ್ಕಾಗಿ ಶರವಣ ಭವನಕ್ಕೆ ಹೋಗಿದ್ದೆ. 'ಶರವಣ ಭವನ್' ಎಂಬ ಹೋಟೆಲಿನ ಹೆಸರನ್ನು ಅಲ್ಲಿ ಕೇಳದವರಿಲ್ಲ. ಅಷ್ಟು ಜನಜನಿತವಾದ ಹೋಟೆಲು ಅದು. ಅದರ ಮಾಲೀಕರ ಹೆಸರು ರಾಜಗೋಪಾಲ್. ತಮಿಳುನಾಡಿನಲ್ಲಿ ಆತ ಈರುಳ್ಳಿ ವ್ಯಾಪಾರಿಯೊಬ್ಬರ ಮಗ. ಈ ಮನುಷ್ಯನ ಅಸಲಿ ಕತೆಯೇ ರೋಚಕ. ಆದರೆ ಅಂತ್ಯ ಮಾತ್ರ ದುರಂತ. ತನ್ನ ಕೊನೆಗಾಲದಲ್ಲಿ ಆತ ಕಂಡ ದುಃಖದ ಸಾಮ್ರಾಜ್ಯಕ್ಕೆ ಆತ ನಂಬಿ ಕೂತ ಜ್ಯೋತಿಷ್ಯ ಕಾರಣವಾಯ್ತು.



ಯಾವತ್ತಿಗೂ ಯಶಸ್ಸಿನ ಏಣಿಗೆ ಮೆಟ್ಟಿಲುಗಳಿವೆಯೇ ಹೊರತು ನಿಲ್ದಾಣವಿಲ್ಲ. ಒಮ್ಮೆ ಹತ್ತಲು ಶುರು ಮಾಡಿದೆವೆಂದರೆ ದಣಿವರಿಯದೆ ಹತ್ತುತ್ತಿರಬೇಕು. ಹತ್ತಿದ ಮೇಲೂ ವಿವೇಕವಿದ್ದರೆ ನಿಂತ ಜಾಗವನ್ನು ಎಚ್ಚರಿಕೆಯಿಂದ ಉಳಿಸಿಕೊಳ್ಳಬೇಕು. 'ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬರದು' ಎನ್ನುವ ಗಾದೆ ಮಾತಿನ ಹಾಗೆ ಎಷ್ಟೋ ಜನ ಏಣಿ ಹತ್ತಿದ ಮೇಲೆ ತಾವು ಮಾಡಿಕೊಳ್ಳುವ ಅವಿವೇಕದ ಪರಮಾವಧಿಗೆ ಬಲಿಯಾಗಿ, ಅಲ್ಲಿಯವರೆಗೆ ಜತನದಿಂದ ಜೋಪಾನವಾಗಿ ಗಳಿಸಿದ್ದ ಗೌರವ ಕಳೆದುಕೊಳ್ಳುತ್ತಾರೆ. ಮಾನಹಾನಿಗೊಳಗಾಗುತ್ತಾರೆ. ಕಷ್ಟ ಪರಂಪರೆಯನ್ನೇ ಮೈಮೇಲೆ ಎಳೆದುಕೊಂಡು ಕಡೆಗೆ ಜೀವವನ್ನೇ ಪಣಕ್ಕಿಟ್ಟುಬಿಡುತ್ತಾರೆ.

1979ರಲ್ಲಿ ಚೆನ್ನೈನ ಕೆ.ಕೆ.ನಗರದಲ್ಲಿ ಕಿರಾಣಿ ಅಂಗಡಿ ನಡೆಸುತ್ತಿದ್ದ ಈತ, ಅಂಗಡಿಯ ಗಲ್ಲಾಪೆಟ್ಟಿಗೆಯ ಮೇಲೆ ಕೂತು ವ್ಯಾಪಾರ ಮಾಡುತ್ತಿದ್ದ. ಮನೆ ಮನೆಗೆ ತೆರಳಿ ವ್ಯಾಪಾರ ಮಾಡುವ ಸೇಲ್ಸ್‌ಮನ್ ಒಬ್ಬ ಊಟಕ್ಕಾಗಿ ಹೋಟೆಲೊಂದನ್ನು ಹುಡುಕುತ್ತಾ ಅಲೆದಾಡುತ್ತಿದ್ದ. ಕಿರಾಣಿ ಅಂಗಡಿಯಲ್ಲಿ ಕುಳಿತಿದ್ದ ಈ ರಾಜಗೋಪಾಲರನ್ನು ಆತ ಇಲ್ಲೇಲ್ಲಾದರೂ ಊಟದ ಹೋಟೆಲಿದ್ಯಾ ಎಂದು ಕೇಳಿದ್ದಾನೆ. ಆದರೆ ಆ ರಸ್ತೆಯಲ್ಲಿ ಎಲ್ಲಿಯೂ ಊಟದ ಹೋಟೆಲ್ ಇರಲಿಲ್ಲ. ಅಷ್ಟೇ ನೋಡಿ ವಿಷಯ! ಊಟಕ್ಕಾಗಿ ಅಲೆದಾಡುತ್ತಿದ್ದ ಅನಾಮಿಕರ ಅವಶ್ಯಕತೆಯನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಈ ರಾಜಗೋಪಾಲ್ ಮನಸ್ಸು ಮಾಡಿದ! ಆಗ ಹುಟ್ಟಿಕೊಂಡಿದ್ದೇ ಈ 'ಶರವಣ ಭವನ್'.

ಇಂಗ್ಲಿಷ್‌ನಲ್ಲಿ ಒಂದು ಮಾತಿದೆ. 'Necessity is the mother of an invention' ಅಂತ. ಅವಶ್ಯಕತೆಯಿದ್ದರೆ ಮಾತ್ರ ಹುಡುಕಾಟ ಸಾಧ್ಯ. ಆದರೆ ಈ ರಾಜಗೋಪಾಲ್ ವಿಷಯದಲ್ಲಿ ಅದು ಹೇಗಾಯಿತು ಎಂದರೆ ಅವಶ್ಯಕತೆಯಿರುವ ಸಂಗತಿಯೊಂದು ಗುರುತಾಗುತ್ತಿದ್ದಂತೆ ಅದರ ಬೆನ್ನು ಬಿದ್ದು ಅದನ್ನು ಪೂರೈಸಿಕೊಳ್ಳುವ ಮಟ್ಟಕ್ಕೆ ಆತನನ್ನು ತಂದು ನಿಲ್ಲಿಸಿತ್ತು. ಯಾವ ಮಟ್ಟಕ್ಕೆ ಆತ ಹೋಟೆಲುಗಳನ್ನು ಕಟ್ಟಿದ ಎಂದರೆ, ಈರುಳ್ಳಿ ಮಾರಿಕೊಂಡಿದ್ದ ಸಾಮಾನ್ಯ ವ್ಯಾಪಾರಿಯೊಬ್ಬ ಹೋಟೆಲುಗಳ ಸಾಮ್ರಾಜ್ಯ ಕಟ್ಟಿದ. ಕೇವಲ ಚೆನ್ನೈಗಷ್ಟೇ ಆತ ಸೀಮಿತವಾಗದೆ, ಆತನ ಬ್ರಾಂಚುಗಳು ಇವತ್ತಿಗೂ ಲಂಡನ್, ಸಿಂಗಾಪುರ, ಸ್ಟಾಕ್‌ಹೋಮ್, ಸಿಡ್ನಿ ಸೇರಿದಂತೆ ಹತ್ತಾರು ದೇಶಗಳಲ್ಲಿ ತಲೆಯೆತ್ತಿವೆ.

ಒಬೆರಾಯ್ ಗ್ರೂಪ್ ಆಫ್ ಕಂಪನಿಯ ಮಾಲೀಕ ಕೂಡ ಹೀಗೆಯೇ. ಸಿಮ್ಲಾದ ಹೋಟೆಲೊಂದರಲ್ಲಿ ಸಾಮಾನ್ಯ ವೇಟರ್ ಆಗಿದ್ದ ಒಬೆರಾಯ್, ಮುಂದೆ ಹೋಟೆಲ್ ಸಾಮ್ರಾಜ್ಯದ ಒಡೆಯನಾದ ಕತೆ ಕೂಡ ಹೀಗೆಯೇ ರೋಚಕವಾಗಿ ಸಾಗುತ್ತದೆ. ಆದರೆ ಅವರ್‍ಯಾರೂ ಈ ರಾಜಗೋಪಾಲ್ ಥರ ತಮ್ಮ ಬದುಕನ್ನು ದುರಂತದ ಅಂಚಿಗೆ ತಂದುಕೊಳ್ಳಲಿಲ್ಲ. ದೋಸೆ ಮಾಡಿದ ಕೈಚಳಕ ತನ್ನ ಬದುಕಿನ ರೇಖಾಚಿತ್ರ ಬರೆದುಕೊಳ್ಳುವಲ್ಲಿ ಸೋತುಹೋಯ್ತು. ಅದಕ್ಕೆ ಕಾರಣ ಆತ ನಂಬಿದ ವಿಪರೀತದ ಜ್ಯೋತಿಷ್ಯದ ಸಂಗತಿಗಳು.

ಕಾರಣ ಇಷ್ಟೆ: ಚೆನ್ನೈನ ಕೆ.ಕೆ.ನಗರದ ಕಿರಾಣಿ ಅಂಗಡಿಯಲ್ಲಿ ಈ ಹೋಟೆಲಿನ ಐಡಿಯಾ ಹುಟ್ಟುತ್ತಿದ್ದಂತೆ ರಾಜಗೋಪಾಲ್ ಜ್ಯೋತಿಷ್ಯದ ಮೊರೆ ಹೋಗಿದ್ದಾನೆ. ಆಗ ಆ ಜ್ಯೋತಿಷಿ ಬೆಂಕಿಯಿಂದ ಮಾಡುವ ಯಾವುದಾದರೂ ಒಂದು ವ್ಯಾಪಾರ ಮಾಡಿದರೆ ನೀನು ಉದ್ಧಾರವಾಗಿ ಹೋಗುತ್ತೀಯಾ ಎಂಬ ಮಾತು ಹೇಳಿದ್ದಾರೆ. ಅದೇ ಸಮಯಕ್ಕೆ ಸರಿಯಾಗಿ ಕಾಮಾಕ್ಷಿ ಭವನವೆಂಬ ಚಿಕ್ಕ ಹೋಟೆಲೊಂದು ನಷ್ಟ ಅನುಭವಿಸಿ ಮುಚ್ಚುವ ಹಂತದಲ್ಲಿತ್ತು. ಅದರ ಮಾಲೀಕನಿಂದ ಆ ಕಾಮಾಕ್ಷಿಭವನವೆಂಬ ನಷ್ಟದ ಹೋಟೆಲನ್ನು ಖರೀದಿಗೆ ಪಡೆದು ಅದರ ಹೆಸರನ್ನು 'ಶರವಣ ಭವನ' ಎಂದು ಬದಲಾಯಿಸಿದ ಈ ರಾಜಗೋಪಾಲ್! ಆ ಸಂದರ್ಭದಲ್ಲಿ ಗೆಳೆಯನೊಬ್ಬ ಪುಕ್ಕಟೆ ಸಲಹೆ ಕೊಟ್ಟ. ಅಗ್ಗದ ಬೆಲೆಯ ಅಡುಗೆ ಪದಾರ್ಥಗಳನ್ನು ಬಳಸಿ ಹೋಟೆಲು ನಡೆಸಿ ಜೇಬು ತುಂಬಿಸಿಕೊಳ್ಳುವಂತೆ ಹೇಳಿಕೊಟ್ಟ. ಆ ಗೆಳೆಯ ಹೇಳಿಕೊಟ್ಟ ಮಾತಿಗೆ ವಿರುದ್ಧ ದಿಕ್ಕಿನಲ್ಲಿ ಚಲಿಸಿದ ರಾಜಗೋಪಾಲ್ ಅಗ್ಗದ ಅಡುಗೆ ವಸ್ತುಗಳ ಬದಲಿಗೆ ತನ್ನ ಹೋಟೆಲಿನಲ್ಲಿ ಗುಣಮಟ್ಟದ ತರಕಾರಿ, ಎಣ್ಣೆ, ಕಾಯಿಪಲ್ಲೆಗಳನ್ನು ಬಳಸಿದ. ನೌಕರರಿಗೆ ಖುಷಿಯಾಗುವಷ್ಟು ಸಂಬಳ ಕೊಟ್ಟ. ಒಟ್ಟಾರೆ 'ಕ್ವಾಲಿಟಿ' ಆತನ ಮೊದಲ ಆದ್ಯತೆಯಾಯಿತು.

ನಿತ್ಯ ಓಡಾಡುವ ಜನಕ್ಕೆ ಹೋಟೆಲಿನಲ್ಲಿ, ಮನೆ ಊಟ ಸಿಗುವಂತೆ ಕಂಡಿತು. ಇಷ್ಟು ಸಾಕಲ್ಲ! ಬಂಡಿ ಓಡಲಿಕ್ಕೆ! ನಾಲಿಗೆಯ ಮೇಲೆ ನಲಿದಾಡಿದ ರುಚಿಯ ರಸವತ್ತು ಕೇವಲ ನೂರು, ಸಾವಿರಗಳಲ್ಲಿದ್ದ ಆತನ ಹೋಟೆಲ್ ವ್ಯವಹಾರವನ್ನು ಕೋಟಿಗಳಿಗೆ ಏರಿಸಿಬಿಟ್ಟಿತ್ತು. ಭಾರತದಲ್ಲಿ 30 ಹೋಟೆಲ್‌ಗಳು, ಅಮೆರಿಕಾ, ಯೂರೋಪ್, ಆಸ್ಟ್ರೇಲಿಯಾ, ಗಲ್ಫ್ ರಾಷ್ಟ್ರಗಳಲ್ಲಿ ಎಪ್ಪತ್ತಕ್ಕೂ ಹೆಚ್ಚು 'ಶರವಣ ಭವನ' ಹೆಸರಿನ ಹೋಟೆಲುಗಳು ತಲೆ ಎತ್ತಿ ನಿಂತುಬಿಟ್ಟವು! ಹೀಗೆ ಬಡತನದಿಂದ ಬಂದ ವ್ಯಕ್ತಿಯೊಬ್ಬ ತನ್ನ ಅವಿರತ ದುಡಿಮೆಯ ಫಲವಾಗಿ ಬೆಳೆಯುತ್ತಾ ಹೋದ ಅದ್ಭುತವೇ ರೋಚಕ! ಆದರೆ ಮುಂದಿನದು ಮಾತ್ರ ದುರಂತ.

ಆತ ತನ್ನ ಎಲ್ಲಾ ಏಳಿಗೆಯ ಮೂಲದಲ್ಲಿ ಆ ಗುರೂಜಿಯ ಜ್ಯೋತಿಷ್ಯದ ಕರಾಮತ್ತಿದೆ ಎಂದು ನಂಬಿದ. ತನ್ನ ಬೆವರಿನ ಶ್ರಮಕ್ಕೆ ಬೇರೆಯದೇ ಅರ್ಥ ಕೊಟ್ಟುಕೊಂಡ. ಮುಂದೆ ಈ ಕುಬೇರನ ಅಂತ್ಯಕ್ಕೆ ಅದೇ ಜ್ಯೋತಿಷಿಯ ಎರಡನೇ ಮಾತೇ ಮರಣ ಮೃದಂಗ ಬಾರಿಸುತ್ತಿತ್ತು. ಬೆಂಕಿಯಿಂದ ಬೆಳೆಯುತ್ತೀಯೇ ಎಂದಿದ್ದ ಅದೇ ಜ್ಯೋತಿಷಿ 2000ನೇ ಇಸವಿಯಲ್ಲಿ ಈ ರಾಜಗೋಪಾಲ್‌ಗೆ ಒಂದು ಮಾತು ಹೇಳಿದರು. ಎಡಗೆನ್ನೆಯ ಮೇಲೆ ಮಚ್ಚೆಯಿರುವ, ಇನ್ನೂ ಇಪ್ಪತ್ತು ವರ್ಷವೂ ತುಂಬದ ಹುಡುಗಿಯೊಬ್ಬಳಿದ್ದಾಳೆ ಅವಳನ್ನು ಹುಡುಕಿ ತಂದು ನೀನು ಮದುವೆಯಾಗು, ನಿನ್ನ ವ್ಯಾಪಾರ ವಹಿವಾಟು ಲಕ್ಷ ಕೋಟಿಗಳಲ್ಲಿ ಹರಿದಾಡುತ್ತದೆ. ಆಗ ನೋಡು ನೀನು ಹಣದ ಕೊಪ್ಪರಿಕೆಯ ಮೇಲೆ ಮಲಗುತ್ತೀಯೆ ಎಂದರು.

ಅಷ್ಟೊತ್ತಿಗಾಗಲೇ ಆತನಿಗೆ ಎರಡು ಸಂಸಾರ ಗಳಿದ್ದವು. ಇಬ್ಬರು ಹೆಂಡತಿಯರಿದ್ದರು. ಆತನಿಗೂ ವಯಸ್ಸಾಗಿತ್ತು. ಆದರೂ ಹಣದ ಮೇಲಿನ ವ್ಯಾಮೋಹ, ಜ್ಯೋತಿಷಿಯ ಮಾತು, ಇಪ್ಪತ್ತರ ಹರೆಯದ ಹುಡುಗಿಯ ಸುಖದ ಅಮಲು ಈ ಆಸಾಮಿಯನ್ನು ಸಾವಿನಂಚಿಗೆ ತಂದು ನಿಲ್ಲಿಸಿ ಭ್ರಮೆ ಹುಟ್ಟಿಸುತ್ತಿದ್ದವು. ಹಾಗೆ ಇನ್ನೂ ಇಪ್ಪತ್ತು ತುಂಬದ ಎಡಗೆನ್ನೆಯ ಮೇಲೆ ಮಚ್ಚೆಯಿರುವ ಹುಡುಗಿಯೊಬ್ಬಳ ಹುಡುಕಾಟದಲ್ಲಿರುವಾಗ ಕಂಡವನೇ ಶರವಣ ಭವನದ ಚೆನ್ನೈನ ಬ್ರಾಂಚ್ ಮ್ಯಾನೇಜರ್! ಆತನ ಮಗಳ ಎಡ ಕೆನ್ನೆಯ ಮೇಲೆ ಎದ್ದು ಕಾಣುವ ಕಪ್ಪು ಮಚ್ಚೆಯಿತ್ತು. ವಯಸ್ಸಿನ್ನೂ ಇಪ್ಪತ್ತು ತುಂಬಿರಲಿಲ್ಲ. ಹುಡುಗಿ ನೋಡುವುದಕ್ಕೂ ಸುಂದರವಾಗಿದ್ದಳು. ಆಕೆಯ ಹೆಸರು ಜೀವಜ್ಯೋತಿ.

ಶರವಣ ಭವನದ ಮಾಲೀಕ ಅವರ ಅಪ್ಪನ ಮೂಲಕವೇ ಮದುವೆ ಪ್ರಸ್ತಾಪವಿಟ್ಟ. ಆದರೆ ವಯಸ್ಸಿನಲ್ಲಿ ಅಜಗಜಾಂತರ ವ್ಯತ್ಯಾಸವಿದ್ದ ಆತನನ್ನು ಆಕೆ ತಿರಸ್ಕರಿಸಿದಳು. ತಾನು ಇಷ್ಟಪಟ್ಟ ಶಾಂತ ಕುಮಾರ್ ಎಂಬ ಹುಡುಗನನ್ನು ಮದುವೆಯಾದಳು. ಪ್ರಕರಣ ಇಲ್ಲಿಗೆ ಮುಗಿದಿದ್ದರೆ ವ್ಯಕ್ತಿಯೊಬ್ಬನ ಆರ್ಥಿಕಾಭಿವೃದ್ಧಿಯ ಯಶೋಗಾಥೆ ಸುಖಾಂತ್ಯವಾಗುತ್ತಿತ್ತೇನೋ! ಆದರೆ ಅದು ಇಲ್ಲಿಗೇ ಮುಗಿಯಲಿಲ್ಲ. ಬದಲಿಗೆ ಮುಂದುವರಿಯಿತು. ತಾನು ಬಯಸಿದ್ದೆಲ್ಲವೂ ಕಣ್ಣಳತೆಯಲ್ಲೇ ದಕ್ಕುತ್ತಿದ್ದ ಆ ಕಾಲದಲ್ಲಿ ತನ್ನದೇ ಹೋಟೆಲಿನ ಮ್ಯಾನೇಜರ್ ಮಗಳೊಬ್ಬಳು ತನ್ನನ್ನು ತಿರಸ್ಕಾರ ಮಾಡಿದ್ದು ಆತನ ಎದೆಯಲ್ಲಿ ಹಠದ ಕುಲುಮೆ ಒತ್ತುತ್ತಿತ್ತು. ಹೇಗಾದರೂ ಮಾಡಿ ಜೀವಜ್ಯೋತಿಯನ್ನು ಪಡೆದೇ ತೀರಬೇಕೆಂಬ ನಿರ್ಧಾರಕ್ಕೆ ಬಂದ ರಾಜಗೋಪಾಲ್. ಆದರೆ ಆ ವೇಳೆಗಾಗಲೇ ಆ ಹುಡುಗಿಗೆ ಮದುವೆಯಾಗಿ ಹೋಗಿತ್ತು. ಅಷ್ಟಾದರೂ ಬಿಡದೆ ಗಲಾಟೆ ಮಾಡಿಸಿ ಆ ಕುಟುಂಬಕ್ಕೆ ಚಿತ್ರಹಿಂಸೆ ನೀಡಲಾಯಿತು. ಆ ಹುಡುಗಿಗೆ ಮದುವೆಯಾಗಿದ್ದರೂ ಆಕೆಯನ್ನೇ ವರಿಸುವ ಸಲುವಾಗಿ ಪ್ರಯತ್ನ ಮುಂದುವರಿಸಿದ ರಾಜಗೋಪಾಲ್. ಯಾವಾಗ ಮೊಮ್ಮಗಳ ವಯಸ್ಸಿನ ಆ ಹುಡುಗಿ ಬಡತನಕ್ಕಾಗಿ ಆತನ ಶ್ರೀಮಂತಿಕೆಯನ್ನೂ ಲೆಕ್ಕಿಸದೆ ತಿರುಗಿಬಿದ್ದಳೋ! ಶರವಣ ಭವನದ ಮಾಲೀಕನ ಇಡ್ಲಿವಡೆಯ ಡೆಡ್ಲಿಕತೆ ಶುರುವಾಯಿತು.

ಕೆಲವೇ ದಿನಗಳಲ್ಲಿ ಆ ಹುಡುಗಿಯ ಗಂಡ ಶಾಂತಕುಮಾರ್‌ನ ಅಪಹರಣವಾಯಿತು. ಅದು ಅಪಹರಣದಲ್ಲಷ್ಟೇ ನಿಲ್ಲಲಿಲ್ಲ. 2001ರ ಅಕ್ಟೋಬರ್ 3 ರಂದು ಆತ ಕೊಡೈಕೆನಾಲ್‌ನ ಟೈಗರ್ ಚೋಲಾ ಎಂಬ ಕಾಡಿನಲ್ಲಿ ಹೆಣವಾಗಿ ಸಿಕ್ಕಿದ್ದ. ಆತ ಕೊಲೆಯಾಗಿದ್ದಾನೆ ಅಂತ ಅವನ ಮರಣೋತ್ತರ ವರದಿ ಹೇಳುತ್ತಿತ್ತು. ಜೀವಜ್ಯೋತಿಯ ಕುಟುಂಬ ಶರವಣ ಭವನದ ರಾಜಗೋಪಾಲ್ ಮೇಲೆ ಕೇಸ್ ದಾಖಲಿಸಿತು. ಕೇಸು ಪರಿಣಾಮಕಾರಿಯಾಗಿ ನಡೆಯಿತು. 2001ರ ನವೆಂಬರ್ 23ರಂದು ರಾಜಗೋಪಾಲ್ ಪೊಲೀಸರಿಗೆ ಶರಣಾಗಿ 2003ರ ಜುಲೈ 15ರಂದು ಜಾಮೀನಿನ ಮೇಲೆ ಹೊರಬಂದ. ಹಾಗೆ ಹೊರಬಂದ ಮೇಲೂ ಆತ ಸುಮ್ಮನಿರಲಿಲ್ಲ. ಆ ಹುಡುಗಿ ಜೀವಜ್ಯೋತಿಯ ಜೊತೆ ಹಣಕೊಟ್ಟು ರಾಜೀ ಮಾಡಿಕೊಳ್ಳುವ ಗೋಜಿಗೆ ಕೈ ಹಾಕಿದ. ಆದರೆ ಅದು ಫಲಿಸಲಿಲ್ಲ. ಕಾದಾಟಕ್ಕೆ ನಿಂತ! ಅದೂ ಕೈಗೂಡಲಿಲ್ಲ. ಮದ್ರಾಸ್ ಹೈಕೋರ್ಟ್ ಅದು ಸುಪಾರಿ ಕೊಲೆ ಅಂತ ತೀರ್ಮಾನಿಸಿ ರಾಜಗೋಪಾಲ್‌ಗೆ ಜೀವಾವಧಿ ಶಿಕ್ಷೆ ಪ್ರಕಟಿಸಿತು. ಸಾವಿರಾರು ಕೋಟಿಯ ಒಡೆಯ, ಹೋಟೆಲ್ ಉದ್ಯಮದ ಚಕ್ರವರ್ತಿಗೆ ಎಲ್ಲ ಕಡೆಯಿಂದಲೂ ಸೋಲುಂಟಾಯಿತು. ನ್ಯಾಯ ಗೆದ್ದಿತು. ಅಮಾಯಕ ಶಾಂತಕುಮಾರ್ ಹತ್ಯೆಯಾದ. ಶ್ರಮದಿಂದ ಕಟ್ಟಿದ ಸಾಮ್ರಾಜ್ಯ ಅನುಭವಿಸಲು ತನ್ನನ್ನು ಅನುಭವಿಸು ಎಂದು ಕೈಬೀಸಿ ಕರೆದರೂ ಕಾನೂನು ಬಿಡುತ್ತಿರಲಿಲ್ಲ. ಅಪಮಾನ, ತಿರಸ್ಕಾರ ಜೀವಿತಾವಧಿಯ ಶಿಕ್ಷೆಗಳು ಜೀವಜ್ಯೋತಿಯ ಹೆಸರಲ್ಲಿ ಬಂದು ಶರವಣ ಭವನದ ಮಾಲೀಕನ ಜೀವಕ್ಕೇನೆ ಕೊನೆಯ ಜ್ಯೋತಿ ಹಚ್ಚಿಬಿಟ್ಟಿತ್ತು. ಬೆಂಕಿಯಿಂದ ಬೆಳೆಯುತ್ತೀಯೆ ಎಂದು ಬೆಂಬಲಿಸಿದ ಜ್ಯೋತಿಷ್ಯದ ಮಾತು ಬೆಳೆದ ಮೇಲೆ ಕಪ್ಪು ಮಚ್ಚೆಯ ನೆವದಲ್ಲಿ ಬೆಂಕಿಗೇ ತಳ್ಳಿತ್ತು. ಕೊನೆಗೆ ರಾಜಗೋಪಾಲ್ ಹೃದಯಾಘಾತದಿಂದ 2019ರ ಜುಲೈ 18ರಂದು ಇಹಲೋಕ ತ್ಯಜಿಸಿದರು.

ಅದು ಯಾರೇ ಇರಲಿ, ಯಾವುದೇ ಇರಲಿ, ಏನೇ ಬರಲಿ ನಮ್ಮ ವಿವೇಕಗಳು ನಮ್ಮ ಹತೋಟಿಯಲ್ಲಿಲ್ಲದೇ ಹೋದರೆ ಬದುಕು ದುರಂತದ ಅಂತ್ಯ ಕಾಣುತ್ತದೆ ಎಂಬುದಕ್ಕೆ ಶರವಣ ಭವನದ ರಾಜಗೋಪಾಲ್ ಬದುಕಿನ ಜೀವನಯಾನವೇ ಸಾಕ್ಷಿ. ಈರುಳ್ಳಿ ಮಾರಿಕೊಂಡಿದ್ದ ರಾಜಗೋಪಾಲ್ ತನ್ನ ಹೋಟೆಲ್ ಸಿಬ್ಬಂದಿಯನ್ನು ತನ್ನ ಕುಟುಂಬದವರಂತೆ ಕಾಣುತ್ತಿದ್ದ. ಅವರ ಮಕ್ಕಳ ಮದುವೆ–ಮುಂಜಿಗೆ ಹಣಕೊಡುತ್ತಿದ್ದ. ಮನೆ ಕಟ್ಟಲು ನೆರವಾಗುತ್ತಿದ್ದ. ಅಕ್ಕರೆಯಿಂದ ಅವರ ಬಾಯಲ್ಲಿ 'ಅಣ್ಣಾಚಿ' ಎಂದೇ ಕರೆಸಿಕೊಳ್ಳುತ್ತಿದ್ದ. ಈತ ಅದೇ ಜ್ಯೋತಿಷಿಯ ಮಾತು ಕೇಳಿ ಕಪ್ಪುಮಚ್ಚೆಯ ಮೇಲೆ ಕಣ್ಣು ಹಾಕಿ ಬದುಕಿನ ತಿರುವಿನಲ್ಲಿ ಅಪ್ಪಚ್ಚಿಯಾದ ಕತೆಗೆ ದುರಂತ ನಾಯಕನಾಗಿ ಗತಿಸಿಹೋದ!

ಯಾವತ್ತಿಗೂ ಯಶಸ್ಸಿನ ಏಣಿಗೆ ಮೆಟ್ಟಿಲು ಗಳಿವೆಯೇ ಹೊರತು ನಿಲ್ದಾಣವಿಲ್ಲ. ಒಮ್ಮೆ ಹತ್ತಲು ಶುರು ಮಾಡಿದೆವೆಂದರೆ ದಣಿವರಿಯದೆ ಹತ್ತುತ್ತಿರಬೇಕು. ಹತ್ತಿದ ಮೇಲೂ ವಿವೇಕವಿದ್ದರೆ ನಿಂತ ಜಾಗವನ್ನು ಎಚ್ಚರಿಕೆಯಿಂದ ಉಳಿಸಿಕೊಳ್ಳಬೇಕು. 'ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬರದು' ಎನ್ನುವ ಗಾದೆ ಮಾತಿನ ಹಾಗೆ ಎಷ್ಟೋ ಜನ ಏಣಿ ಹತ್ತಿದ ಮೇಲೆ ತಾವು ಮಾಡಿಕೊಳ್ಳುವ ಅವಿವೇಕದ ಪರಮಾವಧಿಗೆ ಬಲಿಯಾಗಿ, ಅಲ್ಲಿಯವರೆಗೆ ಜತನದಿಂದ ಜೋಪಾನವಾಗಿ ಗಳಿಸಿದ್ದ ಗೌರವ ಕಳೆದುಕೊಳ್ಳುತ್ತಾರೆ. ಮಾನಹಾನಿಗೊಳಗಾಗುತ್ತಾರೆ. ಕಷ್ಟ ಪರಂಪರೆಯನ್ನೇ ಮೈಮೇಲೆ ಎಳೆದುಕೊಂಡು ಕಡೆಗೆ ಜೀವವನ್ನೇ ಪಣಕ್ಕಿಟ್ಟು ಬಿಡುತ್ತಾರೆ. ಸಾಧನೆಯ ಹಾದಿಯಲ್ಲಿ ನಡೆಯಲು ಶುರು ಮಾಡಿದ ಮೊದಲ ಹೆಜ್ಜೆಯ ವಿವೇಕ ನೂರರ ಗಡಿ ದಾಟುತ್ತಿದ್ದಂತೆ ಕಣ್ಮರೆಯಾಗುತ್ತದೆ. 'ಯಾರಿಹರು ನನ್ನ ಸಮಾನರು' ತಾನು ಹೇಳಿದ್ದೇ ಸತ್ಯ. ತಾನು ಮಾಡಿದ್ದೇ ಸರಿ, ತಾನು ನಡೆಸಿದ್ದೆಲ್ಲವೂ ನಡೆದೇ ತೀರುತ್ತದೆ ಎಂಬ ಹುಂಬತನಕ್ಕೆ ಬಿದ್ದು ಅಹಂನಿಂದ ವರ್ತಿಸುತ್ತಾರೆ. ಗೆಲುವಿನ ತುತ್ತ ತುದಿಯಲ್ಲಿ ನಿಂತವನು ಆ ಜ್ಯೋತಿಷ್ಯದ ಮಾತುಗಳನ್ನೂ ಹದವರಿತ ವಿವೇಕದ ಮೂಸೆಯಲ್ಲಿಟ್ಟು ವಿಶ್ಲೇಷಿಸಿಕೊಂಡು ಬದಿಗಿಟ್ಟಿದ್ದರೆ ಆತನ ಬದುಕು ಹಸನಾಗುತ್ತಿತ್ತೇ ಹೊರತು ವ್ಯಸನವಾಗುತ್ತಿರಲಿಲ್ಲ.

ಯಶಸ್ಸಿನ ತುತ್ತ ತುದಿಗೇರಿದಾಗ ನಮ್ಮ ನೈಪುಣ್ಯತೆಗೆ ಮೆಚ್ಚಿ ಜನ ಚಪ್ಪಾಳೆ ತಟ್ಟುತ್ತಾರೆ. ಅವಿವೇಕದಿಂದ ಅಧಃಪತನಕ್ಕಿಳಿದಾಗ ಅದೇ ಜನ ಗೇಲಿ ಮಾಡಿ ಗಹಗಹಿಸಿ ನಕ್ಕು ಜೀವಂತ ಶವವಾಗಿಸುತ್ತಾರೆ. ಇದೇ ಜೀವನ, ಇದುವೇ ಜೀವನ, ವಿವೇಕವೇ ನಮ್ಮ ಮಾನ, ಪ್ರಾಣ, ತ್ರಾಣ ಎಲ್ಲವೂ. ಏನಂತೀರಿ?

ಬ್ರಾಹ್ಮಣ ಸಂಘದಿಂದ ನೂತನ ಬಿಜೆಪಿ ಶಾಸಕ ಶ್ರೀವತ್ಸಗೆ ಸನ್ಮಾನ



ಮೈಸೂರು, ಮೇ 15– ಕೃಷ್ಣರಾಜ ಕ್ಷೇತ್ರದ ನೂತನ ಬಿಜೆಪಿ ಶಾಸಕರಾಗಿ ಆಯ್ಕೆಯಾದ ಟಿ.ಎಸ್. ಶ್ರೀವತ್ಸ ಅವರನ್ನು ಇಟ್ಟಿಗೆಗೂಡಿನಲ್ಲಿರುವ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಕಚೇರಿಯಲ್ಲಿ ಸಂಘದ ವತಿಯಿಂದ ಅಭಿನಂದಿಸಲಾಯಿತು.

ಇದೇ ಸಂದರ್ಭದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಇಳೈ ಆಳ್ವಾರ್ ಸ್ವಾಮೀಜಿ, ಮೇಯರ್ ಶಿವಕುಮಾರ್, ಸುಂದರೇಶನ್, ಬಿಜೆಪಿ ಕಾರ್ಯಾಧ್ಯಕ್ಷ ಎಚ್.ಜಿ.ಗಿರಿಧರ್, ಎಂ.ಆರ್.ಬಾಲಕೃಷ್ಣ, ನಗರಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯ ಮೂರ್ತಿ, ಅರ್ಚಕರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಡಾ.ಲಕ್ಷ್ಮಿ, ಓಂ ಶ್ರೀನಿವಾಸ್, ಮುಳ್ಳೂರು ಸುರೇಶ್, ಅಚ್ಯುತ, ಕಲ್ಕೆರೆ ನಾಗರಾಜ್, ಲತಾ ಬಾಲಕೃಷ್ಣ, ಎಸ್.ಎನ್.ನಾಗಶಂಕರ್, ಪ್ರಶಾಂತ್, ಚಕ್ರಪಾಣಿ, ನಾಗಶ್ರೀ ಸುಚಿಂದ್ರ ಇನ್ನಿತರರು ಹಾಜರಿದ್ದರು.

ಇಂದು ಉದ್ಯೋಗ ಮೇಳ


ಮೈಸೂರು, ಮೇ 15– ಭಾರತೀಯ ಅಂಚೆ ಇಲಾಖೆ ಗೃಹ ಸಚಿವಾಲಯ (ಎಸ್.ಟಿ.ಸಿ– ಗಡಿ ಭದ್ರತಾ ಪಡೆ) ರೈಲ್ವೆ ಸಚಿವಾಲಯ, ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಹಾಗೂ ಸಂಪರ್ಕ ಲೆಕ್ಕ ನಿಯಂತ್ರಕರು (ಸಿ.ಸಿ.ಎ) ಇವರ ಸಮನ್ವಯದಲ್ಲಿ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರ ಸಮ್ಮುಖದಲ್ಲಿ ಮೇ 16ರಂದು ಬೆಳಗ್ಗೆ 9.30ಕ್ಕೆ ಉದ್ಯೋಗ ಮೇಳ ಹಾಗೂ ವಿಷನ್ ನೇಮಕಾತಿ–5ನೇ ರಾಷ್ಟ್ರೀಯ ಸಮಾರಂಭವನ್ನು ಮಾನಸಗಂಗೋತ್ರಿಯ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಜ್ಞಾನ ಉದ್ಯಾನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ವಿಭಾಗದ ಅಂಚೆ ಇಲಾಖೆ ಹಿರಿಯ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನ ಚಿಕ್ಕ ಗಡಿಯಾರಕ್ಕೆ 'ಟೈಂ' ಕೈ ಕೊಟ್ಟಿದೆ

ಸುಮಾರು 6 ತಿಂಗಳು ಕಳೆದರೂ ಸರಿಪಡಿಸದೆ ನಿರ್ಲಕ್ಷ್ಯ

ಮೈಸೂರು, ಮೇ 15(ಸಿಎನ್)– ಕೆಟ್ಟು ನಿಂತಿರುವ ಐತಿಹಾಸಿಕ ಚಿಕ್ಕ ಗಡಿಯಾರವನ್ನು ಸರಿಪಡಿಸದ ನಗರ ಪಾಲಿಕೆ ವಿರುದ್ಧ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.




ದೇವರಾಜ ಮಾರುಕಟ್ಟೆ ಬಳಿಯ ಚಿಕ್ಕ ಗಡಿಯಾರ ಕೆಟ್ಟು ಐದಾರು ತಿಂಗಳಾಗಿದೆ. ಈ ಬಗ್ಗೆ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೂ ಈವರೆಗೂ ಸರಿಪಡಿಸಿಲ್ಲ. ಇದು ಪಾರಂಪರಿಕ, ಐತಿಹಾಸಿಕ ಗಡಿಯಾರ ಎನ್ನುವ ಪರಿಜ್ಞಾನವೂ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ವೈಸರಾಯ್ ಆಗಿದ್ದ ಡಫರಿನ್, ಮೈಸೂರು ಭೇಟಿ ನೆನಪಿಗೆ ಚಾಮರಾಜ ಒಡೆಯರ್ ಅವರು ಈ ಪಾರಂಪರಿಕ ಶೈಲಿಯ ಗಡಿಯಾರ ಗೋಪುರ ನಿರ್ಮಿಸಿದ್ದಾರೆ ಹಾಗಾಗಿ ಇದನ್ನು ಡಫರಿನ್ ಕ್ಲಾಕ್ ಎಂದು ಗುರುತಿಸಲಾಗುತ್ತದೆ. ಹಿಂದಿನಿಂದಲೂ ಪತ್ರಿಕಾ ವಿತರಕರು, ಸುತ್ತಮುತ್ತಲಿನ ವ್ಯಾಪಾರಿಗಳಿಗೆ ಈ ಗಡಿಯಾರದೊಂದಿಗೆ ವಿಶೇಷ ನಂಟು. ಮೊಬೈಲ್, ಕೈಗಡಿಯಾರ ಇದ್ದರೂ ಸಮಯ ತಿಳಿಯಲು ಚಿಕ್ಕ ಗಡಿಯಾರ ನೋಡುವುದು ರೂಢಿಯಾಗಿದೆ. ಈವರೆಗೆ ಅಧಿಕಾರಿಗಳು ಚುನಾವಣೆ ಕಾರ್ಯದಲ್ಲಿರಬಹುದು, ಮುಗಿದ ತಕ್ಷಣ ಗಡಿಯಾರ ಸರಿಪಡಿಸಬಹುದು ಎಂದುಕೊಂಡಿದ್ದೆವು. ಆದರೆ ದಪ್ಪಚರ್ಮದ ಅಧಿಕಾರಿಗಳು ಕಿಂಚಿತ್ತೂ ಗಮನ ಹರಿಸಿಲ್ಲ. ನಗರದ ಹೃದಯ ಭಾಗದಲ್ಲಿರುವ ಪಾರಂಪರಿಕ, ಐತಿಹಾಸಿಕ ಗಡಿಯಾರದಲ್ಲಿ ಸಮಯವೇ ಸರಿಯಿಲ್ಲ ಎಂದರೆ ಮೈಸೂರಿಗೆ ಅಗೌರವ. ಕೂಡಲೇ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಆಗ್ರಹಿಸಿದ್ದಾರೆ.

ಆರ್‌ಎಸ್‌ಎಸ್ ನಾಯಕರ ಭೇಟಿಯಾದ ಹಂಗಾಮಿ ಸಿಎಂ ಬಸವರಾಜ ಬೊಮ್ಮಾಯಿ

ಬೆಂಗಳೂರು, ಮೇ 15 (ಕೆಎಂಶಿ)– ಚುನಾವಣೆಯ ಫಲಿತಾಂಶದ ಬಳಿಕ ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆರ್‌ಎಸ್‌ಎಸ್ ನಾಯಕರೊಂದಿಗೆ ಪಕ್ಷ ಸಂಘಟನೆ ಬಗ್ಗೆ ಚರ್ಚೆ ನಡೆಸಿದರು.



ಇಂದು ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಕೇಶವ ಕೃಪಕ್ಕೆ ಭೇಟಿ ನೀಡಿದ ನಂತರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ಇಂದು ಆರ್‌ಎಸ್‌ಎಸ್ ಮುಖಂಡರೊಂದಿಗೆ ಚುನಾವಣೆ ಫಲಿತಾಂಶದ ಬಗ್ಗೆ ಚರ್ಚೆ ಮಾಡಿದ್ದೇವೆ. ಬರುವಂತಹ ದಿನಗಳಲ್ಲಿ ಪಕ್ಷವನ್ನು ಮುಂದೆ ಹೇಗೆ ಸಂಘಟಿಸಬೇಕು ಎಂಬುದರ ಬಗ್ಗೆ ಚರ್ಚೆ ಆಗಿದೆ.

ರಾಜ್ಯಾಧ್ಯಕ್ಷರು, ವರಿಷ್ಠರ ಜೊತೆಗೆ ಹಲವಾರು ಬಾರಿ ಚರ್ಚಿಸಿ ಭಾರತೀಯ ಜನತಾ ಪಕ್ಷವನ್ನು ಹೇಗೆ ಸಂಘಟನೆ ಮಾಡಬೇಕು ಎನ್ನುವ ತೀರ್ಮಾನ ಮಾಡುತ್ತೇವೆ ಎಂದರು.

ಚುನಾವಣೆಯಲ್ಲಿ ಗೆಲುವು ಸಾಧಿಸಿದ ಶಾಸಕರ ಸಭೆಯನ್ನು ಕರೆದಿಲ್ಲ. ಶಾಸಕರ ಸಭೆಯನ್ನು ರಾಜ್ಯಾಧ್ಯಕ್ಷರು ಕರೆಯಲಿದ್ದಾರೆ ಎಂದು.

ಭಜರಂಗದಳ ನಿಷೇಧ: ಮಲ್ಲಿಕಾರ್ಜುನ ಖರ್ಗೆಗೆ ಪಂಜಾಬ್ ಕೋರ್ಟ್ ಸಮನ್ಸ್ ಜಾರಿ

ನವದೆಹಲಿ: ಕರ್ನಾಟಕ ಚುನಾವಣೆಯ ಭರವಸೆಯಲ್ಲಿ ಭಜರಂಗದಳ ನಿಷೇಧ ಘೋಷಣೆ ಮಾಡಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಪಂಜಾಬ್ ಕೋರ್ಟ್ ಸಮನ್ಸ್ ಜಾರಿ ಮಾಡಿದೆ.



ನಿಷೇಧಿತ ಇಸ್ಲಾಮಿಕ್ ಸಂಘಟನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ(ಪಿಎಫ್ಐ)ವನ್ನು ಸಂಘ–ಸಂಯೋಜಿತ ವಿಶ್ವ ಹಿಂದೂ ಪರಿಷತ್‌ನ ಯುವ ಘಟಕವಾದ ಭಜರಂಗದಳದೊಂದಿಗೆ ಸಮೀಕರಿಸಿದ ಕಾರಣಕ್ಕಾಗಿ 100 ಕೋಟಿ ರೂ ಮಾನಹಾನಿ ಪ್ರಕರಣ ದಾಖಲಾಗಿದ್ದು, ಈ ಸಂಬಂಧ ಪಂಜಾಬ್ ನ್ಯಾಯಾಲಯವು ಕಾಂಗ್ರೆಸ್ ಪಕ್ಷದ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಇಂದು ಸಮನ್ಸ್ ನೀಡಿದೆ.

"ಭಜರಂಗದಳ ಹಿಂದೂಸ್ತಾನ್" ಎಂಬ ಸಂಘಟನೆಯ ಅಧ್ಯಕ್ಷ ಹಿತೇಶ್ ಭಾರದ್ವಾಜ್ ಅವರ ದೂರಿನ ನಂತರ ಸಂಗ್ರೂರ್ ಜಿಲ್ಲಾ ನ್ಯಾಯಾಲಯವು ಕಾಂಗ್ರೆಸ್ ಅಧ್ಯಕ್ಷರಿಗೆ ಸಮನ್ಸ್ ನೀಡಿದೆ. ಇತ್ತೀಚೆಗೆ ಮುಕ್ತಾಯಗೊಂಡ ಕರ್ನಾಟಕ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ, ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಭಜರಂಗದಳವನ್ನು ಸಿಮಿ ಮತ್ತು ಅಲ್–ಖೈದಾದಂತಹ ದೇಶ ವಿರೋಧಿ ಸಂಘಟನೆಗಳೊಂದಿಗೆ ಹೋಲಿಸಿದೆ ಎಂದು ಅರ್ಜಿದಾರರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಣಾಳಿಕೆಯಲ್ಲಿ ಭಜರಂಗದಳವನ್ನು ಹೆಸರಿಸುತ್ತಾ, ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಬಹುಸಂಖ್ಯಾತ ಅಥವಾ ಅಲ್ಪಸಂಖ್ಯಾತ ಸಮುದಾಯಗಳ ನಡುವೆ ದ್ವೇಷ ಅಥವಾ ದ್ವೇಷವನ್ನು ಉತ್ತೇಜಿಸುವ ಸಂಘಟನೆಗಳನ್ನು ನಿಷೇಧಿಸುವುದಾಗಿ ಭರವಸೆ ನೀಡಿದೆ. ಜಾತಿ ಅಥವಾ ಧರ್ಮದ ಆಧಾರದ ಮೇಲೆ ಸಮುದಾಯಗಳ ನಡುವೆ ದ್ವೇಷವನ್ನು ಹರಡುವ ವ್ಯಕ್ತಿಗಳು ಮತ್ತು ಸಂಘಟನೆಗಳ ವಿರುದ್ಧ ದೃಢವಾದ ಮತ್ತು ನಿರ್ಣಾಯಕ ಕ್ರಮವನ್ನು ತೆಗೆದುಕೊಳ್ಳಲು ಕಾಂಗ್ರೆಸ್ ಪಕ್ಷವು ಬದ್ಧವಾಗಿದೆ ಎಂದು ಹೇಳಿತ್ತು.

ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ

ಮೈಸೂರು, ಮೇ 15– ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ರಾಮನ್ ಸಂಶೋಧನಾ ಸಂಸ್ಥೆಯ (RRI) 75ನೇ ವಾರ್ಷಿಕೋತ್ಸವ ಹಾಗೂ ಬೆಂಗಳೂರು ಪರಿಸರ ಸಂಘದ (EAB) 25ನೇ ವಾರ್ಷಿಕೋತ್ಸವದ ಅಂಗವಾಗಿ ಪದವಿ ಮತ್ತು ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳಿಗಾಗಿ "ಅರ್ಬನ್ ಮ್ಯಾನೇಜ್‌ಮೆಂಟ್ ಅಂಡ್ ವಾಟರ್ ಕನ್‌ಸರ್ವೇಶನ್" ವಿಷಯದ ಬಗ್ಗೆ ಒಂದು ದಿನದ ಆನ್‌ಲೈನ್ ಕಾರ್ಯಾಗಾರವನ್ನು ಹಾಗೂ "ಸುಸ್ಥಿರ ಭವಿಷ್ಯಕ್ಕಾಗಿ ಹಸಿರು ನಗರಗಳು (Green Cities for Sustainable Future)" ವಿಷಯದ ಮೇಲೆ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.


ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಮಾತ್ರ ಸ್ಪರ್ಧಿಸಬಹುದಾಗಿದ್ದು, ಪ್ರಬಂಧ ಬರೆದು ಕಳುಹಿಸಲು ಜೂನ್ 1 ಕೊನೆಯ ದಿನವಾಗಿರುತ್ತದೆ. ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಪ್ರಬಂಧಗಳನ್ನು ಬರೆಯಬಹುದಾಗಿದ್ದು, ಒಬ್ಬರು ಒಂದು ಭಾಷೆಯಲ್ಲಿ ಪ್ರಬಂಧವನ್ನು ಬರೆಯಲು ಅವಕಾಶವಿರುತ್ತದೆ. ಒಂದು ವೇಳೆ ಎರಡು ಭಾಷೆಗಳಲ್ಲಿ ಬರೆದರೆ, ಒಂದನ್ನು ನಮ್ಮ ವಿವೇಚನೆಯಂತೆ ಆಯ್ಕೆ ಮಾಡಿಕೊಂಡು ಮೌಲ್ಯಮಾಪನವನ್ನು ಮಾಡಲಾಗುವುದು. ಪ್ರಬಂಧಗಳು 1000 ಪದಗಳನ್ನು ಮೀರುವಂತಿಲ್ಲ. ಇಂಗ್ಲೀಷ್‌ನಲ್ಲಿ ಬರೆಯುವವರು – Arial Font 14 Size ಬಳಸಬೇಕು. ಕನ್ನಡದಲ್ಲಿ ಬರೆಯುವವರು Unicode 12 size ಬಳಸಬೇಕು. ಪ್ರಬಂಧಗಳನ್ನು PDF Format ನಲ್ಲಿ ಮಾತ್ರ ಕಳುಹಿಸಬೇಕು. ಕೃತಿ ಚೌರ್ಯ (Plagiarism) ವನ್ನು ತಿರಸ್ಕರಿಸಲಾಗುವುದು. ಪ್ರಬಂಧದ ಜೊತೆಯಲ್ಲಿ ಕಾಲೇಜಿನ ಗುರುತಿನ ಚೀಟಿಯನ್ನು ಕಳುಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ www.kstacademy.in ಅಥವಾ 9008675123, 9845258894 ಅನ್ನು ಸಂಪರ್ಕಿಸಬಹುದು ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎ.ಎಂ. ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಪ್ಲೊಮಾ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 15– ಬೆಳಗೊಳದಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಿಂದ 2023–24ನೇ ಸಾಲಿನ ಡಿಪ್ಲೊಮಾ ಕೋರ್ಸ್‌ಗಳಿಗೆ ಮೇ 9 ರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಎಸ್‌ಎಸ್‌ಎಲ್‌ಸಿ ಪಾಸಾದ ಅರ್ಹ ಅಭ್ಯರ್ಥಿಗಳು ಮೇ 29 ರೊಳಗೆ www.gttc.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲೆ ತಿಳಿಸಿದ ವೆಬ್‌ಸೈಟ್ ಅಥವಾ ದೂಸಂ.9980557205, 8660139259, 9141630315, 9880068986 ಹಾಗೂ 9008183400 ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಬಿಎಸ್‌ಇ 10ನೇ ತರಗತಿ : ರೋಹಿತ್ ಉತ್ತಮ ಸಾಧನೆ



ಮೈಸೂರು, ಮೇ 15(ಪಿಎಂ)– ಮೈಸೂರು ಕುವೆಂಪುನಗರದಲ್ಲಿರುವ ವಿದ್ಯಾವರ್ಧಕ ಶಾಲೆಯ ವಿದ್ಯಾರ್ಥಿ ಆರ್.ರೋಹಿತ್ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಶೇ.95ರಷ್ಟು ಅಂಕಗಳಿಸಿ ಉತ್ತಮ ಸಾಧನೆ ಮಾಡಿದ್ದಾನೆ. ಕನ್ನಡದಲ್ಲಿ 100 ಅಂಕ ಹಾಗೂ ವಿಜ್ಞಾನದಲ್ಲಿ 99 ಅಂಕ ಗಳಿಸಿದ್ದಾನೆ. ಆರ್.ದುರ್ಗಾದೇವಿ ಮತ್ತು ರವಿ ದಂಪತಿ ಪುತ್ರ ರೋಹಿತ್, ಕನ್ನಡದಲ್ಲಿ 94, ಗಣಿತಶಾಸ್ತ್ರದಲ್ಲಿ 86, ಸಮಾಜ ವಿಜ್ಞಾನದಲ್ಲಿ 93 ಅಂಕ ಗಳಿಸುವ ಮೂಲಕ ಉತ್ತಮ ಸಾಧನೆ ಮಾಡಿದ್ದಾನೆ.

ಭಾರತಕ್ಕೆ ಪರಿಸರ ಸಂರಕ್ಷಣೆ ಅಭಿಯಾನದ ಸಾರಥ್ಯ

'ಜಿ20 ವಿಶ್ವವಿದ್ಯಾಲಯ ಸಂಪರ್ಕ; ಯುವ ಮನಸ್ಸುಗಳ ಆಕರ್ಷಣೆ' ಅಧಿವೇಶನದಲ್ಲಿ ಆಶಾಭಾವ



ಮೈಸೂರು, ಮೇ 15(ಎಂಕೆ)– ಪರಿಸರ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ, ನವೀಕರಿಸಬಹುದಾದ ಇಂಧನಗಳ ಸದ್ಬಳಕೆ, ಕಡಲ ಸ್ವಚ್ಛತೆ ಹಾಗೂ ಪರಂಪರೆಯ ಸಂರಕ್ಷಣೆಯಿಂದ ಭಾರತ ವಿಶ್ವ ಭೂಪಟದಲ್ಲಿನ ದಕ್ಷಿಣ ಭಾಗದ ನಾಯಕತ್ವ ವಹಿಸಿಕೊಳ್ಳಲಿದೆ ಎಂಬ ಅಭಿಪ್ರಾಯ 'ಜಿ20 ವಿಶ್ವವಿದ್ಯಾಲಯ ಸಂಪರ್ಕ; ಯುವ ಮನಸ್ಸುಗಳ ಆಕರ್ಷಣೆ' ಅಧಿವೇಶನದಲ್ಲಿ ವ್ಯಕ್ತವಾಯಿತು.

ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ನವದೆಹಲಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್(ಎನ್‌ಐಎಎಸ್), ಅಭಿವೃದ್ಧಿಶೀಲ ರಾಷ್ಟ್ರಗಳ ಸಂಶೋಧನೆ ಮತ್ತು ಮಾಹಿತಿ ವ್ಯವಸ್ಥೆ (Research and Information System for Developing Countries -RIS) ಹಾಗೂ ಮಹಾರಾಜ ಕಾಲೇಜು ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಧಿವೇಶನದಲ್ಲಿ ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಆಡಳಿತ, ಹವಾಮಾನ ಕ್ರಿಯೆಯ ಕಾರ್ಯಸೂಚಿ, ಕಡಲ ಆಡಳಿತ, ಕಡಲಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ, ಹಸಿರು ಶಕ್ತಿ ಪರಿವರ್ತನೆ ಮತ್ತು ಸುಸ್ಥಿರ ಅಭಿವೃದ್ಧಿ, ಪರಂಪರೆ ಸಂರಕ್ಷಣೆ, ನವೀಕರಿಸಬಹುದಾದ ಇಂಧನಗಳ ಬಳಕೆ, ವಿಪತ್ತು ನಿರ್ವಹಣೆಗಾಗಿ ಸುಸಜ್ಜಿತ ವ್ಯವಸ್ಥೆ ಕುರಿತು ವಿವಿಧ ವಿಶ್ವವಿದ್ಯಾನಿಲಯಗಳ ಸಂಶೋಧನಾ ವಿದ್ಯಾರ್ಥಿಗಳು ತಮ್ಮದೇ ಸಲಹೆ ನೀಡಿದರಲ್ಲದೆ ಕಾರ್ಯಗತಗೊಳಿಸುವ ಕುರಿತು ಗಂಭೀರವಾಗಿ ಚರ್ಚೆ ನಡೆಸಿದರು.

ಬಾಹ್ಯಾಕಾಶ ತಂತ್ರಜ್ಞಾನಕ್ಕೆ ಹೆಚ್ಚಿನ ಆದ್ಯತೆ ನೀಡುವುದರ ಜೊತೆಗೆ ಚಂದ್ರನ ಕುರಿತು ಹೆಚ್ಚಿನ ಸಂಶೋಧನೆಯಾಗಬೇಕು. ಕೃಷಿ ಕ್ಷೇತ್ರದಲ್ಲಿ ಸೌರಶಕ್ತಿಯ ಬಳಕೆ ಹೆಚ್ಚಿಸಬೇಕು. ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಯ ರಕ್ಷಣೆಯಾಗಬೇಕು. ವಿಪತ್ತು ನಿರ್ವಹಣೆಗಾಗಿ ಪ್ರತ್ಯೇಕ ವ್ಯವಸ್ಥೆ ರೂಪಿಸಬೇಕು. ಪ್ರವಾಸೋದ್ಯಮಕ್ಕೆ ಉತ್ತೇಜನ ಹಾಗೂ ಪರಿಸರ ಸಂರಕ್ಷಣೆಗೆ ಪೂರಕವಾಗಿ ಕಡಲ ತೀರದ ಸ್ವಚ್ಛತೆಗೆ ಪ್ರತ್ಯೇಕ ನಿರ್ವಹಣಾ ವ್ಯವಸ್ಥೆ ರಚನೆಯಾಗಬೇಕು. ಪ್ಲಾಸ್ಟಿಕ್ ಬಳಕೆ ನಿಲ್ಲಬೇಕು ಎಂಬಿತ್ಯಾದಿ ಸಲಹೆಗಳನ್ನು ನೀಡಿದರು.

ವಿಶ್ವವೇ ಒಂದು ಕುಟುಂಬ: ಬಳಿಕ ನಡೆದ ಸಂವಾದದಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಸಂಶೋಧನೆ ಮತ್ತು ಮಾಹಿತಿ ವ್ಯವಸ್ಥೆಯ ಆಡಳಿತ ಮಂಡಳಿ ಸದಸ್ಯ ಶೇಷಾದ್ರಿಚಾರಿ ಮಾತನಾಡಿ, ಇಡೀ ವಿಶ್ವವನ್ನೇ ನಾವು ಒಂದು ಕುಟುಂಬದಂತೆ ನೋಡಬೇಕೇ ಹೊರತು ಮಾರುಕಟ್ಟೆಯಂತೆ ಕಾಣುವುದಲ್ಲ. ಕುಟುಂಬದ ಒಬ್ಬ ಸದಸ್ಯ ನೋವಿನಲ್ಲಿದ್ದರೂ ಇಡೀ ಕುಟುಂಬವೇ ನೋವಿನಲ್ಲಿದ್ದಂತೆ. ಆದ್ದರಿಂದ ಕುಟುಂಬ(ವಿಶ್ವ)ದ ಉಳಿವಿಗಾಗಿ ನಾವೆಲ್ಲರೂ ಶ್ರಮಿಸಬೇಕಾಗಿದೆ. 'ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯ' ಎಂಬಂತೆ ಎಲ್ಲರೂ ಸುಖವಾಗಿರಲು ಬಯಸಬೇಕು ಎಂದು ತಿಳಿಸಿದರು.

ಮೂಲ ಔಷಧ ಆಯುರ್ವೇದ: ಮೈಸೂರಿನ ನೇಚರ್ ಬೆಲ್ ವೆಲ್ನೆಸ್‌ನ ಎಂಡಿ ಡಾ.ಎನ್.ಕೃಷ್ಣ ಪ್ರಸಾದ್ ಮಾತನಾಡಿ, ಆಯುರ್ವೇದ ಭಾರತ ಮೂಲ ಔಷಧವಾಗಿದೆ. ಆರೋಗ್ಯಕ್ಕೆ ಅನುಕೂಲಕರವಾಗಿದ್ದು, ಆರೋಗ್ಯಭರಿತ ಜೀವನವನ್ನು ರೂಡಿಸಿಕೊಳ್ಳುವುದರ ಬಗ್ಗೆಯೂ ತಿಳಿಸಿಕೊಡುತ್ತದೆ ಎಂದು ತಿಳಿಸಿದರಲ್ಲದೆ ಊಟ ಮಾಡುವಾಗ ಟಿವಿ ಅಥವಾ ಮೊಬೈಲ್ ನೋಡಿದರೆ, ಊಟದ ಮೇಲೆ ಗಮನಹರಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಮೆದುಳಿನ ಮೇಲೂ ಗಂಭೀರವಾದ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದರು.

ಮೈಸೂರು ವಿವಿ ಅಂತರರಾಷ್ಟ್ರೀಯ ವಿಭಾಗದ ಮುಖ್ಯಸ್ಥರಾದ ಡಾ.ಭಾರತಿ ಹಿರೇಮಠ್, ಮಹಾರಾಜ ಕಾಲೇಜು ಪ್ರಾಧ್ಯಾಪಕ ಸಿ.ಎ.ಶ್ರೀಧರ ಮತ್ತಿತರರಿದ್ದರು.

ರಕ್ತದಲ್ಲಿ ವಿಜ್ಞಾನ ಅಡಗಿದೆ: ಪ್ರೊ.ಕೆ.ಎಸ್.ರಂಗಪ್ಪ

ವಿಜ್ಞಾನವೆಂಬುದು ಸಣ್ಣ ವಿಷಯವಲ್ಲ. ಪ್ರತಿಯೊಂದು ದೇಶವೂ ವಿಜ್ಞಾನದ ಆಧಾರದ ಮೇಲೆ ನಿಂತಿವೆ. ವಿಜ್ಞಾನ ಪ್ರತಿಯೊಂದು ಜೀವಿಗಳ ರಕ್ತದಲ್ಲಿಯೇ ಇದೆ ಎಂದು ಸಿಎಸ್‌ಐಆರ್(ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್) ವಿಜ್ಞಾನಿ ಹಾಗೂ ಜಪಾನ್‌ನ ಹೊಕ್ಕೈಡೋ ವಿಶ್ವವಿದ್ಯಾಲಯದ ರಾಯಭಾರಿ ಪ್ರೊ.ಕೆ.ಎಸ್.ರಂಗಪ್ಪ ಹೇಳಿದರು.

ವಿಜ್ಞಾನ ಆಧಾರಿತ ಸಂಶೋಧನೆಗಳಿಂದ ದೇಶ ಅಭಿವೃದ್ಧಿ ಸಾಧಿಸಲು ಸಾಧ್ಯ. ಆದರೆ ಭಾರತದಲ್ಲಿ ಸಂಶೋಧನೆಗೆ ನೀಡುತ್ತಿರುವ ಅನುದಾನ ಅತ್ಯಂತ ಕಡಿಮೆಯಾಗಿದೆ. ಇದರಿಂದ ಭಾರತೀಯ ಬುದ್ಧಿವಂತ ವಿಜ್ಞಾನಿಗಳು, ತಂತ್ರಜ್ಞರು ಬೇರೆ ಬೇರೆ ದೇಶಗಳತ್ತ ಮುಖ ಮಾಡುತ್ತಿದ್ದಾರೆ. ವಿಜ್ಞಾನದಲ್ಲಿ ಅಭಿವೃದ್ಧಿಯಾಗದಿದ್ದರೆ ದೇಶ ಯಾವ ಕ್ಷೇತ್ರದಲ್ಲಿಯೂ ಪ್ರಬುದ್ಧತೆಯನ್ನು ಸಾಧಿಸಲು ಸಾಧ್ಯವಿಲ್ಲ. ಆದ್ದರಿಂದ ದೇಶದಲ್ಲಿಯೇ ಸಂಶೋಧನೆಗೆ ಪೂರಕ ವಾತಾವರಣ ಹಾಗೂ ಸಂಶೋಧಕರಿಗೆ ಅಗತ್ಯ ಸೌಲಭ್ಯಗಳನ್ನು ನೀಡಬೇಕು ಎಂದರು.

ಪತ್ರಿಕಾ ವಿತರಕರ ಪುತ್ರಿಯ ಅಪೂರ್ವ ಸಾಧನೆ

ವೈದ್ಯಕೀಯ ಪದವಿ ಪೂರೈಸಿದ ಸುಮಾ ಭಾರತಿಗೆ ಜಯದೇವ ಹೃದ್ರೋಗ ಸಂಸ್ಥೆಯ ಡಾ.ಮಂಜುನಾಥರಿಂದ ಪ್ರಮಾಣ ಪತ್ರ ಪ್ರದಾನ

ಮೈಸೂರು, ಮೇ 15(ಎಸ್‌ಬಿಡಿ)– ಪತ್ರಿಕಾ ವಿತರಕರೊಬ್ಬರ ಪುತ್ರಿ, ದೃಢಸಂಕಲ್ಪದಂತೆ ವೈದ್ಯೆಯಾಗುವ ಮೂಲಕ ಮಾದರಿಯಾಗಿದ್ದಾರೆ. ಮೈಸೂರು ನಗರದ ಪತ್ರಿಕಾ ವಿತರಕ ನಾಗರಾಜು ಹಾಗೂ ನಾಗಲಾಂಬಿಕೆ ದಂಪತಿ ಪುತ್ರಿ ಎನ್.ಸುಮಾ ಭಾರತಿ ಅವರು ಬೆಳ್ಳೂರಿನ ಶ್ರೀ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ(ಏಮ್ಸ್)ಯಲ್ಲಿ ಪದವಿ ಪೂರೈಸಿದ್ದು, ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಪ್ರಮಾಣ ಪತ್ರ ಸ್ವೀಕರಿಸಿದ್ದಾರೆ.

ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಪಡೆಯುವುದು ಸುಲಭದ ಮಾತಲ್ಲ. ಆಸಕ್ತಿ ಅರ್ಹತೆ ಜೊತೆಗೆ ಆರ್ಥಿಕ ಶಕ್ತಿಯೂ ಮುಖ್ಯ. ಆದರೂ ಎಲ್ಲಾ ಸವಾಲುಗಳನ್ನೂ ಮೀರಿ ಸುಮಾ ಅವರು ವೈದ್ಯೆಯಾಗುವ ಮೂಲಕ ತಮ್ಮ ಬಾಲ್ಯದ ಕನಸನ್ನು ನನಸು ಮಾಡುವ ಮೂಲಕ ಯುವ ಸಮುದಾಯಕ್ಕೆ ಪ್ರೇರಣೆಯಾಗಿದ್ದಾರೆ.

ಮೈಸೂರಿನ ಕೆಸರೆಯಲ್ಲಿರುವ ಬಿಟಿಎಲ್ ವಿದ್ಯಾ ವಾಹಿನಿ ಶಾಲೆಯಲ್ಲಿ 10ನೇ ತರಗತಿವರೆಗೆ ಹಾಗೂ ಮರಿಮಲ್ಲಪ್ಪ ಕಾಲೇಜಿನಲ್ಲಿ ಪಿಯು ಶಿಕ್ಷಣ ಪೂರೈಸಿದ ಸುಮಾ ಭಾರತಿ, ಓದಿನ ಜೊತೆಗೆ ಡಾಕ್ಟರ್ ಆಗಬೇಕು, ಬಡ ರೋಗಿಗಳ ಸೇವೆ ಮಾಡಬೇಕೆಂಬ ಬಾಲ್ಯದ ಕನಸನ್ನು ಪೋಷಿಸಿಕೊಂಡು ಬಂದಿದ್ದರು. ಈ ನಿಟ್ಟಿನಲ್ಲಿ ಶ್ರದ್ಧೆ ಹಾಗೂ ಪರಿಶ್ರಮದಿಂದ ಅಧ್ಯಯನ ಮಾಡಿ, ಯಾವುದೇ ವಿಶೇಷ ತರಬೇತಿ ಪಡೆಯದೆ ನೀಟ್ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕು ಬೆಳ್ಳೂರಿನ ಶ್ರೀ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಸರ್ಕಾರಿ ಸೀಟು ಪಡೆದು ಎಂಬಿಬಿಎಸ್ ಪದವಿ ಪೂರೈಸಿದ್ದಾರೆ.



ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಇತ್ತೀಚೆಗೆ ನಡೆದ ಏಮ್ಸ್ ಘಟಿಕೋತ್ಸವದಲ್ಲಿ ಬೆಂಗಳೂರಿನ ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರಿಂದ ಡಾ.ಎನ್.ಸುಮಾ ಭಾರತಿ ಪದವಿ ಪ್ರಮಾಣ ಪತ್ರ ಸ್ವೀಕರಿಸಿದರು. ಉಪಕುಲಪತಿ ಡಾ.ಎಂ.ಎ.ಶೇಖರ್, ಏಮ್ಸ್ ಪ್ರಾಂಶುಪಾಲ ಮತ್ತು ಡೀನ್ ಡಾ.ಎಂ.ಜಿ. ಶಿವರಾಮು, ಸುಮಾ ಅವರ ತಾಯಿ ನಾಗಲಾಂಬಿಕೆ, ತಂದೆ ನಾಗರಾಜು ಮತ್ತು ಸಹೋದರ ಎನ್.ಕರ್ಣ ಉಪಸ್ಥಿತರಿದ್ದರು.

ವೈದ್ಯಕೀಯ ಸೀಟು ಪಡೆಯಲು ಪ್ರಭಾವ ಮತ್ತು ಹಣ ಮುಖ್ಯ ಎಂಬ ಸಾಮಾನ್ಯ ಗ್ರಹಿಕೆಯನ್ನು ಸುಳ್ಳಾಗಿಸಿ ವೈದ್ಯಕೀಯ ಪದವಿ ಪಡೆದಿರುವ ಡಾ.ಎನ್.ಸುಮಾ ಭಾರತಿ, ಸದ್ಯ ಇಂಟರ್ನ್‌ಶಿಪ್ ಮಾಡುತ್ತಿದ್ದಾರೆ. ತಮ್ಮನ್ನು ಓದಿಸಲು ತುಂಬಾ ಕಷ್ಟಪಟ್ಟಿರುವ ಪೋಷಕರಿಗೆ ಹೊರೆಯಾಗದಂತೆ ಎಂ.ಡಿ(ಡಾಕ್ಟರ್ ಆಫ್ ಮೆಡಿಸಿನ್) ಕೋರ್ಸ್ ಮಾಡಬೇಕೆಂಬ ಗುರಿ ಹೊಂದಿದ್ದಾರೆ.

ನಾಲ್ಕು ದಶಕಗಳಿಂದ ದಿನಪತ್ರಿಕೆ ವಿತರಿಸುತ್ತಿರುವ ನಾಗರಾಜ್, ಹಣಕಾಸಿನ ಮುಗ್ಗಟ್ಟಿನ ನಡುವೆಯೂ ತಮ್ಮ ಪುತ್ರಿಯ ಮಹದಾಸೆಗೆ ನೆರವಾಗಿದ್ದಾರೆ. ಕಷ್ಟಪಟ್ಟು ಮಗಳನ್ನು ಮೆಡಿಕಲ್ ಓದಿಸಿದ್ದೇನೆ. ಎಂ.ಡಿ. ಮಾಡಬೇಕು ಎಂದುಕೊಂಡಿದ್ದಾಳೆ. ತಮ್ಮ ಮಗಳಿಗೆ ಆರ್ಥಿಕ ನೆರವು, ಅಧ್ಯಯನ ಸಾಮಗ್ರಿಗಳು, ಲೇಖನ ಸಾಮಗ್ರಿಗಳು ಇತರ ಕೊಡುಗೆಗಳನ್ನು ನೀಡಿದ ಮೈಸೂರು ಜಿಲ್ಲಾ ಪತ್ರಿಕೆ ವಿತರಕರ ಸಂಘ, ಮಾಜಿ ಶಾಸಕ ವಾಸು ಮತ್ತು ಪತ್ರಿಕೆ ಓದುಗರಿಗೆ ಕೃತಜ್ಞತೆಗಳು ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಬಹುಮತದ ಹಿಂದೆಯೇ ಹಿಂಸಾಚಾರ; ಬಿಜೆಪಿ ರಾಜ್ಯಾಧ್ಯಕ್ಷರ ಎಚ್ಚರಿಕೆ

ಬೆಂಗಳೂರು, ಮೇ 15 (ಕೆಎಂಶಿ)– ಕಾಂಗ್ರೆಸ್ ಪಕ್ಷವು ಬಹುಮತ ಗಳಿಸಿದ ತಕ್ಷಣ ರಾಜ್ಯದ ವಿವಿಧ ಕಡೆಗಳಲ್ಲಿ ಹಿಂಸಾಚಾರಗಳು ಆರಂಭವಾಗಿವೆ. ಇದೊಂದು ರೀತಿ "ಹಿಂಸಾ ಗ್ಯಾರಂಟಿ ಸ್ಕೀಮ್" ಎಂದು ವಾಗ್ದಾಳಿ ನಡೆಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಸಂಸದ ನಳಿನ್ ಕುಮಾರ್ ಕಟೀಲ್, ಇಂತಹ ಬೆಳವಣಿಗೆಗಳ ತಡೆಯುವಂತೆ ಆಗ್ರಹಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಹೊಸಕೋಟೆ ಸೇರಿದಂತೆ ರಾಜ್ಯದ ವಿವಿಧೆಡೆಗಳಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಹಲ್ಲೆ ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಹೊಸಕೋಟೆಯಲ್ಲಿ ಒಬ್ಬ ಕಾರ್ಯಕರ್ತರನ್ನು ಹತ್ಯೆ ಮಾಡಿದ್ದು, ಇತರ ಇಬ್ಬರ ಮೇಲೆ ತೀವ್ರವಾಗಿ ಹಲ್ಲೆ ಮಾಡಲಾಗಿದೆ. ಇದು ಅತ್ಯಂತ ಖಂಡನೀಯ ಎಂದು ಅವರು ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕರು ಇಂತಹ ಹಿಂಸಾಚಾರದ ಪ್ರವೃತ್ತಿಗೆ ಆಸ್ಪದ ಕೊಡಬಾರದು ಎಂದವರು ಎಚ್ಚರಿಸಿದ್ದಾರೆ. ರಾಜ್ಯದ ವಿವಿಧ ಕಡೆಗಳಲ್ಲಿ ದೇಶದ್ರೋಹಿ ಚಟುವಟಿಕೆಗಳು ಹೆಚ್ಚಾಗಿವೆ, ಇದನ್ನು ತಡೆಯಬೇಕು. ಪಾಕಿಸ್ತಾನದ ಧ್ವಜ ಹಾರಿಸುವುದು ದೇಶದ್ರೋಹದ ಚಟುವಟಿಕೆಯಾಗಿದ್ದು, ಇದನ್ನು ನಿಯಂತ್ರಿಸಬೇಕು. ಯಾವುದೇ ಕಾರಣಕ್ಕೂ ಇಂತಹ ಹಿಂಸಾಚಾರದ ದೇಶದ್ರೋಹಿ ಚಟುವಟಿಕೆಗಳನ್ನು ಸಹಿಸಲು ಸಾಧ್ಯವಿಲ್ಲ ಎಂದವರು ತಿಳಿಸಿದ್ದಾರೆ.

ಕಾಂಗ್ರೆಸ್ ಮುಖಂಡರು ತಮ್ಮೊಳಗಿನ ಭಿನ್ನಮತವನ್ನು ಬದಿಗಿಟ್ಟು ತಾವು ಈಗಾಗಲೇ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳನ್ನು ಈಡೇರಿಸಲು ಮುಂದಾಗಬೇಕು. ಹಿಂಸೆಯನ್ನು ಪ್ರಚೋದಿಸುವವರು ಮತ್ತು ದೇಶದ್ರೋಹಿ ಚಟುವಟಿಕೆಗಳಿಗೆ ಬೆಂಬಲ ನೀಡುವವರನ್ನು ಬಂಧಿಸುವಂತೆ ಪೊಲೀಸ್ ಇಲಾಖೆಗೆ ಸೂಚಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶ್ವ ಶುಶ್ರೂಷಕರ ದಿನಾಚರಣೆ



ಮೈಸೂರು, ಮೇ 15(ಎಸ್‌ಬಿಡಿ)– ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ 'ವಿಶ್ವ ಶುಶ್ರೂಷಕರ ದಿನ'ವನ್ನು ಆಚರಿಸಲಾಯಿತು.


ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್ ಮತ್ತು ಜೆಎಸ್‌ಎಸ್ ಶುಶ್ರೂಷ ಶಾಲೆ ಸಹಯೋಗದೊಂದಿಗೆ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೈರುತ್ಯ ರೈಲ್ವೆ ವಲಯ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಶಿಲ್ಪಿ ಅಗರ್‌ವಾಲ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ಶುಶ್ರೂಷಕರ ಸೇವಾ ಮನೋಭಾವವನ್ನು ಪ್ರಶಂಸಿಸಿದರು.

ಈ ಸಂದರ್ಭದಲ್ಲಿ ಉತ್ತಮ ಸೇವೆ ಸಲ್ಲಿಸಿದ ಆರು ಮಂದಿ ಶುಶ್ರೂಷಕರನ್ನು ಡಾ.ಸಿ.ಎನ್.ಮೃತ್ಯುಂಜಯಪ್ಪ ಟ್ರಸ್ಟ್ ವತಿಯಿಂದ ಮ್ಯಾನೇಜಿಂಗ್ ಟ್ರಸ್ಟಿ ಸುಧಾ ಮೃತ್ಯುಂಜಯಪ್ಪ ಆತ್ಮೀಯವಾಗಿ ಅಭಿನಂದಿಸಿದರು. ಆಸ್ಪತ್ರೆಯ ಶುಶ್ರೂಷ ಸೇವೆಗಳ ಮುಖ್ಯಸ್ಥೆ ಜಾನೆಟ್ ಮಥಿಯಾಸ್, ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಎಂ.ಕೆ.ಅಶ್ವತಿದೇವಿ, ಶುಶ್ರೂಷ ಶಾಲೆಯ ಪ್ರಾಂಶುಪಾಲೆ ರೇಣುಕಾದೇವಿ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿದ್ದರು ಉಪಸ್ಥಿತರಿದ್ದರು.

ಮೇ 21ಕ್ಕೆ ತಮಿಳುನಾಡಿಗೆ 'ರಾಜೀವ್ ಜ್ಯೋತಿ ಯಾತ್ರಾ' ವಾಹನ

ಮೈಸೂರು, ಮೇ 15(ಸಿಎನ್)– ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರು ಭಯೋತ್ಪಾದಕರ ಸಂಚಿಗೆ ಬಲಿಯಾದರು. ಅವರಿಗೆ ಆದ ರೀತಿ ದೇಶದ ಯಾವೊಬ್ಬ ಪ್ರಜೆ, ರಾಜಕಾರಣಿಗೆ ಆಗಬಾರದು ಎಂಬ ಉದ್ದೇಶದಿಂದ 'ರಾಜೀವ್ ಜ್ಯೋತಿ ಯಾತ್ರೆ'ಯನ್ನು 32 ವರ್ಷಗಳಿಂದ ದೇಶಾದ್ಯಂತ ಆಚರಿಸುತ್ತಿದ್ದೇವೆ ಎಂದು ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್ ತಿಳಿಸಿದರು.

ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣಕ್ಕೆ ಸೋಮವಾರ ಆಗಮಿಸಿದ 'ರಾಜೀವ್ ಜ್ಯೋತಿ ಯಾತ್ರಾ' ವಾಹನವನ್ನು ಸ್ವಾಗತಿಸಿದ ಬಳಿಕ ಅವರು ಮಾತನಾಡಿದರು.



ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಭಯೋತ್ಪಾದನೆಯನ್ನು ಸಂಪೂರ್ಣ ಮಟ್ಟ ಹಾಕಬೇಕೆಂಬುದು ರಾಜೀವ್ ಗಾಂಧಿಯವರ ಧ್ಯೇಯವಾಗಿತ್ತು. ಆದರೆ 1991ರಲ್ಲಿ ರಾಜೀವ್ ಗಾಂಧಿ ಅವರನ್ನ 'ಆತ್ಮಾಹುತಿ ಬಾಂಬರ್' ತನ್ನನ್ನು ತಾನು ಸ್ಫೋಟಿಸಿಕೊಂಡು ಹತ್ಯೆ ಮಾಡಲಾಗಿತ್ತು. ಹಾಗಾಗಿ ಅವರ ನೆನಪಿನಲ್ಲಿ ದೇಶದಲ್ಲಿ ಶಾಂತಿ ನೆಲೆಸುವ ನಿಟ್ಟಿನಲ್ಲಿ ಸದ್ಭಾವನಾ ದಿನವನ್ನಾಗಿ ದೇಶಾದ್ಯಂತ ಆಚರಣೆ ಮಾಡುತ್ತಿದ್ದೇವೆ ಎಂದರು.

ರಾಜೀವ್ ಗಾಂಧಿ ಅವರು ದೇಶಕ್ಕೆ ಅನೇಕ ಯೋಜನೆಗಳ ಮೂಲಕ ಕೊಡುಗೆ ನೀಡಿದ್ದಾರೆ. ಅವರು ಕೊಟ್ಟಂತಹ ಕೊಡುಗೆಗಳನ್ನ ಭಾರತೀಯರು ಎಂದಿಗೂ ಮರೆಯಲು ಸಾಧ್ಯವಿಲ್ಲ. ಇದೀಗ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ. ರಾಜೀವ್ ಗಾಂಧಿ ಅವರ ಅಭಿವೃದ್ಧಿ ಚಿಂತನೆ, ಅನೇಕ ಯೋಜನೆಗಳನ್ನು ಸಾಕಾರಗೊಳಿಸುವ ಮೂಲಕ ಜನತೆಗೆ ಉತ್ತಮ ಆಡಳಿತ ನೀಡುತ್ತೇವೆ ಎಂದು ಅಭಿಪ್ರಾಯಪಟ್ಟರು.

ಬಳಿಕ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀಮೂರ್ತಿ ಮಾತನಾಡಿ, ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಅವರು ಈ ದೇಶಕ್ಕೆ ಕಿರಿಯ ವಯಸ್ಸಿನ ಪ್ರಧಾನಿಯಾಗಿ ಆಯ್ಕೆಯಾಗಿದ್ದವರು. ಮಹಿಳೆಯರಿಗೆ ಚುನಾವಣೆಗಳಲ್ಲಿ ನಿಲ್ಲಲು ಅವಕಾಶ, 18 ತುಂಬಿದ ವಯಸ್ಕರಿಗೆ ಮತದಾನಕ್ಕೆ ಅವಕಾಶ, ಆಟೋಮೊಬೈಲ್ ಕ್ಷೇತ್ರ ಎಲೆಕ್ಟ್ರಾನಿಕ್ ಮಾಧ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಕೊಡುಗೆ ನೀಡಿದ್ದಾರೆ. ಅವರ ಸೇವೆಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಅಂತವರ ಜ್ಯೋತಿ ನಮ್ಮ ಮೈಸೂರಿಗೆ ಬಂದಿದ್ದು, ನಮ್ಮ ಪುಣ್ಯ ಎಂದು ಸ್ಮರಿಸಿದರು.

ಈ ಸಂದರ್ಭ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀಮೂರ್ತಿ, ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್, ನಗರ ಡಿಸಿಸಿ ಕಾರ್ಯದರ್ಶಿ ಶಿವಣ್ಣ, ಭಾಸ್ಕರ್.ಎಲ್.ಗೌಡ ನಗರ ಪ್ರಧಾನ ಕಾರ್ಯದರ್ಶಿ ಹಿಂ. ವರ್ಗಗಳ ವಿಭಾಗ ಅಧ್ಯಕ್ಷ ನಾಗೇಶ್, ನಗರ ಕಾರ್ಯದರ್ಶಿ ಈಶ್ವರ್ ಚಕ್ಕಡಿ, ಮಾಜಿ ಮೇಯರ್ ಬಿ.ಕೆ.ಪ್ರಕಾಶ್ , ಸಿಂಡಿಕೇಟ್ ಮಾಜಿ ಸದಸ್ಯ ಗೋಪಿನಾಥ್, ಮಾಜಿ ಪಾಲಿಕೆ ಸದಸ್ಯ ಅಶೋಕ್ ಕುಮಾರ್, ನಿರಾಲ್ ಸಿಷಾ ಕೆಪಿಸಿಸಿ ಐಟಿ ಸೆಲ್ ಮೈಸೂರು, ಹಿಂ.ವರ್ಗಗಳ ನಗರ ಕಾರ್ಯದರ್ಶಿ ಮಹೇಶ್, ಟಿ.ನರಸೀಪುರ ಪುರಸಭೆ ಮಾಜಿ ಸದಸ್ಯ ಸೋಮು, ಕೆಪಿಸಿಸಿ ಸದಸ್ಯ ಎಸ್ಟಿನ್ ರಿಚರ್ಡ್, ಡಿಸಿಸಿ ಹಿರಿಯ ಕಾರ್ಯದರ್ಶಿ ರಾಜೇಶ್.ಸಿ, ರದ್ದಿವುಲ್ಲಾ ಖಾನ್ ಮತ್ತಿತರರು ಇದ್ದರು.

ಎಲ್ಲೆಲ್ಲಿ ರಾಜೀವ್ ಜ್ಯೋತಿ ಸಂಚಾರ

ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿ 7 ದಿನಗಳ ಕಾಲ ಸಂಚರಿಸಲಿರುವ ವಾಹನ. ಮೇ 15 ರಂದು ಬೆಂಗಳೂರಿನಿಂದ ಪ್ರಾರಂಭಗೊಂಡು, ಮೈಸೂರು ಅರಮನೆ ಉತ್ತರ ದ್ವಾರ ತಲುಪಿ, ಅಲ್ಲಿಂದ ನಂಜನಗೂಡು, ಚಾಮರಾಜನಗರ ಮಾರ್ಗವಾಗಿ ಸತ್ಯಮಂಗಲ ರಸ್ತೆ, ಕೊಯಮತ್ತೂರು, ತ್ರಿಶೂರ್, ಕೊಚ್ಚಿ, ಅಲಪ್ಪಿ, ಕೊಲ್ಲಂ, ತಿರುವನಂತಪುರಂ, ಕನ್ಯಾಕುಮಾರಿ, ನಾಗರಕೊಯಿಲ್, ತಿರುಮಂಗಲಂ ಮಧುರೈ, ಮೇಲೂರು, ತಿರುಚ್ಚಿ, ಪಾಂಡಿಚೇರಿ, ಮಹಾಬಲಿಪುರಂ, ದಿ 21 ರಂದು ಚೆನ್ನೈ ಮೂಲಕ ರಾಜೀವ್ ಗಾಂಧಿ ಹತ್ಯೆಯಾದ ಸ್ಥಳವಾದ ಪೆರಂಬೂರು ತಲುಪಲಿದೆ.



ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕುವೆ

ಶಾಸಕ ದರ್ಶನ್ ಪುಟ್ಟಣ್ಣಯ್ಯ

ಮಂಡ್ಯ, ಮೇ 15– ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಿ, ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕಲಾಗುವುದು ಎಂದು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ಸೋಮವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೈಕುಳಿಯಿಂದ ಮಾಡುವ ಗಣಿಗಾರಿಕೆಗೆ ನಮ್ಮ ವಿರೋಧವಿಲ್ಲ. ಆದರೆ ದೊಡ್ಡ ಮಟ್ಟದಲ್ಲಿ ಸ್ಫೋಟಕಗಳನ್ನು ಬಳಸಿ ನಡೆಸುವ ಅಕ್ರಮ ಗಣಿಗಾರಿಕೆಗೆ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಕ್ಷೇತ್ರದಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಕ್ಷೇತ್ರದಲ್ಲಿ ಯಾವುದೇ ಗಲಭೆಗಳಿಗೆ ಅವಕಾಶ ನೀಡುವುದಿಲ್ಲ. ಎಲ್ಲರೂ ಶಾಂತಿಯುತವಾಗಿ ಬದುಕಬೇಕು. ಬೇಕೆಂದೆ ಗಲಭೆ ಸೃಷ್ಟಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಆರೋಗ್ಯ, ಕುಡಿಯುವ ನೀರಿನ ಸಮಸ್ಯೆಗಳಿಗೆ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಲಾಗುವುದು ಎಂದರು.

ರೈತರ ಸಮಸ್ಯೆ ಬಗೆಹರಿಸಲು ಗಮನ ಹರಿಸುತ್ತೇನೆ. ಅಲ್ಲದೇ ರೈತರ ಬೆಳೆಗಳಿಗೆ ಬೆಂಬಲ ಬೆಲೆ ದೊರಕಿಸಿಕೊಡಲು ಹೋರಾಟ ಮಾಡಲಾಗುವುದು ಎಂದರು.

ಗೆಲುವು ಸವಾಲಾಗಿತ್ತು: ಅನುಭವಿ ರಾಜಕಾರಣಿ ಸಿ.ಎಸ್.ಪುಟ್ಟರಾಜು ವಿರುದ್ಧ ನನ್ನಂತ ಯುವಕ ಗೆಲ್ಲುವುದು ಒಂದು ಸವಾಲಾಗಿತ್ತು. ರೈತ ಸಂಘ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಪ್ರತಿ ಗ್ರಾಮ ಮಟ್ಟದಲ್ಲಿ ಹಗಲಿರುಳು ದುಡಿದಿದ್ದರಿಂದ ಗೆಲುವು ಸಾಧ್ಯವಾಯಿತು. ನನ್ನ ಮೇಲೆ ನಂಬಿಕೆ ಇಟ್ಟು ಗೆಲ್ಲಿಸಿದ ಕ್ಷೇತ್ರದ ಜನತೆ ನಂಬಿಕೆ ಉಳಿಸಿಕೊಂಡು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ನನ್ನ ಗೆಲುವಿಗೆ ಶ್ರಮಿಸಿದ ಎಲ್ಲಾ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಕ್ಷೇತ್ರದ ಜನತೆ ಪ್ರಚೋದನೆಗೆ ಒಳಗಾಗದೇ ಶಾಂತಿ ಕಾಪಾಡಿಕೊಳ್ಳಬೇಕು. ನಮ್ಮ ರಾಜಕೀಯ ಎದುರಾಳಿಗಳ ಜೊತೆ ಜಿದ್ದು ಸಾಧಿಸದೇ ಸಂಯಮದಿಂದ ವರ್ತಿಸಬೇಕು. ಆ ಮೂಲಕ ರೈತ ಸಂಘದ ಬಲವರ್ಧನೆಗೆ ಶಕ್ತಿ ತುಂಬಬೇಕು. ನನ್ನ ಅಧಿಕಾರಾವಧಿಯಲ್ಲಿ ನಿರುದ್ಯೋಗ ನಿವಾರಣೆ, ಕೃಷಿಗೆ ಪೂರಕವಾಗುವ ಸಣ್ಣ ಕೈಗಾರಿಕೆಗೆ ಆದ್ಯತೆ ನೀಡಲಾಗುವುದು ಎಂದರು.

ಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ರೈತ ಮುಖಂಡರಾದ ಲಿಂಗಪ್ಪಾಜಿ, ಬಾಲ ಚಂದ್ರು, ಪ್ರಸನ್ನ ಎನ್.ಗೌಡ, ನಾಗರಾಜು, ಪ್ರಕಾಶ್, ಚಂದ್ರು ಉಪಸ್ಥಿತರಿದ್ದರು.

ನನ್ನನ್ನು ಯಾರೂ ಬಲಿಪಶು ಮಾಡಿಲ್ಲ: ವಿಜಯಾನಂದ



ಮಂಡ್ಯ, ಮೇ 15– ಚುನಾವಣೆಯಲ್ಲಿ ನಾನು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವ ವಿಚಾರವಾಗಿ ಯಾರ ಒತ್ತಡಕ್ಕೂ ಮಣಿದಿಲ್ಲ. ನನ್ನನ್ನು ಯಾರೂ ಬಲಿಪಶು ಮಾಡಿಲ್ಲ. ಮತದಾರರ ತೀರ್ಪಿಗೆ ನಾನು ಬದ್ಧನಾಗಿದ್ದೇನೆ ಎಂದು ಮಂಡ್ಯ ಕ್ಷೇತ್ರದ ಜೆಡಿಎಸ್ ಬಂಡಾಯ ಪರಾಜಿತ ಅಭ್ಯರ್ಥಿ ಕೆ.ಎಸ್.ವಿಜಯಾನಂದ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಸ್ಪರ್ಧೆಗೆ ಮಾಜಿ ಶಾಸಕರು ಸೇರಿದಂತೆ ಹಲವು ಮುಖಂಡರು ಬೆಂಬಲ ಸೂಚಿಸಿದ್ದಾರೆ. ನನಗೆ 15 ಸಾವಿರಕ್ಕೂ ಹೆಚ್ಚು ಮತಗಳು ಲಭಿಸಿವೆ. ನನ್ನ ಚುನಾವಣೆಗೆ ಶ್ರಮಿಸಿದ ಎಲ್ಲ ಮುಖಂಡರು, ಕಾರ್ಯಕರ್ತರು ಹಾಗೂ ಮತ ನೀಡಿದ ಮತದಾರರಿಗೆ ಹೃದಯ ಪೂರ್ವಕ ಧನ್ಯವಾದ ಅರ್ಪಿಸುತ್ತೇನೆಂದರು.

ಚುನಾವಣಾ ಸ್ಪರ್ಧೆಯಿಂದ ನಾನು ಸಾಲಗಾರನಾಗಿಲ್ಲ. ಜನರ ಭಿಕ್ಷೆಯ ಹಣದಲ್ಲಿ ಚುನಾವಣೆ ಎದುರಿಸಿದ್ದೇನೆ. ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳ ಅಭ್ಯರ್ಥಿಗಳ ಅಬ್ಬರದಲ್ಲಿ ನನಗೆ ಲಭಿಸಿರುವ ಮತಗಳ ಬಗ್ಗೆ ತೃಪ್ತಿಯಿದ್ದು, ಈ ಸಂಬಂಧ ಅನ್ಯರನ್ನು ದೂಷಿಸುವುದು ಬೇಡ. ನಮ್ಮೆಲ್ಲರ ನಿರೀಕ್ಷೆಯಷ್ಟು ಮತಗಳು ಬಾರದಿರಬಹುದು. ಆದರೆ ನನಗೆ ದೊರಕಿರುವ ಮತಗಳು ಪ್ರಾಮಾಣಿಕತೆಯ ಮತಗಳಾಗಿವೆ ಎಂದು ನುಡಿದರು.

ಮಾಜಿ ಶಾಸಕ ಎಂ.ಶ್ರೀನಿವಾಸ್ ಮಾತನಾಡಿ, ಮುಂದಿನ ದಿನಗಳಲ್ಲೂ ನಾವೆಲ್ಲ ಒಟ್ಟಾಗಿದ್ದು, ಚುನಾವಣೆ ಎದುರಿಸಲು ಮುಂದಾಗುತ್ತೇವೆ. ಜೆಡಿಎಸ್ ವೈಫಲ್ಯದಿಂದ ಜಿಲ್ಲೆಯಲ್ಲಿ ಪಕ್ಷದ ಅಭ್ಯರ್ಥಿಗಳು ಸೋಲು ಕಂಡಿದ್ದಾರೆಂದು ವ್ಯಾಖ್ಯಾನಿಸಿದರು.

ವಿಜಯಾನಂದ ಅವರನ್ನು ಯಾರೂ ಬಲಿಪಶು ಮಾಡಲು ಸಾಧ್ಯವಿಲ್ಲ. ನನ್ನ ಆರಂಭದ 2 ಚುನಾವಣೆಯಲ್ಲೂ ಸೋಲು ಕಂಡ ನಂತರ 3ನೇ ಚುನಾವಣೆಯಲ್ಲಿ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಜನರೇ ಹಣ ಹಾಗೂ ಮತ ನೀಡಿ ಹಾರೈಸಿರುವುದು ನಮ್ಮ ಸುದೈವ ಎಂದರು.

ಜಿಪಂ ಮಾಜಿ ಸದಸ್ಯ ಹೆಚ್.ಎನ್. ಯೋಗೇಶ್ ಮಾತನಾಡಿದರು. ಗೋಷ್ಠಿಯಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಮುದ್ದನಘಟ್ಟ ಮಹಾಲಿಂಗೇಗೌಡ, ಮುಖಂಡರಾದ ತಿಮ್ಮೇಗೌಡ, ಲೋಕೇಶ್, ಪುಟ್ಟಸ್ವಾಮಿ ಇತರರಿದ್ದರು.

ಜನಾದೇಶ ಗೌರವಿಸುತ್ತೇನೆ



ಶ್ರೀರಂಗಪಟ್ಟಣ, ಮೇ 15– ಬಿಜೆಪಿ ವಿರುದ್ಧದ ಅಲೆ, ಕಾಂಗ್ರೆಸ್‌ಗೆ ಬಹುಮತ ನೀಡುವ ಗೊಂದಲದಿಂದಾಗಿ ಪ್ರಾದೇಶಿಕ ಪಕ್ಷ ಜೆಡಿಎಸ್ ಅನ್ನು ಕಡೆಗಣಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಹೀಗಾಗಿ ಜನಾದೇಶವನ್ನು ಗೌರವಿಸುತ್ತೇನೆ ಎಂದು ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಜಯ ಗಳಿಸಿದ್ದು, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಶ್ರೀರಂಗಪಟ್ಟಣ ಅಭಿವೃದ್ಧಿ ವಿಚಾರದಲ್ಲಿ ಅವರಿಗೆ ಸಹಕರಿಸುತ್ತೇನೆ. ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ನೂತನ ಶಾಸಕರು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಿ ಎಂದರು. ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಪಂಚರತ್ನ ಯೋಜನೆಯನ್ನು ರಾಜ್ಯದ ಜನರು ಅರ್ಥ ಮಾಡಿಕೊಳ್ಳಲಿಲ್ಲ. ಬಿಜೆಪಿ ವಿರುದ್ಧದ ಅಲೆಯಲ್ಲಿ ಎಲ್ಲರೂ ಆವೇಶದಲ್ಲಿ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ಹೀಗಾಗಿ ಜೆಡಿಎಸ್ ಪಕ್ಷಕ್ಕೆ ಹಿನ್ನಡೆಯಾಗಿದೆ. ಆದರೂ ಜನಾದೇಶ ಗೌರವಿಸುತ್ತೇನೆ ಎಂದರು.

ನಮ್ಮ ವೈಫಲ್ಯದಿಂದ ಸೋಲಾಗಿದೆ

ಅಶೋಕ್ ಜಯರಾಂ ಅಭಿಪ್ರಾಯ



ಮಂಡ್ಯ, ಮೇ 15– ಅಗತ್ಯ ವಸ್ತುಗಳ ಬೆಲೆ ಏರಿಕೆ, ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್ ಸೇರಿದಂತೆ ನಮ್ಮ ವೈಫಲ್ಯದಿಂದಾಗಿ ಸೋಲು ಅನುಭವಿಸಬೇಕಾಯಿತು ಎಂದು ಮಂಡ್ಯ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಅಶೋಕ್ ಜಯರಾಂ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಜನರ ನಾಡಿ ಮಿಡಿತ ಅರ್ಥ ಮಾಡಿಕೊಳ್ಳುವಲ್ಲಿ ನಾವು ವಿಫಲವಾಗಿದ್ದೇವೆ. ಕಾಂಗ್ರೆಸ್‌ನ ಗ್ಯಾರಂಟಿಯಲ್ಲಿ ಐದು ವಿಚಾರಗಳು ಜನರಿಗೆ ಹತ್ತಿರವಾದವು. ನಮ್ಮ ಪ್ರಣಾಳಿಕೆ ಸಹ ತಡವಾಗಿ ಹೊರಬಂದಿತ್ತು. ಇದು ನಮ್ಮ ಸೋಲಿಗೆ ಕಾರಣ ಎಂದರು.

ನಾವು ಹಳ್ಳಿಗಳಿಗೆ ಪ್ರಚಾರಕ್ಕೆ ಹೋದ ವೇಳೆ ಜನತೆ ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ ಮಂಡ್ಯ ಲೋಕಸಭಾ ವ್ಯಾಪ್ತಿಯಲ್ಲಿ ಬಿಜೆಪಿ ಕಳೆದ ಬಾರಿಗಿಂತಲೂ ಈ ಬಾರಿ ಹೆಚ್ಚಿನ ಮತ ಪಡೆದಿದೆ ಎಂದರು.

ಕಳೆದ ಬಾರಿ ಬಿಜೆಪಿ ಅಭ್ಯರ್ಥಿಗಿಂತ ಈ ಬಾರಿ ಒಂದೂವರೆ ಸಾವಿರ ಮತ ಕಡಿಮೆಯಾಗಿದೆ. 2 ಬಾರಿ ಕ್ಷೇತ್ರಾದ್ಯಂತ ಪ್ರಚಾರ ನಡೆಸಿದರೂ ನಮ್ಮ ಕೈ ಹಿಡಿಯುವಲ್ಲಿ ಜನರು ಆಸಕ್ತಿ ವಹಿಸದಿರುವುದು ನಮ್ಮ ವೈಫಲ್ಯವೇ ಹೊರತು ಬೇರೆಯವರ ಮೇಲೆ ಹೊಣೆ ಹೊರಿಸುವುದು ಸರಿಯಲ್ಲ ಎಂದರು.

2018ರಲ್ಲಿ ಕಾಂಗ್ರೆಸ್ ಆಡಳಿತ ವಿರೋಧಿ ಅಲೆ ಇತ್ತು. ಆಗ ನಮ್ಮ ಪಕ್ಷ ಹೆಚ್ಚಿನ ಸ್ಥಾನ ಗೆಲ್ಲುವುದಕ್ಕೆ ಸಾಧ್ಯವಾಗಿತ್ತು. ಈ ಬಾರಿ ಕಾಂಗ್ರೆಸ್ ಪರ ಅಲೆ ಇದ್ದುದರಿಂದಾಗಿ ಹೆಚ್ಚಿನ ಸ್ಥಾನಗಳನ್ನು ಅವರು ಗೆದ್ದಿದ್ದಾರೆ. ಬಿಜೆಪಿಗೆ ಮತ ಹಾಕಿದ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಹರ್ಷ, ನಗರಾಧ್ಯಕ್ಷ ವಿವೇಕ್, ನಗರಸಭೆ ಮಾಜಿ ಸದಸ್ಯ ಚಂದ್ರು, ಮುಖಂಡರಾದ ಭೀಮೇಶ್, ಸತೀಶ್ ಗೋಷ್ಠಿಯಲ್ಲಿದ್ದರು.

ನನ್ನ ಗೆಲುವು ಜೆಡಿಎಸ್ ಮುಖಂಡರಿಗೆ ಅರ್ಪಣೆ: ಹೆಚ್‌ಟಿಎಂ



ಕೆ.ಆರ್.ಪೇಟೆ, ಮೇ 15– ನನ್ನ ಗೆಲುವನ್ನು ತಾಲೂಕಿನ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರಿಗೆ ಸಮರ್ಪಿಸುತ್ತೇನೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕು ಜೆಡಿಎಸ್ ಭದ್ರಕೋಟೆ ಎಂದು ಸಾಬೀತಾಗಿದೆ. ಎಂತಹ ಕಠಿಣ ಪರಿಸ್ಥಿತಿಯಲ್ಲೂ ಕಾರ್ಯಕರ್ತರು ಧೃತಿಗೆಡದೆ ಪಕ್ಷ ಸಂಘಟನೆಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರದೊಂದಿಗೆ ತಾಲೂಕಿನ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನಾನು ಗ್ರಾಮೀಣ ಬಡಕುಟುಂಬದಿಂದ ಬಂದವನು. ಎಲ್ಲಾ ವರ್ಗದ ಕಷ್ಟ ಗೊತ್ತಿದೆ. ಯುವಕರಿಗೆ ಉದ್ಯೋಗ, ರೈತರ ಸಮಸ್ಯೆಗಳಿಗೆ ಪರಿಹಾರ ಸೇರಿದಂತೆ ಕ್ಷೇತ್ರದ ಅಭಿವೃದ್ಧಿಗೆ ನನ್ನದೇ ಆದ ಆಲೋಚನೆಗಳಿವೆ. ಅವುಗಳ ಈಡೇರಿಕೆಗೆ ನಿಮ್ಮೆಲ್ಲರ ಸಹಕಾರ ಅಗತ್ಯ ಎಂದರು.

ನಿಖಿಲ್ ಕುಮಾರಸ್ವಾಮಿ ಹಾಗೂ ನನ್ನ ರಾಜಕೀಯ ಗುರುಗಳಾದ ಸಿ.ಎಸ್.ಪುಟ್ಟರಾಜು ಅವರ ಸೋಲು ನನ್ನ ಮನಸ್ಸಿನ ಮೇಲೆ ಭಾರೀ ಆಘಾತವನ್ನುಂಟು ಮಾಡಿದೆ ಎಂದ ಅವರು, ಕಾರ್ಯಕರ್ತರು ಚುನಾವಣೆ ವೇಳೆ ಶಕ್ತಿಮೀರಿ ಕೆಲಸ ಮಾಡಿದ ಫಲವಾಗಿ ಇಂದು ಶಾಸಕನಾಗಿ ಆಯ್ಕೆಯಾಗಲು ಸಾಧ್ಯವಾಗಿದೆ. ಚುನಾವಣೆ ಮುಗಿದಿದೆ. ರಾಜಕಾರಣದಲ್ಲಿ ಸೋಲು ಗೆಲುವು ಸಹಜ. ತಾಲೂಕಿನ ಅಭಿವೃದ್ಧಿಗಾಗಿ ವಿಪಕ್ಷದವರ ಸಹಕಾರ ಕೋರುತ್ತೇನೆ. ತಾಲೂಕನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸಲು ಪಕ್ಷಾತೀತವಾಗಿ ಸಹಕರಿಸಬೇಕೆಂದು ಮನವಿ ಮಾಡಿದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಎ.ಎನ್. ಜಾನಕೀರಾಂ ಮಾತನಾಡಿ, ತಾಲೂಕಿನ ಜನತೆ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ. ಮಂಜು ಅವರಿಗೆ 80 ಸಾವಿರಕ್ಕೂ ಅಧಿಕ ಮತಗಳನ್ನು ನೀಡಿ ಜಯಶೀಲರನ್ನಾಗಿ ಮಾಡಿದ್ದಾರೆ. ಇವರ ಗೆಲುವಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಅಭಿನಂದನೆ ತಿಳಿಸುತ್ತೇನೆ ಎಂದರು.

ಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರಾದ ಎಸ್.ಎಲ್.ಮೋಹನ್, ಎ.ಆರ್.ರಘು, ಎಂ.ಬಿ.ಹರೀಶ್, ಬಿ.ವಿ. ನಾಗೇಶ್, ಹೆಚ್.ಕೆ. ಅಶೋಕ್, ಎಂ.ಬಿ. ಹರೀಶ್, ತಾಲೂಕು ವೀರ ಶೈವ ಮಹಾಸಭಾ ಅಧ್ಯಕ್ಷ ವಕೀಲ ವಿ.ಎಸ್. ಧನಂಜಯಕುಮಾರ್ ಮತ್ತಿತರರಿದ್ದರು.

ಎಲ್‌ಕೆಆರ್ ಶಾಲೆಗೆ ಶೇ.100ರಷ್ಟು ಫಲಿತಾಂಶ



ಕೃತಿಕ ಎನ್.ಗೌಡ | ಐ.ಕೆ.ವಿಜೇತಾ | ಎನ್.ಮೋನಿಕಾ | ಬಿಪಿನ್ ರಾಮ್

ಪಾಂಡವಪುರ, ಮೇ 15– ಪಟ್ಟಣದ ಎಲ್‌ಕೆಆರ್ ಶಾಲೆ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಗಳಿಸಿದೆ. ಶಾಲೆಯ ವಿದ್ಯಾರ್ಥಿಗಳಾದ ಕೃತಿಕ ಎನ್.ಗೌಡ ಶೇ.94, ಐ.ಕೆ.ವಿಜೇತಾ ಶೇ.93.6, ಎನ್.ಮೋನಿಕಾ ಶೇ.92.6, ಬಿಪಿನ್ ರಾಮ್–ಶೇ.90 ಅಂಕ ಗಳಿಸಿದ್ದು, ಶಾಲೆ 10 ವಿದ್ಯಾರ್ಥಿಗಳು ಅತ್ಯುನ್ನತ ಹಾಗೂ 16 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಭಾ ಪುರಸ್ಕಾರ: ಅರ್ಜಿ ಆಹ್ವಾನ

ಕೆ.ಆರ್.ಪೇಟೆ, ಮೇ 15– ತಾಲೂಕಿನ ಆರ್‌ಟಿಓ ಮಲ್ಲಿಕಾರ್ಜುನ್ ಅಭಿಮಾನಿ ಬಳಗ 2022–23ನೇ ಸಾಲಿನಲ್ಲಿ ಅತೀ ಹೆಚ್ಚು ಅಂಕ ಪಡೆದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಶೇ.95ರಷ್ಟು ಹಾಗೂ ಪಿಯುಸಿಯಲ್ಲಿ ಶೇ.90ರಷ್ಟು ಹೆಚ್ಚು ಅಂಕ ಪಡೆದ ತಾಲೂಕಿನ ವಿದ್ಯಾರ್ಥಿಗಳಿಗೆ ಮೇ 20 ರಂದು ಪ್ರತಿಭಾ ಪುರಸ್ಕಾರ ನೀಡಲಾಗುವುದು. ಹೀಗಾಗಿ ಅಗತ್ಯ ದಾಖಲೆಗಳೊಂದಿಗೆ ಮೇ 17ರೊಳಗೆ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಮೊ.9731279740 / 08230– 200235 ಸಂಪರ್ಕಿಸಿ.

ಅರ್ಜಿ ಆಹ್ವಾನ

ಮಂಡ್ಯ, ಮೇ 15– 2023–24ನೇ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶ ಮೇ 9 ರಿಂದ ಪ್ರಾರಂಭವಾಗಿದ್ದು, ಅರ್ಜಿ ಸಲ್ಲಿಸಲು ಮೇ 18 ರಂದು ಕೊನೆ ದಿನ. ಮಾಹಿತಿಗೆ ಕಚೇರಿ ಅಥವಾ ಮೊ: 9844431325/9740987102 ಅನ್ನು ಸಂಪರ್ಕಿಸಬಹುದು ಎಂದು ಶ್ರೀರಂಗಪಟ್ಟಣ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಕಟಣೆ ತಿಳಿಸಿದೆ.

ಸಿಬಿಎಸ್‌ಇ ಪರೀಕ್ಷೆಯಲ್ಲಿ ಅವಳಿ ಸಹೋದರಿಯರ ಸಾಧನೆ



ರೋಹಿಣಿ (ಶೇ.89) | ರೇಣುಕ (ಶೇ.78.8)

ಮೈಸೂರು, ಮೇ 15–ಈ ಸಾಲಿನ ಸಿಬಿಎಸ್‌ಇ ಪರೀಕ್ಷೆಯಲ್ಲಿ ಮೈಸೂರಿನ ವಿಶ್ವೇಶ್ವರನಗರದ ಸೇಂಟ್ ಥಾಮಸ್ ಇಂಗ್ಲಿಷ್ ಮಾಧ್ಯಮ ಶಾಲೆಯ ವಿದ್ಯಾರ್ಥಿನಿಯರಾದ ರೋಹಿಣಿ (ಶೇ. 89) ಮತ್ತು ರೇಣುಕ (ಶೇ.78.8) ಅಂಕ ಗಳಿಸುವ ಮೂಲಕ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರು ಟಿ.ಕೃಷ್ಣ ಮತ್ತು ರೇಷ್ಮೆ ಉಪನಿರ್ದೇಶಕರ ಕಚೇರಿಯ ಅಧೀಕ್ಷಕರಾದ ಮಣಿ ಅವರು ಪುತ್ರಿಯರು.

ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 15– ಮೈಸೂರಿನ ನರಸಿಂಹರಾಜ ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯಕ್ಕೆ 2023–24ನೇ ಸಾಲಿಗೆ ಐದನೇ ತರಗತಿಯಿಂದ ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಊಟ, ತಿಂಡಿ ಮತ್ತು ವಸತಿ ಸೌಕರ್ಯಗಳು ಉಚಿತವಾಗಿದ್ದು, ಎಲ್ಲಾ ಜಾತಿಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ನಿಗದಿತ ಅರ್ಜಿ ಫಾರಂಗಳನ್ನು ನಿಲಯದ ಆಡಳಿತ ಕಚೇರಿಯಲ್ಲಿ ವಿತರಿಸಲಾಗುವುದು. ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಜಾತಿ ಆದಾಯ ಪ್ರಮಾಣ ಪತ್ರ, ವರ್ಗಾವಣೆ ಪತ್ರ, 4 ಭಾವಚಿತ್ರ, ಆಧಾರ್ ಕಾರ್ಡ್ ದಾಖಲಾತಿಗಳೊಡನೆ ಅರ್ಜಿ ಸಲ್ಲಿಸುವಂತೆ ನಿಲಯದ ಕಾರ್ಯದರ್ಶಿ ಎಂ. ಪಾಟೀಲ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9739385079, 9686768828 ಸಂಪರ್ಕಿಸಬಹುದು.

ನಾಪತ್ತೆ



ನಾಮಿಜಾ | ಎಸ್.ಸುಬ್ಬಯ್ಯನ್ | ನಸ್ರುಲ್ಲಾ | ಬಿಮ್ಲಾ ಔದ್ | ಎಸ್.ಮನೋಜ್

ಮೈಸೂರು, ಮೇ 15– ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಮಹಿಳೆ ಸೇರಿದಂತೆ ಐವರು ಕಾಣೆಯಾಗಿರುವ ಬಗ್ಗೆ ಉದಯಗಿರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೊದಲನೇ ಪ್ರಕರಣದಲ್ಲಿ, ನಾಮೀಜಾ (45) ಏ.24ರಂದು ಬೆಳಗ್ಗೆ 11.30ರ ಸಮಯದಲ್ಲಿ ಮನೆಗೆ ಸಾಮಾನು ತೆಗೆದುಕೊಂಡು ಬರುವುದಾಗಿ ಹೇಳಿ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಫಹೀಮಾ ಬೇಗಂ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಉದಯಗಿರಿ ಪೊಲೀಸ್ ಠಾಣೆಗೆ ತಿಳಿಸಲು ಕೋರಲಾಗಿದೆ.

ಎರಡನೇ ಪ್ರಕರಣದಲ್ಲಿ, ಎಸ್.ಸುಬ್ಬಯ್ಯನ್ (70) ಅವರು ಕೆ.ಎನ್.ಪುರದಲ್ಲಿ ವಾಸವಾಗಿರುವ ತಂಗಿ ಲಕ್ಷ್ಮೀ ಅವರ ಮಗ ಅರುಣ್ ಮದುವೆ ಕಾರ್ಯಕ್ಕೆ ಏ. 28 ರಂದು ಮೈಸೂರಿಗೆ ಬಂದು ತಂಗಿ ಮನೆಯಲ್ಲಿ ಉಳಿದುಕೊಂಡಿದ್ದರು. ಏ. 30 ರಂದು ಮೈಸೂರಿನ ಪಡುವಾರಹಳ್ಳಿಯಲ್ಲಿ ಮದುವೆ ಕಾರ್ಯ ಮುಗಿಸಿ ವಾಪಸ್ ತನ್ನ ತಂಗಿ ಲಕ್ಷ್ಮಿ ಮನೆಯಲ್ಲಿ ಉಳಿದುಕೊಂಡಿದ್ದರು. ಮೇ 2 ರಂದು ವಾಕಿಂಗ್ ಮಾಡಿಕೊಂಡು ಬರುವುದಾಗಿ ಹೇಳಿ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಆಕೆ ಪತಿ ಕೌಶಲ್ಯ ದೂರಿನಲ್ಲಿ ತಿಳಿಸಿದ್ದಾರೆ.

ಮೂರನೇ ಪ್ರಕರಣದಲ್ಲಿ ಸೈಯದ್ ನಸ್ರುಲ್ಲಾ (32) ಮೇ 1 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಹೊರಗಡೆ ಹೋಗಿ ಬರುವುದಾಗಿ ಹೇಳಿ ಮನೆಯಿಂದ ಹೋದವರು ಇದುವರೆಗೂ ವಾಪಸ್ ಮನೆಗೆ ಬಂದಿಲ್ಲ ಎಂದು ಆತನ ಪತ್ನಿ ಶ್ರೀಮತಿ ನೂರ್ ಐಷಾ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಉದಯಗಿರಿ ಪೊಲೀಸ್ ಠಾಣೆಗೆ ತಿಳಿಸಲು ಕೋರಲಾಗಿದೆ.

ನಾಲ್ಕನೇ ಪ್ರಕರಣದಲ್ಲಿ ಬಿಮ್ಲಾ ಔದ್ (49) ನಾಪತ್ತೆಯಾದವರು. ಈಕೆ ಮೇ 1 ರಂದು ಬೆಳಗ್ಗೆ 6 ಗಂಟೆ ಸಮಯದಲ್ಲಿ ಹೆಬ್ಬಾಳಿನ ಬಸವನಗುಡಿ ಸರ್ಕಲ್ ಬಳಿ ಇರುವ ಪಾರ್ಕಿಗೆ ವಾಕಿಂಗ್‌ಗೆ ಹೋಗುವುದಾಗಿ ಹೇಳಿ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಆಕೆಯ ಪತಿ ಜೋಗಿದಾಸ್ ದೂರಿನಲ್ಲಿ ತಿಳಿಸಿದ್ದಾರೆ.

ಐದನೇ ಪ್ರಕರಣದಲ್ಲಿ ಎಸ್.ಮನೋಜ್ (23) ನಾಪತ್ತೆಯಾಗಿದ್ದಾರೆ. ಈತ ಏಪ್ರಿಲ್ 12 ರಂದು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಪಲ್ಸರ್ ಬೈಕ್‌ನಲ್ಲಿ ಮನೆಯಿಂದ ಹೊರ ಹೋದವನು ಇದುವರೆಗೂ ವಾಪಸ್ ಬಂದಿಲ್ಲ ಎಂದು ಆತನ ತಾಯಿ ಶಕುಂತಲ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ.0821–2418339, 2418315, ಮೊ. 9480802239 ಸಂಪರ್ಕಿಸಲು ಕೋರಲಾಗಿದೆ.

ಎಸ್‌ಆರ್‌ಹೆಚ್ ವಿರುದ್ಧ ಗೆದ್ದ ಜಿಟಿ ಪ್ಲೇಆಫ್‌ಗೆ



ಅಹಮದಾಬಾದ್, ಮೇ 15– ಶುಭ್‌ಮನ್ ಗಿಲ್ ಅವರ ಚೊಚ್ಚಲ ಶತಕ, ಮೊಹಮ್ಮದ್ ಶಮಿ ಹಾಗೂ ಮೋಹಿತ್ ಶರ್ಮಾ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಗುಜರಾತ್ ಟೈಟನ್ಸ್ 34 ರನ್‌ಗಳ ಜಯ ಸಾಧಿಸಿದೆ.

ಆ ಮೂಲಕ ಗುಜರಾತ್ ಟೈಟಾನ್ಸ್ ಆಡಿರುವ 13 ಪಂದ್ಯಗಳ ಪೈಕಿ 9ರಲ್ಲಿ ಗೆಲುವು ಸಾಧಿಸಿ, 4 ಪಂದ್ಯಗಳಲ್ಲಿ ಸೋಲು ಅನುಭವಿಸಿ ಒಟ್ಟು 18 ಅಂಕಗಳೊಂದಿಗೆ ಪ್ರಸಕ್ತ ಸಾಲಿನ ಮೊದಲ ತಂಡವಾಗಿ ಪ್ಲೇಆಫ್‌ಗೆ ಎಂಟ್ರಿ ಕೊಟ್ಟಿದೆ. ಅತ್ತ ಹೈದರಾಬಾದ್ ಆಡಿರುವ 12 ಪಂದ್ಯಗಳ ಪೈಕಿ 4ರಲ್ಲಿ ಗೆಲುವು ಸಾಧಿಸಿ, 8 ಪಂದ್ಯಗಳಲ್ಲಿ ಸೋತು 8 ಅಂಕಗಳಿಸಿ ಟೂರ್ನಿಯಿಂದ ಹೊರಬಿದ್ದಿದೆ.

189 ರನ್‌ಗಳ ಗುರಿ ಬೆನ್ನತ್ತಿದ ಹೈದರಾಬಾದ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 154 ರನ್ ಗಳಿಸುವ ಮೂಲಕ ಸೋಲು ಅನುಭವಿಸಿತು. ತಂಡದ ಪರ ಹೆನ್ರಿಕ್ ಕ್ಲಾಸೆನ್ 44 ಎಸೆತಗಳಲ್ಲಿ 3 ಸಿಕ್ಸರ್, 4 ಬೌಂಡರಿ ಒಳಗೊಂಡ 64, ಭುವನೇಶ್ವರ್ ಕುಮಾರ್ 27, ಮಯಾಂಕ್ ಮಾರ್ಕಂಡೆ 18, ಐಡನ್ ಮಾರ್ಕಮ್ 10 ರನ್ ಗಳಿಸಿದ್ದು ಬಿಟ್ಟರೇ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಗುಜರಾತ್ ಪರ ಮೊಹಮ್ಮದ್ ಶಮಿ ಹಾಗೂ ಮೋಹಿತ್ ಶರ್ಮಾ ತಲಾ 4, ಯಶ್ ಧಯಾಳ್ 1 ವಿಕೆಟ್ ಕಬಳಿಸಿದರು.


ಇದಕ್ಕೂ ಮುನ್ನಾ ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟನ್ಸ್ ಖಾತೆ ತೆರೆಯುವ ಮುನ್ನವೇ ವೃದ್ಧಿಮಾನ್ ಸಾಹ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ಶುಭ್‌ಮನ್ ಗಿಲ್ ಹಾಗೂ ಸಾಯಿ ಸುದರ್ಶನ್ ಹೈದರಾಬಾದ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಈ ಜೋಡಿ 147 ರನ್‌ಗಳ ಬೃಹತ್ ಕಾಣಿಕೆ ನೀಡಿ ಬೇರ್ಪಟ್ಟಿತು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಸಾಯಿ ಸುದರ್ಶನ್ 47ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದ ಗಿಲ್ ಚೊಚ್ಚಲ ಶತಕ ಸಿಡಿಸಿ ಸಂಭ್ರಮಿಸಿದರು. 58 ಎಸೆತಗಳಲ್ಲಿ 1 ಸಿಕ್ಸರ್, 13 ಬೌಂಡರಿ ಒಳಗೊಂಡ 101 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಗಿಲ್ ನಿರ್ಗಮನದ ಬಳಿಕ ಗುಜರಾತ್ ದಿಢೀರ್ ಕುಸಿತಕ್ಕೆ ಒಳಗಾಯಿತು. ಅಂತಿಮವಾಗಿ ಗುಜರಾತ್ ಟೈಟನ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 188 ರನ್ ಗಳಿಸಿತು. ಹೈದರಾಬಾದ್ ಪರ ಬೌಲಿಂಗ್‌ನಲ್ಲಿ ಭುವನೇಶ್ವರ್ ಕುಮಾರ್ 5, ಮಾರ್ಕೊ ಜಾನ್ಸೆನ್, ಫಜಲ್ಲಕ್ ಫಾರೂಕಿ ಹಾಗೂ ಟಿ.ನಟರಾಜನ್ ತಲಾ ಒಂದೊಂದು ವಿಕೆಟ್ ಪಡೆದರು. ಗುಜರಾತ್ ಪರ ಶತಕ ಸಿಡಿಸಿದ ಶುಭ್‌ಮನ್ ಗಿಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ವೈದ್ಯರ ಭೇಟಿಗಾಗಿ ಬಿಸಿಲಿನಲ್ಲೇ 7 ಕಿಮೀ ನಡೆದ ಗರ್ಭಿಣಿ ಬುಡಕಟ್ಟು ಮಹಿಳೆ ಸಾವು

ಪಾಲ್ಘರ್: ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ(ಪಿಎಚ್‌ಸಿ)ಕ್ಕೆ ಹೋಗಿ ಬರಲು ಬಿಸಿಲಿನಲ್ಲೇ ತನ್ನ ಗ್ರಾಮದಿಂದ ಏಳು ಕಿಲೋ ಮೀಟರ್ ನಡೆದ 21 ವರ್ಷದ ಗರ್ಭಿಣಿ ಬುಡಕಟ್ಟು ಮಹಿಳೆಯೊಬ್ಬರು ಬಿಸಿಲಿನ ತಾಪದಿಂದ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ಸೋಮವಾರ ಹೇಳಿದ್ದಾರೆ.

ಶುಕ್ರವಾರ ಈ ಘಟನೆ ನಡೆದಿದ್ದು, ದಹಾನು ತಾಲೂಕಿನ ಓಸರ್ ವೀರ ಗ್ರಾಮದ ಸೋನಾಲಿ ವಾಘಾಟ್ ಅವರು ಬಿಸಿಲಿನ ಬೇಗೆಯಲ್ಲೇ 3.5 ಕಿ.ಮೀ ದೂರ ನಡೆದು ಸಮೀಪದ ಹೆದ್ದಾರಿಗೆ ತೆರಳಿ ಅಲ್ಲಿಂದ ಆಟೋ ರಿಕ್ಷಾದಲ್ಲಿ ಆಸ್ಪತ್ರೆಗೆ ತೆರಳಿದ್ದಾರೆ ಎಂದು ಪಾಲ್ಘರ್ ಜಿಲ್ಲಾ ಸಿವಿಲ್ ಸರ್ಜನ್ ಡಾ ಸಂಜಯ್ ಬೋಡಾಡೆ ಪಿಟಿಐಗೆ ತಿಳಿಸಿದ್ದಾರೆ. ಒಂಬತ್ತನೇ ತಿಂಗಳಿನಲ್ಲಿದ್ದ ಮಹಿಳೆಗೆ ಪಿಎಚ್‌ಸಿಯಲ್ಲಿ ಚಿಕಿತ್ಸೆ ನೀಡಿ ಮನೆಗೆ ಕಳುಹಿಸಲಾಗಿದೆ. ಆದರೆ ಆ ಮಹಿಳೆ ಮತ್ತೆ ಉರಿ ಬಿಸಿಲಿನಲ್ಲಿಯೇ ಹೆದ್ದಾರಿಯಿಂದ ಮನೆಗೆ 3.5 ಕಿಮೀ ದೂರ ನಡೆದುಕೊಂಡು ಹೋಗಿದ್ದಾರೆ ಎಂದು ಅವರು ಹೇಳಿದ್ದಾರೆ.

ಸಂಜೆ ನಂತರ, ಅವರ ಆರೋಗ್ಯದಲ್ಲಿ ತೊಂದರೆ ಕಾಣಿಸಿಕೊಂಡಿದ್ದು, ಧುಂಡಲವಾಡಿ ಪಿಎಚ್‌ಸಿಗೆ ಹೋಗಿದ್ದಾರೆ. ಅಲ್ಲಿಂದ ಅವರನ್ನು ಕಳಸ ಉಪವಿಭಾಗೀಯ ಆಸ್ಪತ್ರೆ(ಎಸ್‌ಡಿಹೆಚ್) ದಾಖಲಿಸಲಾಗಿದೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಹಿಳೆ ಮೃತಪಟ್ಟಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.



ಚಾಮರಾಜ ವಿಧಾನಸಭಾ ಕ್ಷೇತ್ರದ ನೂತನ ಶಾಸಕ ಕೆ. ಹರೀಶ್‌ಗೌಡ ಅವರನ್ನು ಕಾಂಗ್ರೆಸ್ ಮುಖಂಡರಾದ ದಳಪತಿ ರಮೇಶ್, ಕದಂಬ ಸುರೇಶ್, ರಜಿನಿ, ವೈ. ಸುರೇಶ್, ಹೆಚ್. ಮಂಜು, ನಂದಿನಿ ಸುರೇಶ್ ಅಭಿನಂದಿಸಿದರು.


ಮೇಟಗಳ್ಳಿ ಜೆಎಸ್‌ಎಸ್ ಪ್ರೌಢಶಾಲೆಗೆ ಶೇ.100 ಫಲಿತಾಂಶ



ವಿಶಾಲ್‌ಬಿ.ಎ. 617 | ಎಸ್.ವಿಕಾಸ್ 605 | ವರ್ಷ ಎಸ್.ಗೌಡ 582 | ಸಿ.ಎಂ.ಗಗನ್ ಸೂರ್ಯ 576 | ಎಸ್.ಚಂದನ 567

ಮೈಸೂರು, ಮೇ 15– ಮಾರ್ಚ್–ಏಪ್ರಿಲ್ 2023ರ ತಿಂಗಳಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೇಟಗಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆಗೆ ಶೇ.100 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆ ತೆಗೆದುಕೊಂಡ ಒಟ್ಟು 54 ವಿದ್ಯಾರ್ಥಿಗಳಲ್ಲಿ 54 ಮಂದಿ ಉತ್ತೀರ್ಣರಾಗಿದ್ದು, ಅತ್ಯುನ್ನತ ಶ್ರೇಣಿಯಲ್ಲಿ 05, ಪ್ರಥಮ ದರ್ಜೆಯಲ್ಲಿ 22, ದ್ವಿತೀಯ ಶ್ರೇಣಿಯಲ್ಲಿ–18 B ಶ್ರೇಣಿಯಲ್ಲಿ–09 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. 16 ವಿದ್ಯಾರ್ಥಿಗಳು ಶೇಕಡ 85ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ್ದು, ವಿಶಾಲ್ ಬಿ.ಎ. ಎಂಬ ವಿದ್ಯಾರ್ಥಿಯು 625ಕ್ಕೆ 617 ಅಂಕ, ವಿಕಾಸ್.ಎಸ್ ಎಂಬ ವಿದ್ಯಾರ್ಥಿಯು 625ಕ್ಕೆ 605 ಅಂಕ ಗಳಿಸಿದ್ದಾರೆ.


ಅತಿಶಯ್ ಐಯ್ಯಂಗಾರ್‌ಗೆ 576 ಅಂಕ



ಮೈಸೂರು, ಮೇ 15– ಈ ಸಾಲಿನ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ನಗರದ ಗೋಕುಲಂ 3ನೇ ಹಂತದಲ್ಲಿರುವ ಮೈಸೂರು ವೆಸ್ಟ್ ಲಯನ್ಸ್ ಸೇವಾನಿಕೇತನ್ ಸ್ಕೂಲ್‌ನ ವಿದ್ಯಾರ್ಥಿ ಅತಿಶಯ್ ಅಯ್ಯಂಗಾರ್ 576 ಅಂಕ (ಶೇ.96) ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ, ಶಾಲೆಗೆ 2ನೇ ಟಾಪರ್ ಆಗಿದ್ದಾರೆ.

ಈತ ಇಂಗ್ಲಿಷ್‌ನಲ್ಲಿ 94, ಕನ್ನಡದಲ್ಲಿ 98, ಗಣಿತದಲ್ಲಿ 92, ವಿಜ್ಞಾನದಲ್ಲಿ 95, ಸಮಾಜ ವಿಜ್ಞಾನದಲ್ಲಿ–99 ಹಾಗೂ ಇನ್‌ಫರ್ಮೇಷನ್ ಟೆಕ್ನಾಲಜಿಯಲ್ಲಿ–98 ಅಂಕ ಗಳಿಸಿದ್ದಾರೆ. ಈತ ನಗರದ ಯಾದವಗಿರಿಯ 3ನೇ ಮೇನ್ ಪರಮಹಂಸ ರಸ್ತೆಯ ನಿವಾಸಿ ಬಿ.ಎಸ್. ಅಮೃತ ಅವರ ಪುತ್ರ.

ಸಿಬಿಎಸ್‌ಇ ಪರೀಕ್ಷೆಯಲ್ಲಿ ಶ್ರೀ ಆದಿಚುಂಚನಗಿರಿ ಸೆಂಟ್ರಲ್ ಸ್ಕೂಲ್‌ಗೆ ಉತ್ತಮ ಫಲಿತಾಂಶ



ಚಿನ್ಮಯ್‌ಗೌಡ ಆರ್. (ಶೇ.97.4) | ಆರ್.ಲಿಕಿತ್ (ಶೇ.87.6) | ಎಸ್.ಮೇಘನ (ಶೇ.91.2) | ಡಿ.ಪುಷ್ಯಂತ್ (ಶೇ.89.2) | ಎಸ್.ಶುಭಾಂಗ್ (ಶೇ.87.8)

ಮೈಸೂರು, ಮೇ 15– ಈ ಸಾಲಿನ ಸಿಬಿಎಸ್‌ಇ ಪರೀಕ್ಷೆಯಲ್ಲಿ ಶ್ರೀ ಆದಿಚುಂಚನಗಿರಿ ಸೆಂಟ್ರಲ್ ಸ್ಕೂಲ್‌ಗೆ ಉತ್ತಮ ಫಲತಾಂಶ ಬಂದಿದೆ. ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳಲ್ಲಿ 15 ಮಂದಿ ಅತ್ಯುನ್ನತ ಶ್ರೇಣಿ, 15 ಮಂದಿ ಪ್ರಥಮ ದರ್ಜೆ, 20 ಮಂದಿ ದ್ವಿತೀಯ ದರ್ಜೆ ಮತ್ತು 9 ಮಂದಿ ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ತಿರುಮಲ ಪಬ್ಲಿಕ್ ಶಾಲೆಗೆ ಉತ್ತಮ ಫಲಿತಾಂಶ



ಎಂ.ಎಸ್.ಗಿರಿಜಾಂಬ | ಅಮಿತ್‌ಗೌಡ | ಜೆ.ಕೃಪಾ | ಪಿ.ಕಂಪನ | ಪೂಜಶ್ರೀ | ಭಾವನ ಎ.ಆರ್.

ಮೈಸೂರು, ಮೇ 15– ಸರ್ದಾರ್ ವಲ್ಲಭಬಾಯಿ ಪಟೇಲ್ ನಗರದ ತಿರುಮಲ ಪಬ್ಲಿಕ್ ಶಾಲೆಯು ಈ ಬಾರಿಯ 10ನೇ ತರಗತಿ ಸಿಬಿಎಸ್‌ಇ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ. ಶಾಲೆಯ 6 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 11 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಮತ್ತು 7 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಎಂ.ಎಸ್. ಗಿರಿಜಾಂಬ (ಶೇ. 89.2), ಅಮಿತ್‌ಗೌಡ (ಶೇ. 87.8), ಜೆ. ಕೃಪಾ (ಶೇ.86.2), ಪಿ. ಕಂಪನ (ಶೇ. 82.8), ಪೂಜಶ್ರೀ (ಶೇ.81.8), ಎ.ಆರ್. ಭಾವನಾ (ಶೇ. 80.04) ಅಂಕಗಳನ್ನು ಪಡೆದಿದ್ದಾರೆ.

ಕಾರ್ಮಿಕನ ಮೇಲೆ ಕಾಡಾನೆ ದಾಳಿ



ಸಿದ್ದಾಪುರ, ಮೇ 15– ಅಂಗಡಿಗೆ ತೆರಳಿ ತೋಟದ ಲೈನ್ ಮನೆಗೆ ಹಿಂತಿರುಗುತ್ತಿದ್ದ ತೋಟದ ಕಾರ್ಮಿಕ ದಂಪತಿಗಳ ಮೇಲೆ ಕಾಡಾನೆ ದಾಳಿ ಮಾಡಿದ ಪರಿಣಾಮ ಕಾರ್ಮಿಕ ಮಾದು (48) ಗಂಭೀರ ಗಾಯಗೊಂಡು ಗೋಣಿಕೊಪ್ಪ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

ಪತಿಯ ಜೊತೆಯಲ್ಲಿದ್ದ ಮೀನಾ ಅವರು ಸಣ್ಣ ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ವಿರಾಜಪೇಟೆ ತಾಲೂಕಿನ ಪಾಲಿಬೆಟ್ಟ ಸಮೀಪದ ಹೊಸೂರು ಕಾರೆಕಾಡು ಎಂಬಲ್ಲಿ ರಾತ್ರಿ ಘಟನೆ ನಡೆದಿದ್ದು, ಸ್ಥಳಕ್ಕೆ ವಲಯ ಅರಣ್ಯ ದೇವಯ್ಯ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಗಾಯಗೊಂಡ ಕಾರ್ಮಿಕನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಮೈಸೂರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿರುವ ಗಾಯಾಳುವನ್ನು ಡಿಸಿಎಫ್ ಶರಣ ಬಸಪ್ಪ, ಎಸಿಎಫ್ ನೆಹರು ಭೇಟಿ ಮಾಡಿ ಗಾಯಾಳುವಿನ ಆರೋಗ್ಯ ವಿಚಾಸಿದರು.

ಫೇಸ್‌ಬುಕ್ ನಕಲಿ ಖಾತೆ ಮೂಲಕ ಸುಳ್ಳು ಸುದ್ದಿ ಹರಡುತ್ತಿದ್ದ 13 ಮಂದಿ ವಿರುದ್ಧ ಕೇಸ್

ಮಡಿಕೇರಿ, ಮೇ 15– ಕೊಡಗು ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆ ನಡೆದ ಬಳಿಕ ಕಿಡಿಗೇಡಿಗಳು ನಕಲಿ ಫೇಸ್‌ಬುಕ್ ಖಾತೆಗಳನ್ನು ತೆರೆದು ಸುಳ್ಳು ಸುದ್ದಿಗಳನ್ನು ಹರಡಿ ಸಮಾಜದಲ್ಲಿ ಶಾಂತಿ ಭಂಗ ಮತ್ತು ಸಾಮಾಜಿಕ ಸೌಹಾರ್ದತೆಯನ್ನು ಕದಡುತ್ತಿರುವ ಪ್ರಕರಣಗಳು ಕಂಡು ಬಂದಿವೆ.

ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಒಟ್ಟು 13 ಪ್ರಕರಣಗಳು ಪತ್ತೆಯಾಗಿದ್ದು, 13 ಮಂದಿಯ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಇಲಾಖೆ ಮಾಹಿತಿ ನೀಡಿದೆ. ಇನ್ನು ಮುಂದೆ ಯಾವುದೇ ವ್ಯಕ್ತಿಗಳು ಸಾಮಾಜಿಕ ಜಾಲತಾಣಗಳ ಮೂಲಕ ಸುಳ್ಳು ಸುದ್ದಿ ಹರಡುವುದು, ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಪ್ರಯತ್ನಿಸಿದಲ್ಲಿ ಕಠಿಣ ಕಾನೂನು ಕ್ರಮ ಜರುಗಿಸುವುದಾಗಿ ಪೊಲೀಸ್ ಇಲಾಖೆ ಎಚ್ಚರಿಸಿದೆ.

ಕಂಡಂಗಾಲದಲ್ಲಿ ಹಾಕಿ ತರಬೇತಿ ಶಿಬಿರದ ಸಮಾರೋಪ

ವಯಸ್ಸಿನ ಪರಿಮಿತಿಯೊಳಗೆ ಕ್ರೀಡೆ ರೂಢಿಯಾಗಬೇಕು

ಅಂತರರಾಷ್ಟ್ರೀಯ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ





ಸಮಾರೋಪ ಸಮಾರಂಭದಲ್ಲಿ ಮಾದಂಡ ತಿಮ್ಮಯ್ಯ ಮಾತನಾಡಿದರು.

ಪೊನ್ನಂಪೇಟೆ, ಮೇ 15– ಯಾವುದೇ ಕ್ರೀಡೆಯಾಗಲಿ ಅದನ್ನು ನಿಗದಿತ ವಯಸ್ಸಿನ ಪರಿಮಿತಿಯೊಳಗೆ ರೂಢಿಸಿಕೊಳ್ಳಬೇಕು. ವಯಸ್ಸು ಮೀರಿದರೆ ಕ್ರೀಡೆಯಲ್ಲಿ ಎಷ್ಟೇ ಅವಕಾಶವಿದ್ದರೂ ಅದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ಅಂತರಾಷ್ಟ್ರೀಯ ಮಾಜಿ ರಗ್ಬಿ ಆಟಗಾರರಾದ ವಿರಾಜಪೇಟೆಯ ಮಾದಂಡ ಪಿ. ತಿಮ್ಮಯ್ಯ ಹೇಳಿದರು.

ರೂರಲ್ ಎಜುಕೇಶನ್ ಅಂಡ್ ಸ್ಪೋರ್ಟ್ಸ್ ಡೆವಲಪ್ಮೆಂಟ್ ಆರ್ಗನೈಸೇಷನ್ ವತಿಯಿಂದ ಬಿಟ್ಟಂಗಾಲ ಸಮೀಪದ ಕಂಡಂಗಾಲದ ಸರಕಾರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ 6 ರಿಂದ 15 ವರ್ಷದೊಳಗಿನ ವಿದ್ಯಾರ್ಥಿಗಳಿಗಾಗಿ ನಡೆದ ಪ್ರಥಮ ವರ್ಷದ ಹಾಕಿ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಕ್ರೀಡೆ ವ್ಯಕ್ತಿಯ ಪ್ರಾಯಾಧಾರಿತವಾದ ವಿಷಯವಾಗಿದೆ. ಚಿಕ್ಕವಯಸ್ಸಿನಲ್ಲಿ ಸಾಧನೆ ಅಸಾಧ್ಯ ಎಂಬ ತಾತ್ಸಾರದಿಂದ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಹಿಂದೇಟು ಹಾಕಿದರೆ ಭವಿಷ್ಯದಲ್ಲಿ ಅದು ಪರಿಣಾಮ ಬೀರುತ್ತದೆ ಎಂದು ಅಭಿಪ್ರಾಯಪಟ್ಟರು.

ಯಾವುದೇ ಕ್ರೀಡೆಯಾಗಲಿ ಚಿಕ್ಕವಯಸ್ಸಿನಿಂದಲೇ ಮೈಗೂಡಿಸಿಕೊಳ್ಳಬೇಕು. ಇದರಿಂದ ದೈಹಿಕ ಸದೃಢತೆ ಮತ್ತಷ್ಟು ಹೆಚ್ಚಾಗುತ್ತದೆ. ಅಲ್ಲದೆ ಮನುಷ್ಯನ ಮಾನಸಿಕ ಬೆಳವಣಿಗೆಗೂ ಇದು ಹೆಚ್ಚು ನೆರವಾಗುತ್ತದೆ. ಮುಖ್ಯವಾಗಿ ಕ್ರೀಡೆಯಲ್ಲಿ ಯಶಸ್ಸು ಸಾಧಿಸಲು ಶಿಕ್ಷಣ ಮತ್ತು ಶಿಸ್ತು ಅತಿ ಮುಖ್ಯ. ಮುಖ್ಯವಾಗಿ ಶಿಕ್ಷಣವೇ ಕ್ರೀಡೆಯ ತಳಹದಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರಲ್ಲದೆ ಬಹಳಷ್ಟು ಮುಂದುವರೆದ ರಾಷ್ಟ್ರಗಳಲ್ಲಿ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿದವರಿಗೆ ಮಾತ್ರ ಕ್ರೀಡೆಯಲ್ಲಿ ಮುಂದುವರಿಯಲು ಅವಕಾಶ ನೀಡಲಾಗುತ್ತದೆ ಎಂದು ತಿಮ್ಮಯ್ಯ ವಿವರಿಸಿದರು.


ಮತ್ತೋರ್ವ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ವಿ. ಬಾಡಗದ ಹೈಪ್ಲೇಯರ್ಸ್ ಸಂಸ್ಥೆಯ ಅಧ್ಯಕ್ಷ ಅಮ್ಮಣಿಚಂಡ ರಂಜಿ ಪೂಣಚ್ಚ ಮಾತನಾಡಿ, ಗ್ರಾಮೀಣ ಮಟ್ಟದಲ್ಲಿ ನಡೆಯುವ ಕ್ರೀಡಾ ತರಬೇತಿ ಶಿಬಿರಗಳಿಂದ ಬಹಳಷ್ಟು ಗ್ರಾಮೀಣ ಪ್ರತಿಭೆಗಳಿಗೆ ಅವಕಾಶ ದೊರೆತಿದೆ. ಈ ಕಾರಣದಿಂದ ಗ್ರಾಮೀಣ ಪ್ರದೇಶದ ಹಲವಾರು ಯುವಕರು ಕ್ರೀಡೆಯ ಮೂಲಕ ತಮ್ಮ ಭವಿಷ್ಯ ರೂಪಿಸಿಕೊಂಡಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರೂರಲ್ ಎಜುಕೇಶನ್ ಅಂಡ್ ಸ್ಪೋರ್ಟ್ಸ್ ಡೆವಲಪ್ಮೆಂಟ್ ಆರ್ಗನೈಸೇಷನ್‌ನ್ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷರಾದ ಕಂಬಿರಂಡ ದಿವ್ಯ ಮುತ್ತಪ್ಪ ಅವರು ಮಾತನಾಡಿ, ಗ್ರಾಮೀಣ ಮಟ್ಟದಲ್ಲಿ ಅರ್ಹ ವಿದ್ಯಾರ್ಥಿಗಳನ್ನು ಶಿಕ್ಷಣ ಮತ್ತು ಕ್ರೀಡೆಯಲ್ಲಿ ನಿರಂತರವಾಗಿ ಉತ್ತೇಜಿಸುವುದೇ ನಮ್ಮ ಸಂಸ್ಥೆಯ ಗುರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಲೋಕೋಪಯೋಗಿ ಇಲಾಖೆಯ ಪ್ರಥಮ ದರ್ಜೆಯ ಗುತ್ತಿಗೆದಾರರಾದ ಅಪ್ಪಂಡೇರಂಡ ದಿನು ದೇವಯ್ಯ ಮೊದಲಾದವರು ಭಾಗವಹಿಸಿದ್ದರು. ಕಳೆದ ಏ. 28 ರಿಂದ ಆರಂಭಗೊಂಡು ಮೇ 14 ರವರೆಗೆ ಒಟ್ಟು 17 ದಿನಗಳ ಕಾಲ ನಡೆದ ಹಾಕಿ ತರಬೇತಿ ಶಿಬಿರದಲ್ಲಿ ಸ್ಥಳೀಯ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಶಿಬಿರದಲ್ಲಿ ಈ ಮಧ್ಯೆ ನಡೆದ ವಿವಿಧ ಕಾರ್ಯಕ್ರಮಗಳಲ್ಲಿ ಪಾಲಿಬೆಟ್ಟ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ. ಬಸವರಾಜು ಅವರು ವಿದ್ಯಾರ್ಥಿಗಳು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಉಪನ್ಯಾಸ ನೀಡಿದರು. ವಿರಾಜಪೇಟೆಯ ಟ್ರಾವೆಲ್ ಅಡ್ವೆಂಚರ್ ಸಂಸ್ಥೆ ವತಿಯಿಂದ ಶಿಬಿರದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳಿಗಾಗಿ ಕುಂದ ಬೆಟ್ಟಕ್ಕೆ ಚಾರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಅನಂತಶಯನರ ಪತ್ರಿಕೋದ್ಯಮ ಅನುಭವದ 'ಸೊಡರು' ಪುಸ್ತಕ ಬಿಡುಗಡೆ



ಮಡಿಕೇರಿ, ಮೇ 15– ಕೊಡಗಿನ ಶಕ್ತಿ ಪತ್ರಿಕೆಯ ಸಲಹಾ ಸಂಪಾದಕ ಬಿ.ಜಿ.ಅನಂತ ಶಯನ ಅವರು ಬರೆದಿರುವ ಪತ್ರಿಕೋದ್ಯಮ ಅನುಭವ ಆಧಾರಿತ 'ಸೊಡರು' ಪುಸ್ತಕ ಗಣ್ಯರ ಸಮ್ಮುಖದಲ್ಲಿ ಬಿಡುಗಡೆಯಾಯಿತು.

ನಗರದ ರೆಡ್ ಬ್ರಿಕ್ಸ್ ಸಭಾಂಗಣದಲ್ಲಿ ಆಯೋಜಿತ ಸಮಾರಂಭದಲ್ಲಿ ರಾಜ್ಯ ಪ್ರೆಸ್‌ಕ್ಲಬ್ ಹಾಗೂ ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಎಂ.ಎ. ಪೊನ್ನಪ್ಪ ಅವರು ಸೊಡರು ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿ, ಪತ್ರಿಕಾ ಕ್ಷೇತ್ರಕ್ಕೆ ಕಾಲಿಡುವವರಿಗೆ ಮಾರ್ಗದರ್ಶಕವಾಗಿ 'ಸೊಡರು' ಪುಸ್ತಕ ರೂಪುಗೊಂಡಿರುವುದಾಗಿ ಮೆಚ್ಚುಗೆಯ ನುಡಿಗಳನ್ನಾಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಪತ್ರಿಕಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರು ತಮ್ಮ ಕಾರ್ಯವೈಖರಿಗಳ ಮೂಲಕ ಸಮಾಜದ ವಿಶ್ವಾಸಾರ್ಹತೆಯನ್ನು ಪಡೆದುಕೊಳ್ಳುವುದು ಅವಶ್ಯಕ. 'ಬ್ರೇಕಿಂಗ್' ನ್ಯೂಸ್‌ಗಳ ಧಾವಂತದ ಪತ್ರಿಕೋದ್ಯಮದ ನಡುವೆ ಸಾತ್ವಿಕವಾದ, ಸೃಜನಾತ್ಮಕವಾದ ಪತ್ರಿಕೋದ್ಯಮದ ಅಗತ್ಯವಿದೆ ಎಂದು ಅಭಿಪ್ರಾಯಿಸಿದರು.

ಗಡಿನಾಡು ಸಂಚಾರಿ ಪತ್ರಿಕೆಯ ಸಂಪಾದಕ ಟಿ.ಪಿ. ರಮೇಶ್, ಮಾತನಾಡಿ, ಪತ್ರಿಕಾ ಕ್ಷೇತ್ರದಲ್ಲಿ ಇರುವವರು ಮೊದಲನೆಯದಾಗಿ ಓದುವ ಹವ್ಯಾಸವನ್ನು ರೂಢಿಸಿಕೊಳ್ಳುವುದು ಅವಶ್ಯವೆಂದು ತಿಳಿಸಿದರು. ಈಗಿನಷ್ಟು ಸೌಲಭ್ಯಗಳು ಇಲ್ಲದಿದ್ದ ಕಾಲಘಟ್ಟದ ಪತ್ರಿಕೋದ್ಯಮದ ವಿಚಾರಗಳನ್ನು ಇಂದಿನವರಿಗೆ ತಿಳಿಸುವ ಕೆಲಸ ಇಂತಹ ಪುಸ್ತಕಗಳಿಂದ ಮಾಡಲು ಸಾಧ್ಯವಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

'ಶಕ್ತಿ' ಪತ್ರಿಕೆ ಪ್ರಧಾನ ಸಂಪಾದಕ ಜಿ.ರಾಜೇಂದ್ರ ಅವರು, ಪತ್ರಿಕಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರು ಎದುರಿಸುವ ಸಮಸ್ಯೆಗಳ ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು.

ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿಗಳು ಮಾತನಾಡಿ, ಅಸತ್ಯಗಳು ವೈಭವೀಕರಣವಾಗುತ್ತಿರುವ ಧಾವಂತದ ಈ ಕಾಲಘಟ್ಟದಲ್ಲಿ ಸತ್ಯವನ್ನು ಜನರಿಗೆ ತಲುಪಿಸುವ ಕಾರ್ಯ ಪತ್ರಿಕಾ ಕ್ಷೇತ್ರದಿಂದ ನಡೆಯುವಂತಾಗಲೆಂದು ಹಾರೈಸಿದರು.

ಸನ್ಮಾನ: ಸಮಾರಂಭದ ಆರಂಭದಲ್ಲಿ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಶಿವಾನಂದ ತಗಡೂರು, ಎಂ.ಎ. ಪೊನ್ನಪ್ಪ, ಟಿ.ಪಿ. ರಮೇಶ್, ಜಿ. ರಾಜೇಂದ್ರ, ಅವರನ್ನು ಪುಸ್ತಕದ ಲೇಖಕ ಬಿ.ಜಿ. ಅನಂತಶಯನ ಅವರ ಕುಟುಂಬಸ್ಥರು, 'ಶಕ್ತಿ' ಬಳಗ ಮತ್ತು ಆತ್ಮೀಯರು ಸನ್ಮಾನಿಸಿ, ಗೌರವಿಸಿದರು.

ಲೇಖಕ ಬಿ.ಜಿ. ಅನಂತ ಶಯನ ಅವರು ಮಾತನಾಡಿ, ಪತ್ರಿಕೆಯಲ್ಲಿ ಕಾರ್ಯನಿರ್ವಹಿಸುವ ಸಂದರ್ಭದ ತನ್ನ ಅನುಭವಗಳನ್ನು ಪುಸ್ತಕದಲ್ಲಿ ತಾನು ದಾಖಲಿಸಿರುವುದಾಗಿ ತಿಳಿಸಿದರು. ಹಿರಿಯ ಪತ್ರಕರ್ತ ಹೆಚ್.ಟಿ. ಅನಿಲ್ ಪುಸ್ತಕ ಪರಿಚಯ ಮಾಡುತ್ತಾ, ಪತ್ರಿಕೋದ್ಯಮದ ಅನುಭವದ ಮತ್ತಷ್ಟು ಪುಸ್ತಕಗಳು ಅನಂತಶಯನ ಅವರಿಂದ ಮೂಡಿಬರಲಿ ಎಂದು ಹಾರೈಸಿದರು.

ಚಿ.ನಾ. ಸೋಮೇಶ್ ಅವರು ಸ್ವಾಗತಿಸಿದರು, ಪ್ರಜ್ವಲ್ ರಾಜೇಂದ್ರ, ಶ್ವೇತಾ ರವೀಂದ್ರ, ಪ್ರತಿಮಾ ರೈ ಅವರು ಅತಿಥಿಗಳನ್ನು ಸಭೆಗೆ ಪರಿಚಯಿಸಿದರು. ಡಾ. ಅನುಶ್ರೀ ಅನಂತಶಯನ ವಂದಿಸಿದರು.

ಹಾರ್ಡ್‌ವೇರ್ ಅಂಗಡಿಗೆ ಬೆಂಕಿ

ಕೋಟಿ ರೂ. ನಷ್ಟ



ವಿರಾಜಪೇಟೆ, ಮೇ 15– ವಿರಾಜಪೇಟೆ ನಗರದ ಗೋಣಿಕೊಪ್ಪ ರಸ್ತೆಯಲ್ಲಿರುವ ನಂದಿ ಪೇಂಟ್ಸ್ ಅಂಡ್ ಹಾರ್ಡ್‌ವೇರ್ ಅಂಗಡಿಯಲ್ಲಿ ಮೇ 14ರ ರಾತ್ರಿ 11.30 ಗಂಟೆ ಬೆಂಕಿ ಕಾಣಿಸಿಕೊಂಡಿದೆ. ಆದರೆ ಬೆಂಕಿ ನಂದಿಸುವ ಹೊತ್ತಿಗೆ ಅಂಗಡಿ ಸಂಪೂರ್ಣ ಬೆಂಕಿಗೆ ಆಹುತಿಯಾಗಿದ್ದು. ಇದರಿಂದ ಅಂದಾಜು 1 ಕೋಟಿ ರೂ. ನಷ್ಟ ಸಂಭವಿಸಿರುವುದಾಗಿ ಅಂಗಡಿಯ ಮಾಲೀಕ ದಿನೇಶ್ ಎಂಬುವರು ವಿರಾಜಪೇಟೆ ನಗರ ಠಾಣೆಯಲ್ಲಿ ದೂರು ನೀಡಿರುವ ಹಿನ್ನೆಲೆ ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಂಗಡಿಯಲ್ಲಿ ಬೆಂಕಿ ಕಾಣಿಸಿಕೊಂಡ ತಕ್ಷಣ ಎಚ್ಚೆತ್ತ ಅಂಗಡಿ ಮಾಲೀಕ ಹಾಗೂ ಸ್ಥಳೀಯರು ಬೆಂಕಿ ನಂದಿಸಲು ಯತ್ನಿಸಿದ್ದಾರೆ. ಟ್ಯಾಂಕರ್ ಮೂಲಕ ನೀರು ಒದಗಿಸಿದ್ದಾರೆ. ಆದರೂ ಅಂಗಡಿಯಲ್ಲಿ ಪೇಂಟ್ ಮತ್ತಿತರ ದಹನಕಾರಿ ವಸ್ತುಗಳಿದ್ದ ಕಾರಣ ಬೆಂಕಿ ಹತೋಟಿಗೆ ಬಂದಿಲ್ಲ. ಗೋಣಿಕೊಪ್ಪಲಿನಿಂದ 16 ಕಿಮೀ ದೂರದಿಂದ ಅಗ್ನಿಶಾಮಕ ವಾಹನ ಬಂದು ಬೆಂಕಿ ನಂದಿಸಲು ಹರಸಾಹಸ ಪಟ್ಟು ಬೆಳಗಿನ ಜಾವ ಮೂರು ಗಂಟೆ ಹೊತ್ತಿಗೆ ಬೆಂಕಿಯನ್ನು ನಂದಿಸಲಾಗಿದ್ದು, ಆ ವೇಳೆಗೆ ಅಂಗಡಿ ಸಾಮಗ್ರಿಗಳು ಸುಟ್ಟು ಸಂಪೂರ್ಣ ಬೂದಿಯಾಗಿತ್ತು. ಸ್ಥಳೀಯರು ಜಾಗ್ರತೆ ವಹಿಸಿದ್ದರಿಂದ ಪಕ್ಕದ ಅಂಗಡಿಗಳಿಗೆ ಬೆಂಕಿ ತಾಗಿಲ್ಲ. ಸಮಯಕ್ಕೆ ಸರಿಯಾಗಿ ಅಗ್ನಿಶಾಮಕ ದಳ ಬಂದಿದ್ದರೆ ಅಂಗಡಿ ಪೂರ್ತಿ ಬೆಂಕಿಗೆ ಆಹುತಿಯಾಗುತ್ತಿರಲಿಲ್ಲ ಎನ್ನುವುದು ಸ್ಥಳೀಯರ ಅನಿಸಿಕೆ. ವಿರಾಜಪೇಟೆ ನಗರ ಠಾಣಾಧಿಕಾರಿ ಮದನ್‌ಕುಮಾರ್ ಸ್ಥಳಕ್ಕೆ ಆಗಮಿಸಿ ವಾಹನ ಸಂಚಾರ ನಿಯಂತ್ರಣ ಮತ್ತಿತರ ಆಗತ್ಯ ಕ್ರಮ ಕೈಗೊಂಡರು. ಅಂಗಡಿ ಕಟ್ಟಡ ಅಬಿಬುಲ್ಲಾ ಎಂಬುವರಿಗೆ ಸೇರಿದ್ದು, ರಾಜಸ್ಥಾನ ಮೂಲದ ದಿನೇಶ್ ಇಲ್ಲಿ ವ್ಯಾಪಾರ ನಡೆಸುತ್ತಿದ್ದರು ಎನ್ನಲಾಗಿದೆ.

ಬಸವ ತತ್ವ ಎಲ್ಲಾ ಸಮಾಜಕ್ಕೂ ಆದರ್ಶ

ಶ್ರೀ ಚನ್ನಬಸವರಾಜ ಸ್ವಾಮೀಜಿ ಅಭಿಮತ




ಚಾಮರಾಜನಗರ, ಮೇ 15– ಬಸವ ತತ್ವಗಳು ಎಲ್ಲ ಸಮಾಜಕ್ಕೂ ಆದರ್ಶಪ್ರಾಯವಾಗಿದ್ದು, ಪ್ರತಿಯೊಬ್ಬರೂ ಪಾಲನೆ ಮಾಡಬೇಕು ಎಂದು ನಗರದ ವಿರಕ್ತ ಮಠದ ಶ್ರೀ ಚನ್ನಬಸವರಾಜ ಸ್ವಾಮೀಜಿ ಕರೆ ನೀಡಿದರು.

ತಾಲೂಕಿನ ಚನ್ನಪ್ಪನಪುರ ಗ್ರಾಮದಲ್ಲಿ ಬಸವ ಬಳಗದ ನಾಮಫಲಕ ಹಾಗೂ ಆರ್ಚ್ ಅನಾವರಣಗೊಳಿಸಿ ಮಾತನಾಡಿದ ಶ್ರೀಗಳು, ಬಸವಣ್ಣನವರ ಚಿಂತನೆಗಳು ಇಂದಿಗೂ ಪ್ರಭಾವ ಬೀರುತ್ತಿವೆ. ಕರ್ನಾಟಕದಲ್ಲಿ ಮಠ–ಮಂದಿರಗಳಿಂದ ಬಸವ ಪರಂಪರೆ ಉಳಿದಿವೆ. ಮಠ–ಮಂದಿರಗಳು ಇಲ್ಲವಾಗಿದ್ದರೆ ಬಸವ ತತ್ವಗಳು ಮರೆಯಾಗುತ್ತಿದ್ದವು ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್ ಧ್ವಜಾರೋಹಣ ನೆರವೇರಿಸಿದರು. ಕೆರೆ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕಾಳನಹುಂಡಿ ಗುರುಸ್ವಾಮಿ, ಗೌಡಿಕೆ ಶಿವು, ಸಂಪತ್, ಪ್ರಸಾದ್, ಬಸವಣ್ಣ, ಮಹದೇವಸ್ವಾಮಿ, ಕಂಡಕ್ಟರ್ ಗಣೇಶ್, ಬಳಗದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಗ್ರಾಮಸ್ಥರು ಹಾಜರಿದ್ದರು.

ಸಂಪುಟದಲ್ಲಿ ಶಾಸಕ ಪುಟ್ಟರಂಗಶೆಟ್ಟರಿಗೆ ಸ್ಥಾನ ಸಾಧ್ಯತೆ

● ಸಿದ್ದಲಿಂಗಸ್ವಾಮಿ



ನಾನು ಸಚಿವ ಆಗುವುದನ್ನು ಪಕ್ಷದ ರಾಜ್ಯ ನಾಯಕರು ಮತ್ತು ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಈ ಬಗ್ಗೆ ನಾನು ಇನ್ನೂ ಏನನ್ನೂ ಹೇಳುವುದಿಲ್ಲ.
-ಸಿ. ಪುಟ್ಟರಂಗಶೆಟ್ಟಿ, ಶಾಸಕರು.

ಚಾಮರಾಜನಗರ, ಮೇ 15– ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸತತವಾಗಿ ನಾಲ್ಕನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗುವ ಮೂಲಕ ದಾಖಲೆ ನಿರ್ಮಿಸಿರುವ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಸಚಿವರಾಗುವ ಸಾಧ್ಯತೆ ಇದೆ.

ಕಾಂಗ್ರೆಸ್ ಸ್ಪಷ್ಟ ಬಹುಮತ ಗಳಿಸಿ ರಾಜ್ಯದ ಚುಕ್ಕಾಣಿ ಹಿಡಿದಿದೆ. ಹೀಗಾಗಿ, ಸತತವಾಗಿ ನಾಲ್ಕನೇ ಬಾರಿಗೆ ಜಯಗಳಿಸಿ ಹಿರಿಯರಾಗಿದ್ದು, ಉಪ್ಪಾರ ಸಮುದಾಯದಿಂದ ಇವರೊಬ್ಬರೇ ಶಾಸಕರಾಗಿರುವ ಕಾರಣ ಇವರಿಗೆ ಸಚಿವ ಸ್ಥಾನ ದೊರೆಯಲಿದೆ ಎಂದು ಹೇಳಲಾಗುತ್ತಿದೆ.

ಚಾಮರಾಜನಗರ ಕ್ಷೇತ್ರದಿಂದ ಸತತವಾಗಿ ಯಾರೊಬ್ಬರೂ ನಾಲ್ಕು ಬಾರಿ ಶಾಸಕರಾಗಿ ಆಯ್ಕೆ ಆಗಿರಲಿಲ್ಲ. ಪುಟ್ಟರಂಗಶೆಟ್ಟಿ ಅವರು ಕ್ಷೇತ್ರದಲ್ಲಿ ಹೊಸ ದಾಖಲೆ ಸೃಷ್ಟಿಸಿದ್ದಾರೆ. ತಮಗಿರುವ ಹಿರಿತನ, ಹಿಂದುಳಿದ ವರ್ಗಗಳ ಕೋಟಾ ಹಾಗೂ ಜಿಲ್ಲೆಗೆ ದೊರೆಯುವ ಪ್ರಾತಿನಿಧ್ಯತೆ ಅಡಿಯಲ್ಲಿ ಪುಟ್ಟರಂಗಶೆಟ್ಟಿ ಅವರಿಗೆ ಸಚಿವರಾಗುವ ಭಾಗ್ಯ ದೊರೆಯಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಹನೂರು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಆರ್. ನರೇಂದ್ರ ಗೆಲುವು ಸಾಧಿಸಿದ್ದರೆ, ಅವರೂ ಸಹ ಸತತವಾಗಿ ನಾಲ್ಕನೇ ಬಾರಿಗೆ ಶಾಸಕರಾಗುತ್ತಿದ್ದರು. ಸಚಿವರಾಗುವ ಪೈಪೋಟಿಯಲ್ಲಿ ಇರುತ್ತಿದ್ದರು. ಆದರೆ, ಅವರು ಸೋತಿರುವುದರಿಂದ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ದೊರೆಯುವುದು ಬಹುತೇಕ ಖಚಿತ.

ಜಿಲ್ಲೆಯ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರು ಆಯ್ಕೆ ಆಗಿದ್ದಾರೆ. ಇವರಲ್ಲಿ ಪುಟ್ಟರಂಗಶೆಟ್ಟಿ ಹಿರಿಯರು, ಮತ್ತಿಬ್ಬರಾದ ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಪಕ್ಷದಿಂದ ಇದೇ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆ ಆಗಿದ್ದಾರೆ. (ಈ ಮೊದಲು ಸಂತೇಮರಹಳ್ಳಿ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು).

ಗುಂಡ್ಲುಪೇಟೆ ಕ್ಷೇತ್ರದಿಂದ ಗೆಲುವು ಸಾಧಿಸಿರುವ ಎಚ್.ಎಂ. ಗಣೇಶಪ್ರಸಾದ್ ಅವರು ಜಿಲ್ಲೆಯ ಕಾಂಗ್ರೆಸ್ ಪಕ್ಷದ ಮತ್ತೊಬ್ಬ ಶಾಸಕರಾಗಿದ್ದಾರೆ. ಇವರು ಪ್ರಥಮ ಬಾರಿಗೆ ಶಾಸಕರಾಗಿ ಆಯ್ಕೆ ಆಗಿರುವುದರಿಂದ ಸಚಿವರಾಗುವವರ ಪಟ್ಟಿಯಲ್ಲಿ ಇವರ ಹೆಸರು ಇಲ್ಲವಾಗಿದೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರಲ್ಲಿ ಒಬ್ಬರಾಗಿರುವ ಪುಟ್ಟರಂಗಶೆಟ್ಟಿ ಅವರು, ಈ ಹಿಂದೆ ಕಾಂಗ್ರೆಸ್, ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಸಚಿವರಾಗಿದ್ದರು. ಈಗ ಮತ್ತೊಮ್ಮೆ ಸಚಿವರಾಗುವ ಯೋಗ ಪುಟ್ಟರಂಗಶೆಟ್ಟಿ ಅವರಿಗೆ ಒಲಿದು ಬಂದಿದೆ.

ಗೆದ್ದು ಬೀಗಿದವರ ಪ್ರತಿಕ್ರಿಯೆ....

ಹನೂರು ಕ್ಷೇತ್ರದ ಜನರಿಗೆ ನೀಡಿದ ಭರವಸೆಯಂತೆ ಮಾದರಿ ಕ್ಷೇತ್ರವನ್ನಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಹನೂರು ಕ್ಷೇತ್ರದಲ್ಲಿ ಉತ್ತಮ ಆಸ್ಪತ್ರೆ, ರಸ್ತೆಗಳಿಲ್ಲ. ನಾನು ಕ್ಷೇತ್ರದಲ್ಲಿ ಕಳೆದ ಐದು ವರ್ಷಗಳಿಂದ ಸುತ್ತಾಟ ನಡೆಸಿ, ಪ್ರತಿ ಮನೆ–ಮನೆಗೂ ಭೇಟಿ ನೀಡಿದಾಗ ಈ ಸಮಸ್ಯೆಯನ್ನು ಕಣ್ಣಾರೆ ಕಂಡಿದ್ದೇನೆ. ಹೀಗಾಗಿ, ಇವುಗಳತ್ತ ಗಮನಹರಿಸಿ, ಕ್ಷೇತ್ರದಲ್ಲಿ ಸುಸಜ್ಜಿತ ಆಸ್ಪತ್ರೆ ನಿರ್ಮಾಣ, ರಸ್ತೆ ಅಭಿವೃದ್ಧಿ ಕಾಮಗಾರಿಗೆ ಆದ್ಯತೆ ನೀಡುತ್ತೇನೆ ಈ ಬಾರಿ ನನ್ನ ಗೆಲ್ಲಿಸಿದ ಮತದಾರರಿಗೆ ಅಭಿನಂದನೆ ಸಲ್ಲಿಸುತ್ತೇನೆ. ನಾನು ಕ್ಷೇತ್ರದಲ್ಲಿ ಜಯ ಗಳಿಸಿದರೆ ತಾಳಬೆಟ್ಟದಿಂದ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಮಾಡುತ್ತೇನೆ ಎಂದು ಹರಕೆ ಹೊತ್ತುಕೊಂಡಿದ್ದೆ, ಶೀಘ್ರವೇ ಈ ಹರಕೆಯನ್ನು ಈಡೇರಿಸುತ್ತೇನೆ.



-ಎಂ.ಆರ್. ಮಂಜುನಾಥ್, ಹನೂರು ಕ್ಷೇತ್ರದ ಶಾಸಕ.

ನನ್ನ ತಂದೆ ಮಾಜಿ ಸಚಿವ ದಿ.ಎಚ್.ಎಸ್. ಮಹದೇವ ಪ್ರಸಾದ್ ಅವರ ಅಧಿಕಾರಾವಧಿಯಲ್ಲಿ ನಡೆದಿದ್ದ ಅಭಿವೃದ್ಧಿ ಕೆಲಸಗಳು ಇಂದು ನನ್ನ ಗೆಲುವಿಗೆ ಸಹಕಾರಿ. ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳಲ್ಲಿನ ಹಿನ್ನಡೆಯಿಂದ ಜನರು ಬದಲಾವಣೆ ಬಯಸಿ, ಅವಕಾಶ ನೀಡಿದ್ದಾರೆ. ಕೊರೊನಾ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಸುತ್ತಾಟ ನಡೆಸಿದ್ದೇನೆ. ಈ ವೇಳೆ ಜನರು ನನ್ನ ಬೆಂಬಲಿಸುವ ಭರವಸೆ ನೀಡಿದ್ದರು. ಅಲ್ಲದೇ ನಮ್ಮ ತಂದೆ ಜೊತೆ ಇದ್ದ ಎಲ್ಲಾ ಹಿರಿಯ ಮುಖಂಡರು ನನಗೆ ಬೆಂಬಲ ನೀಡಿದರು. ಮಾಜಿ ಸಂಸದ ದಿ.ಆರ್. ಧ್ರುವನಾರಾಯಣ್ ಅವರು ಕೂಡ ನನಗೆ ರಾಜಕೀಯವಾಗಿ ಬೆಳೆಯಲು ಸಹಕಾರಿಯಾಗಿದ್ದರು. ಇವರೆಲ್ಲರ ಸಹಕಾರದಿಂದ ಗೆಲುವು ಬಂದಿದೆ. ನನ್ನನ್ನು ಗೆಲ್ಲಿಸಿದ ಕ್ಷೇತ್ರದ ಮತದಾರರಿಗೆ ಚಿರಋಣಿಯಾಗಿರುತ್ತೇನೆ. ಕ್ಷೇತ್ರದಲ್ಲೇ ಇದ್ದುಕೊಂಡು ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತೇನೆ.



-ಎಚ್.ಎಂ. ಗಣೇಶಪ್ರಸಾದ್, ಗುಂಡ್ಲುಪೇಟೆ ಕ್ಷೇತ್ರದ ಶಾಸಕ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 15 ವರ್ಷಗಳಿಂದ ನಡೆದಿರುವ ಅಭಿವೃದ್ಧಿ ಕೆಲಸಗಳು ಹಾಗೂ ಹಿಂದಿನ ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳಿಗೆ ಕ್ಷೇತ್ರದ ಜನರು ಬೆಂಬಲ ನೀಡಿದ್ದಾರೆ. ಚಾಮರಾಜನಗರ ಕ್ಷೇತ್ರದಲ್ಲಿ ಸತತ ನಾಲ್ಕನೇ ಗೆಲುವು ನೀಡಿದ ಕ್ಷೇತ್ರದ ಮತದಾರರು, ಪಕ್ಷದ ಕಾರ್ಯಕರ್ತರು, ಮುಖಂಡರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸುತ್ತೇನೆ.



-ಸಿ. ಪುಟ್ಟರಂಗಶೆಟ್ಟಿ, ಚಾ.ನಗರ ಕಾಂಗ್ರೆಸ್ ಶಾಸಕ

ನಾನು ಒಂದು ಮತಗಳಿಂದ ಸೋಲು ಅನುಭವಿಸಿದ್ದೇನೆ. ಹೀಗಾಗಿ ನನಗೆ ಒಂದು ಮತದ ಬೆಲೆಯೂ ತಿಳಿದಿದೆ. ಇಂದು ಕ್ಷೇತ್ರದ ಜನರು ನನಗೆ ಅಧಿಕ ಮತಗಳಿಂದ ಗೆಲುವು ತಂದುಕೊಟ್ಟಿದ್ದಾರೆ. ಈ ಗೆಲುವನ್ನು ನಾನು ಕೊಳ್ಳೇಗಾಲ ಕ್ಷೇತ್ರದ ಜನರಿಗೆ ಅರ್ಪಿಸುತ್ತೇನೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಜನರ ಕಷ್ಟ–ಸುಖಗಳಿಗೆ ಸ್ಪಂದಿಸುವ ಜೊತೆಗೆ ಕ್ಷೇತ್ರ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಈ ಬಾರಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಕೂಡ ನನ್ನ ಗೆಲುವಿಗೆ ಸಹಕಾರಿಯಾಯಿತು. ಇನ್ನು ಬಿಜೆಪಿ ಆಡಳಿತ ವಿರೋಧಿ ಅಲೆಯೂ ಕೂಡ ಪೂರಕ ವಾತಾವರಣ ಉಂಟು ಮಾಡಿತ್ತು. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ನೀಡಿದ ಗ್ಯಾರಂಟಿಗಳನ್ನು ಕಾಂಗ್ರೆಸ್ ಸರ್ಕಾರ ಈಡೇರಿಸಲಿದೆ.



-ಎ.ಆರ್. ಕೃಷ್ಣಮೂರ್ತಿ, ಕೊಳ್ಳೇಗಾಲ ಕ್ಷೇತ್ರದ ಶಾಸಕ.

ಇಂದು ರಾಷ್ಟ್ರೀಯ ಡೆಂಘೀ ದಿನಾಚರಣೆ

ಚಾಮರಾಜನಗರ, ಮೇ 15– ರಾಷ್ಟ್ರೀಯ ಡೆಂಘೀ ದಿನಾಚರಣೆ ಅಂಗವಾಗಿ ಜನ ಸಾಮಾನ್ಯರಿಗೆ ಡೆಂಘೀ ಜ್ವರದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಮೇ 16 ರಂದು ಜಾಗೃತಿ ಜಾಥಾ ಏರ್ಪಡಿಸಲಾಗಿದೆ.

ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಂಡಿರುವ ಜಾಥಾವನ್ನು ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಉದ್ಘಾಟಿಸುವರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು, ಆರೋಗ್ಯ ಇಲಾಖೆ ಕಾರ್ಯಕ್ರಮ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಜಾಥಾದಲ್ಲಿ ಭಾಗವಹಿಸುವರು ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ: ಆದರ್ಶ ವಿದ್ಯಾಲಯಕ್ಕೆ ಶೇ.100 ಫಲಿತಾಂಶ

ಚಾಮರಾಜನಗರ, ಮೇ 15– ನಗರದ ಮಲ್ಲಯ್ಯನಪುರದಲ್ಲಿರುವ ಆದರ್ಶ ವಿದ್ಯಾಲಯದಲ್ಲಿ 2022–23ನೇ ಸಾಲಿನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಶಾಲೆಯಿಂದ ಒಟ್ಟು 74 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಅವರಲ್ಲಿ 74 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಈ ಪೈಕಿ ಉನ್ನತ ಶ್ರೇಣಿಯಲ್ಲಿ 41, ಪ್ರಥಮ ಶ್ರೇಣಿಯಲ್ಲಿ 31, ಎರಡನೇ ಶ್ರೇಣಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ಸಾಧನೆ ಮಾಡಿರುತ್ತಾರೆ.

ಮಹೇಂದ್ರ ಎನ್ ಎಂಬ ವಿದ್ಯಾರ್ಥಿ 603 ಅಂಕಗಳಿಸಿ ಶಾಲೆಗೆ ಮೊದಲ ಸ್ಥಾನ ಪಡೆದಿರುತ್ತಾರೆ. ಸ್ಪಂದನ. ಕೆ.ಪಿ 600, ಎಸ್. ಶಿವಮೂರ್ತಿ 596, ಸಾದಿಯಬಾನು 594, ಉಮ್ಮೆಹನಿ 592, ಯಶವಂತ್. ಸಿ.ಪಿ 586, ಸಿಂಚನ. ಜೆ.ಆರ್. 584, ಹರ್ಷಿತ. ಸಿ.ಆರ್. 582, ಮಾನಸ. ಎಸ್. 581, ಮಾದಪ್ಪ 575, ಮಹೇಶ್. ಆರ್ ಮತ್ತು ಆದಿತ್ಯ. ಎನ್ 573, ಸೈದ ಹಾಜಿರ ಉಮ್ರಜ್ 572, ಯಶಸ್ವಿನಿ. ಸಿ.ಎನ್ 570, ಶಶಿರೇಖ. ಜಿ 569, ಸ್ಪಂದನ 565, ಮದಿಹ 565, ಪ್ರಿಯದರ್ಶಿನಿ ಆರ್ ಮತ್ತು ಸ್ನೇಹ 564, ಭಾಸ್ಕರ್. ಎಂ 563, ಪಾರ್ಥಚಿರುತನ್ 562, ಅಂಕಗಳಿಸಿ ಶಾಲೆಗೆ ಕೀರ್ತಿ ತಂದಿರುತ್ತಾರೆ. ಇವರಿಗೆ ಸಂಸ್ಥೆಯ ಮುಖ್ಯ ಶಿಕ್ಷಕರು, ಸಹಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ಎಸ್.ಡಿ.ಎಂ.ಸಿ ವತಿಯಿಂದ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ. ಜಿ. ಪರಮೇಶ್ವರ್‌ಗೆ ಮುಖ್ಯಮಂತ್ರಿ ಸ್ಥಾನಕ್ಕೆ ಅಭಿಮಾನಿಗಳ ಬಳಗ ಒತ್ತಾಯ



ಚಾಮರಾಜನಗರ, ಮೇ 15– ಕಳೆದ 35 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತರಾಗಿ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಮಾಜಿ ಸಚಿವ ಡಾ. ಜಿ. ಪರಮೇಶ್ವರ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿ ಹುದ್ದೆಯನ್ನು ನೀಡಬೇಕೆಂದು ಸವ್ಯಸಾಚಿ ಡಾ.ಜಿ. ಪರಮೇಶ್ವರ್ ಅಭಿಮಾನಿಗಳ ಬಳಗ ಅಧ್ಯಕ್ಷ ಕಾಳಿಂಗಸ್ವಾಮಿ ಸಿದ್ದಾರ್ಥ, ಗೌರವ ಅಧ್ಯಕ್ಷ ಪ್ರೊ. ಮಾದೇವ ಭರಣಿ ಒತ್ತಾಯಿಸಿದ್ದಾರೆ.

ಡಾ. ಜಿ.ಪರಮೇಶ್ವರ್ ಅವರು ಗೃಹ ಸಚಿವರಾಗಿ, ಶಿಕ್ಷಣ ಸಚಿವರಾಗಿ ಹಾಗೂ ರಾಜ್ಯದ ಉಪ ಮುಖ್ಯಮಂತ್ರಿಯಾಗಿ ಉತ್ತಮ ಆಡಳಿತ ನೀಡಿ ರಾಜ್ಯದ ಜನರ ಪ್ರೀತಿ ವಿಶ್ವಾಸವನ್ನು ಹೊಂದಿದ್ದಾರೆ. ಕಾಂಗ್ರೆಸ್ ಪಕ್ಷ 135 ಸ್ಥಾನಗಳನ್ನು ಪಡೆದುಕೊಳ್ಳಲು ದಲಿತರು ಹಾಗೂ ಹಿಂದುಳಿದ ವರ್ಗಗಳ ಕೊಡುಗೆ ಬಹಳಷ್ಟಿದೆ. ಈ ಬಾರಿ ದಲಿತರೊಬ್ಬರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂಬ ಕೂಗು ಹೆಚ್ಚಾಗಿದ್ದು. ಡಾ.ಪರಮೇಶ್ವರ್ ಅವರಿಗೆ ಸಿಎಂ ಹುದ್ದೆಯನ್ನು ನೀಡಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷವು ಅತ್ಯಂತ ದೊಡ್ಡ ಮಟ್ಟದಲ್ಲಿ ಗೆಲುವು ಪಡೆಯಲು ದಲಿತ ಸಮುದಾಯವು ಒಕ್ಕೊರಲಿನಿಂದ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ, ರಾಷ್ಟ್ರಕ್ಕೆ ಗಟ್ಟಿ ಸಂದೇಶವನ್ನು ಸಾರಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಇಂತಹದೇ ಫಲಿತಾಂಶ ಮರುಕಳಿಸಲು ಪರಮೇಶ್ವರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು. ಈ ವಿಚಾರವನ್ನು ಲಘುವಾಗಿ ಪರಿಗಣಿಸಿದ್ದಲ್ಲಿ ಭಾರಿ ತಲೆದಂಡ ತೆರಬೇಕಾಗುತ್ತದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಸ್ವಾಮಿ ಅಂತೋಣಪ್ಪ ಸಿ.ಗುರು ಪಟ್ಟಾಧಿಕಾರದ ಬೆಳ್ಳಿ ಮಹೋತ್ಸವ



ಚಾಮರಾಜನಗರ, ಮೇ 15– ಬಿ. ರಾಚಯ್ಯ ಜೋಡಿ ರಸ್ತೆಯ ಸಂತ ಪೌಲರ ದೇವ ಮಂದಿರದ ಧರ್ಮಗುರು ಅಂತೋಣಪ್ಪ ಸಿ. ಇವರ ಗುರು ಪಟ್ಟಾಧಿಕಾರದ ಬೆಳ್ಳಿ ಮಹೋತ್ಸವ ಸೋಮವಾರ ಚರ್ಚ್ ಆವರಣದಲ್ಲಿ ಶ್ರದ್ಧಾಭಕ್ತಿ ಹಾಗೂ ವಿಜೃಂಭಣೆಯಿಂದ ನೆರವೇರಿತು.

ಮೈಸೂರು ಧರ್ಮಪ್ರಾಂತ್ಯದ ಶ್ರೇಷ್ಠ ಗುರು ಆಲ್ಫ್ರೆಡ್ ಜೆ ಮೆಂಡೊನ್ಸ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಮೊದಲು ನಡೆದ ಕೃತಜ್ಞತಾ ಬಲಿ ಪೂಜೆಯಲ್ಲಿ ವಿವಿಧ ಧರ್ಮ ಕೇಂದ್ರಗಳಿಂದ ಆಗಮಿಸಿದ 30ಕ್ಕೂ ಹೆಚ್ಚು ಧರ್ಮಗುರುಗಳು ಭಾಗವಹಿಸಿದ್ದರು.

ನಂತರ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಶ್ರೇಷ್ಠ ಗುರು ಅಲ್ಫ್ರೆಡ್ ಮೆಂಡೊನ್ಸಾ ಮಾತನಾಡಿ, ಅಂತೋಣಪ್ಪ ಗುರುವಾಗಿ ಪೂಜೆ, ಪ್ರವಚನಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಳ್ಳದೇ ನಟ, ಕವಿ, ನಾಟಕಕಾರರಾಗಿ, ಭಕ್ತಿಗೀತೆಗಳ ರಚನೆ, ಅನೇಕ ಧ್ವನಿ ತಟ್ಟೆಗಳ ಲೋಕಾರ್ಪಣೆ, ಬೈಬಲ್ ಆಧಾರಿತ ಧ್ವನಿ ಬೆಳಕು ಕಾರ್ಯಕ್ರಮಗಳು ಅವರ ಸೃಜನಶೀಲತೆಗೆ ಸಾಕ್ಷಿಯಾಗಿವೆ.

ಹಿಂದೆ ಸೇವೆ ಮಾಡಿದ ಧರ್ಮ ಕೇಂದ್ರಗಳಲ್ಲಿ ಅವರು ನೂತನ ಚರ್ಚ್‌ಗಳನ್ನು ನಿರ್ಮಿಸಿದ್ದಾರೆ ಎಂದರು. ಪ್ರಜಾಪಿತ ಈಶ್ವರಿಯ ಬ್ರಹ್ಮಕುಮಾರಿಯ ದಾನೇಶ್ವರಿ, ಬಾಲರ ಪಟ್ಟಣ ಸಂಸ್ಥೆ, ಸೆಂಟ್ ಜೋಸೆಫ್ಸ್ ಕಾನ್ವೆಂಟ್, ವಿವಿಧ ಧರ್ಮ ಕೇಂದ್ರ ಸಂಘ–ಸಂಸ್ಥೆಗಳು, ಗುರು ಅಂತೋಣಪ್ಪ ಅವರನ್ನು ಸನ್ಮಾನಿಸಿದರು. ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಭಾರೀ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸಿದ್ದರು.

ಮೈಸೂರು ಮಿತ್ರ

ಮಂಗಳವಾರ 16 ಮೇ 2023

ಲಿಂಗಲೀಲಾವಿಲಾಸಚಾರಿತ್ರ ಸಂಕಲನ ವ್ಯಾಖ್ಯಾನ ಕೃತಿ

ಡಾ.ಎನ್.ಎಸ್.ತಾರಾನಾಥ್ ಅಭಿಮತ



ಮೈಸೂರು, ಮೇ 15– ಲಿಂಗಲೀಲಾ ವಿಲಾಸಚಾರಿತ್ರ ಸಂಕಲನ ವ್ಯಾಖ್ಯಾನ ಕೃತಿ ಎಂದು ನಿವೃತ್ತ ಪ್ರಾಧ್ಯಾಪಕರು ಹಾಗೂ ವಿದ್ವಾಂಸರು ಆದ ಡಾ.ಎನ್.ಎಸ್. ತಾರಾನಾಥ್ ಅವರು, ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 15ರಿಂದ 19ರವರೆಗೆ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್ಎಸ್ ಮಹಾವಿದ್ಯಾಪೀಠದ ವತಿಯಿಂದ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಕಲ್ಲುಮಠದ ಪ್ರಭುದೇವರ 'ಲಿಂಗಲೀಲಾವಿಲಾಸ ಚಾರಿತ್ರ' ಕೃತಿಯ ಬಗೆಗೆ ಏರ್ಪಡಿಸಿರುವ ಅಧ್ಯಯನ ಶಿಬಿರವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿ, ಕವಿ, ಕೃತಿ, ಇತಿವೃತ್ತ ವಿಷಯ ಕುರಿತಾಗಿ ಉಪನ್ಯಾಸ ನೀಡುತ್ತಾ ತಿಳಿಸಿದರು.

ಜಾಗತಿಕ ಸಾಹಿತ್ಯಕ್ಕೆ ಕನ್ನಡದ ವಚನ ಸಾಹಿತ್ಯ ಮಹತ್ವದ ಕೊಡುಗೆಯನ್ನು ನೀಡಿದೆ. ವಚನ ಸಾಹಿತ್ಯವು ಲಿಂಗಭೇದ, ವರ್ಣಭೇದ, ಜಾತಿಭೇದಗಳಿಲ್ಲದೆ ಸಾಮೂಹಿಕವಾಗಿ ಸ್ಥಾಪಿಸಿದ ಹಾಗೂ ವ್ಯಾಕರಣವನ್ನು ಅಪೇಕ್ಷಿಸದ ಅರ್ಥಮಯ ಮುಕ್ತಕಗಳ ಭಾವಗೀತೆಯಾಗಿದೆ. ವಚನ ಸಾಹಿತ್ಯ ಯುಗವನ್ನು ಸೃಜನಶೀಲ ಯುಗ ಹಾಗೂ ಸಂಕಲನ ಯುಗ ಎಂದು ವರ್ಗೀಕರಿಸಲಾಗಿದ್ದು, ಲಿಂಗಲೀಲಾವಿಲಾಸಚಾರಿತ್ರವು ಸಂಕಲನಯುಗದಲ್ಲಿ ಮೂಡಿಬಂದ ಕೃತಿಯಾಗಿದೆ. ಕೃತಿಯಲ್ಲಿ ಆಯ್ದ ವಚನಗಳಿಗೆ ಸ್ಥಲ ವಿನ್ಯಾಸಗಳನ್ನು ಕೊಟ್ಟು ವ್ಯಾಖ್ಯಾನಿಸಲಾಗಿದೆ. ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ ಮುಂತಾದ ವಚನಗಾರರು ಸೇರಿದಂತೆ 36 ವಚನಗಾರರ 729 ವಚನಗಳನ್ನು ಹಾಗೂ 135 ಸಂಸ್ಕೃತ ಶ್ಲೋಕಗಳನ್ನು ಸಂಗ್ರಹಿಸಿ ಸಂಕಲನವನ್ನು ರಚಿಸಲಾಗಿದೆ, ಕೃತಿ 16 ಸ್ಥಲಗಳಾದ ನಿಷ್ಕಲ ಲಿಂಗಸ್ಥಲ, ಮಹಾಲಿಂಗಸ್ಥಲ, ಲಿಂಗಮೂರ್ತಿಸ್ಥಲ, ಅಂಗಸ್ಥಲ, ಸಂಸಾರಸಂಬಂಧಸ್ಥಲ, ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಭಕ್ತಸ್ಥಲ, ಮಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಸ್ಥಲ, ಶರಣಸ್ಥಲ, ಐಕ್ಯಸ್ಥಲ, ಸಲೀಲಾನಂದ ಭಕ್ತಿಸ್ಥಲಗಳನ್ನು ಹೊಂದಿದೆ ಎಂದು ತಿಳಿಸಿದರು. ಶಿಬಿರದಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರದಿಂದ ಆಗಮಿಸಿರುವ 75 ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ.

ಒಂದನೇ ಪುಟದಿಂದ

ಸಿದ್ದರಾಮಯ್ಯರಿಗೆ 'ಆಲ್ ದಿ ಬೆಸ್ಟ್': ಡಿಕೆಶಿ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ನಿವಾಸದಲ್ಲಿ ಬೆಂಗಳೂರಿನಲ್ಲಿ ಶಾಸಕರ ಅಭಿಪ್ರಾಯ ಸಂಗ್ರಹಿಸಿದ್ದ ವೀಕ್ಷಕರು, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮತ್ತು ಕೆ.ಸಿ. ವೇಣುಗೋಪಾಲ್ ಅವರೊಂದಿಗೆ ಸಭೆ ನಡೆಸಿದರು. ಜೊತೆಗೆ ಕರ್ನಾಟಕ ಸಿಎಂ ಆಯ್ಕೆ ವಿಚಾರವಾಗಿ ರಾಹುಲ್ ಗಾಂಧಿಯವರನ್ನು ಸಂಪರ್ಕಿಸಿ ಚರ್ಚಿಸಿದ್ದರು. ಸಿದ್ದರಾಮಯ್ಯ ತಮಗೆ ಶಾಸಕರ ಬೆಂಬಲವಿದೆ ಎಂದು ಹೇಳುತ್ತಿದ್ದರೆ, ಡಿಕೆ ಶಿವಕುಮಾರ್ ಅವರು ನನಗೆ ಯಾರ ಬೆಂಬಲವೂ ಬೇಡ. ಕಾಂಗ್ರೆಸ್‌ನ 135 ಶಾಸಕರಿದ್ದಾರೆ ಎಂದು ಒಗಟಾಗಿ ಹೇಳಿದ್ದಾರೆ. ದೆಹಲಿಗೆ ತೆರಳಲು ಡಿ.ಕೆ. ಶಿವಕುಮಾರ್ ಅವರಿಗೆ ಇಂದು ಸಂಜೆ 7.30ಕ್ಕೆ ಏರ್ ಇಂಡಿಯಾ ವಿಮಾನದಲ್ಲಿ ಟಿಕೆಟ್ ಬುಕ್ ಮಾಡಲಾಗಿತ್ತು. ಆದರೆ, ಆರೋಗ್ಯ ಸಮಸ್ಯೆ ಮುಂದಿಟ್ಟು ಡಿ.ಕೆ. ಶಿವಕುಮಾರ್ ಕೊನೇ ಕ್ಷಣದಲ್ಲಿ ದೆಹಲಿ ಪ್ರಯಾಣವನ್ನು ರದ್ದುಪಡಿಸಿದ್ದಾರೆ.

ಹೈಕಮಾಂಡ್ ತೀರ್ಮಾನ: ಮತ್ತೊಂದೆಡೆ ದೆಹಲಿಯ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗಾರರೊಂದಿಗೆ ಇಂದು ರಾತ್ರಿ ಮಾತನಾಡಿದ ಸಿದ್ದರಾಮಯ್ಯ, ಹೈಕಮಾಂಡ್ ಯಾವ ನಿರ್ಧಾರ ತೆಗೆದುಕೊಂಡಿದೆಯೋ ನನಗೆ ಗೊತ್ತಿಲ್ಲ. ವರಿಷ್ಠರನ್ನು ಭೇಟಿಯಾದ ನಂತರ ಎಲ್ಲವನ್ನೂ ತಿಳಿಸುತ್ತೇನೆ. ಕರ್ನಾಟಕದಲ್ಲಿ ಏನಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ನನಗೆ ಶಾಸಕರ ಬೆಂಬಲವಿದೆ. ಮುಖ್ಯಮಂತ್ರಿ ಆಯ್ಕೆ ವಿಚಾರವನ್ನು ಹೈಕಮಾಂಡ್‌ಗೆ ಬಿಡಲಾಗಿದೆ. ಅವರು ತೀರ್ಮಾನ ಕೈಗೊಳ್ಳುತ್ತಾರೆ ಎಂದರು.

ಅಧಿಕಾರ ಹಂಚಿಕೆಗೆ ಸಿದ್ದರಾಮಯ್ಯ ಒಪ್ಪಿಗೆ

ನಾಯಕರಾಗಿದ್ದು, ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿ ದಂತೆ ಕಾಂಗ್ರೆಸ್ ಹೈಕಮಾಂಡ್ ಸಂಕಷ್ಟದ ಪರಿಸ್ಥಿತಿಯಲ್ಲಿದೆ. ಕಾಂಗ್ರೆಸ್ ಹೈಕಮಾಂಡ್ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದ್ದು, ಮೊದಲ ಅವಧಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುವ ಸಾಧ್ಯತೆ ದಟ್ಟ ವಾಗಿದೆ ಎನ್ನಲಾಗಿದೆ. ಶಿವಕುಮಾರ್ ಕೂಡ ಇದಕ್ಕೆ ಒಪ್ಪುತ್ತಾರೆ. ಆದರೆ, ಗೃಹ ಖಾತೆ ಹೊಂದಿರುವ ಏಕೈಕ ಉಪಮುಖ್ಯಮಂತ್ರಿಯಾಗಬೇಕು ಎಂದು ಪಕ್ಷದ ಹೈಕಮಾಂಡ್‌ಗೆ ಸ್ಪಷ್ಟವಾಗಿ ತಿಳಿಸಿದ್ದಾರೆ ಎಂದು ಪಕ್ಷದ ಮೂಲಗಳು ಐಎಎನ್‌ಎಸ್‌ಗೆ ತಿಳಿಸಿವೆ.

ಕರ್ನಾಟಕ ಕಾಂಗ್ರೆಸ್‌ನ ಹಿರಿಯ ನಾಯಕರ ಪ್ರಕಾರ, ಚುನಾಯಿತ ಶಾಸಕರಲ್ಲಿ ಸುಮಾರು 70 ಪ್ರತಿಶತದಷ್ಟು ಜನರು ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ಬೆಂಬಲಿಸಿದ್ದಾರೆ. ಎಐಸಿಸಿ ವೀಕ್ಷಕರಾದ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಸುಶೀಲ್ ಕುಮಾರ್ ಶಿಂಧೆ, ಜಿತೇಂದ್ರ ಸಿಂಗ್ ಮತ್ತು ದೀಪಕ್ ಬಬಾರಿಯಾ ಅವರೊಂದಿಗೆ ಸಮಾಲೋಚಿಸಿದ ನಂತರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅಂತಿಮ ನಿರ್ಧಾರವನ್ನು ಪ್ರಕಟಿಸಲಿದ್ದಾರೆ. ಎಐಸಿಸಿ ಅಧ್ಯಕ್ಷರು ಸೋನಿಯಾ, ರಾಹುಲ್ ಮತ್ತು ಪ್ರಿಯಾಂಕಾ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಮತ್ತು ಕರ್ನಾಟಕ ಉಸ್ತುವಾರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ ಅವರೊಂದಿಗೂ ಚರ್ಚೆ ನಡೆಸಲಿದ್ದಾರೆ.

ರಾಜಕೀಯ ಬಿಟ್ಟು ಬಿಸಿನೆಸ್ ಮಾಡ್ತೇನೆ...

ಎಂ.ಬಿ. ಪಾಟೀಲ್ ಸೇರಿದಂತೆ ಹಿರಿಯ ನಾಯಕರಿದ್ದಾರೆ. ಈ ಮಧ್ಯೆ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಕುರಿತಂತೆ ದೆಹಲಿಯಿಂದ ಬಂದಿದ್ದ ವೀಕ್ಷಕರು ಇಂದು ಮುಂಜಾನೆಯವರೆಗೂ ಶಾಸಕರ ಜೊತೆ ಸಮಾಲೋಚನೆ ನಡೆಸಿ, ಅವರ ಅಭಿಪ್ರಾಯ ಪಡೆದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ತಲುಪಿಸಿದ್ದಾರೆ.

ಈ ವರದಿ ಆಧಾರದ ಮೇಲೆ ಖರ್ಗೆ ಅವರು ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ, ಪ್ರಿಯಾಂಕಾಗಾಂಧಿ ಹಾಗೂ ರಾಹುಲ್‌ಗಾಂಧಿ ಅವರೊಟ್ಟಿಗೆ ಸಮಾಲೋಚನೆ ಮಾಡಿದ್ದಾರೆ. ಸಮಾಲೋಚನೆಯ ನಂತರವೇ ಸಿದ್ದರಾಮಯ್ಯ ಹಾಗೂ ಶಿವಕುಮಾರ್‌ಗೆ ದೆಹಲಿಗೆ ಬರುವಂತೆ ಬುಲಾವ್ ಮಾಡಲಾಯಿತು. ನಿಮ್ಮ ಹುಟ್ಟುಹಬ್ಬಕ್ಕೆ ದೆಹಲಿ ನಾಯಕರು ಉಡುಗೊರೆ ನೀಡುತ್ತಾರೆ ಎಂಬ ಸುದ್ದಿಗಾರರ ಪ್ರಶ್ನೆಗೆ ರಾಜ್ಯದ ಜನ ನನ್ನ ಮೇಲೆ ವಿಶ್ವಾಸವಿಟ್ಟು, 135 ಸ್ಥಾನಗಳ ಬಹುದೊಡ್ಡ ಗೆಲುವು ನೀಡಿದ್ದಾರೆ. ಇದಕ್ಕಿಂತ ಉಡುಗೊರೆ ನಿರೀಕ್ಷಿಸಲು ಸಾಧ್ಯವೇ. ಅಧಿಕಾರ ಇಲ್ಲದಿದ್ದರೂ, ಎಲ್ಲಾ ಕಿರುಕುಳ ಸವಾಲು, ಡಬಲ್ ಇಂಜಿನ್ ಸರ್ಕಾರವನ್ನು ಎದುರಿಸಿ, ಪಕ್ಷ ಸಂಘಟನೆ ಮಾಡಿದ್ದೇನೆ ಎನ್ನುವ ಮೂಲಕ ನನಗೇ ಮುಖ್ಯಮಂತ್ರಿ ಸ್ಥಾನ ದೊರೆಯಬೇಕೆಂದು ಪರೋಕ್ಷವಾಗಿ ತಿಳಿಸಿದ್ದಾರೆ.

ಬಿಲ್ ಪಾವತಿಸಲು ಗ್ರಾಹಕರ ತಕರಾರು

ತಿಳಿಸಿದ್ದಾರೆ. ಈ ರೀತಿಯ ಅನುಭವಗಳು ಮೈಸೂರು ನಗರದ ಕೆಲ ವಸತಿ ಬಡಾವಣೆಗಳು ಹಾಗೂ ಗ್ರಾಮಾಂತರ ಪ್ರದೇಶದ ಕೆಲ ಹಳ್ಳಿಗಳಲ್ಲಿ ಇಂದು ನಮಗಾಗಿವೆ. "ಇನ್ನೂ ಅಧಿಸೂಚನೆಯಾಗಿಲ್ಲ, ರೂಪುರೇಷೆ ಗೊತ್ತಿಲ್ಲ. ಅಲ್ಲಿಯವರೆಗೆ ಹಳೇ ಬಾಕಿಯನ್ನಾದರೂ ಕಟ್ಟಿ ಎಂದರೂ, ಸರ್ಕಾರಿ ಆದೇಶ ಬರುವವರೆಗೆ ಸುಮ್ಮನಿರಿ" ಎಂದು ಗ್ರಾಹಕರು ನಮಗೇ ಪಾಠ ಹೇಳುತ್ತಿದ್ದಾರೆ. ನಾವು ಹೇಗೆ ತಾನೇ ವಿದ್ಯುತ್ ಬಿಲ್ ವಸೂಲಿ ಮಾಡುವುದು ಎಂದು ಸೆಸ್ಕ್ ಸಿಬ್ಬಂದಿ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಒಂದೆಡೆ ಇಲಾಖೆ ಉನ್ನತ ಅಧಿಕಾರಿಗಳು ವಿದ್ಯುತ್ ಬಿಲ್ ವಸೂಲಿ ಮಾಡಿ ಎಂದು ಟಾರ್ಗೆಟ್ ನಿಗದಿ ಮಾಡಿದ್ದಾರೆ. ಮತ್ತೊಂದೆಡೆ ಕೆಲವು ಗ್ರಾಮಗಳಿಗೆ ಹೋಗುವುದಕ್ಕೂ ಬಿಡದೆ ವಾಪಸ್ ಕಳುಹಿಸುತ್ತಿದ್ದಾರೆ. ಈ ನಡುವೆ ನಾವು ಏನು ಮಾಡಬೇಕೆಂಬುದೇ ತೋಚುತ್ತಿಲ್ಲ ಎಂದು ಚೆಸ್ಕಾಂ ಅಧಿಕಾರಿಗಳು 'ಮೈಸೂರು ಮಿತ್ರ'ನಲ್ಲಿ ತಮ್ಮ ಅಳಲು ತೋಡಿಕೊಂಡಿದ್ದಾರೆ. ಗೃಹಲಕ್ಷ್ಮಿ ಯೋಜನೆಯಡಿ ಮನೆ ಯಜಮಾನಿಗೆ ತಿಂಗಳಿಗೆ 2000 ರೂ. ನಗದು, ಅನ್ನಭಾಗ್ಯ ಯೋಜನೆಯಡಿ ಬಡವರಿಗೆ ತಲಾ 10 ಕೆಜಿ ಅಕ್ಕಿ ಉಚಿತ. ಯುವನಿಧಿ ಯೋಜನೆಯಲ್ಲಿ ನಿರುದ್ಯೋಗಿ ಪದವೀಧರರಿಗೆ ಪ್ರತೀ ತಿಂಗಳೂ 3,000 ರೂ. ಹಾಗೂ ನಿರುದ್ಯೋಗಿ ಡಿಪ್ಲೊಮಾ ಪೂರ್ಣಗೊಳಿಸಿರುವವರಿಗೆ 1,500 ರೂ. ಸಹಾಯಧನ ಮತ್ತು ಮಹಿಳೆಯರಿಗೆ ಉಚಿತ ಸಾರಿಗೆ ಬಸ್ ಪ್ರಯಾಣ ಯೋಜನೆಯನ್ನು ಕಾಂಗ್ರೆಸ್ ಗ್ಯಾರಂಟಿ ಪ್ರಣಾಳಿಕೆಯಲ್ಲಿ ಘೋಷಿಸಿರುವುದನ್ನು ಸ್ಮರಿಸಬಹುದಾಗಿದೆ.

3 ದಿನಗಳ ಕಾಲ ಆನೆ ಗಣತಿ

ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಹಿಂದೆಯೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ (ಆನೆಚೌಕೂರ್‌ನಿಂದ ಮುತ್ತೂರು) ಸಫಾರಿ ಬಫರ್ ವಲಯದಲ್ಲಿ ಆನೆ ಹಿಂಬದಿ ಸವಾರಿ ಆರಂಭಿಸಲು ಯೋಜಿಸಲಾಗಿತ್ತು. ಆದರೆ, ಆಕ್ಷೇಪಣೆಗಳು ವ್ಯಕ್ತವಾದ ನಂತರ ಸರ್ಕಾರವು ಈ ಕ್ರಮವನ್ನು ಕೈಬಿಟ್ಟಿತು. ಆದರೆ, ಈ ಕುರಿತು ಇನ್ನೂ ಅಂತಿಮ ನಿರ್ಧಾರ ಕೈಗೊಳ್ಳಬೇಕಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಎನ್‌ಆರ್ ಕ್ಷೇತ್ರದ ಅಭಿವೃದ್ಧಿಗೆ ಶಾಸಕರು ಗಮನಹರಿಸಲಿ

● ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಸಂದೇಶ್‌ಸ್ವಾಮಿ ಮನವಿ ● ಕ್ಷೇತ್ರವು ನನ್ನ ಕರ್ಮಭೂಮಿ, ಉಸಿರು ಇರುವವರೆಗೂ ಕೈಲಾದಷ್ಟು ಜನಸೇವೆ ಮಾಡುತ್ತೇನೆ

ಮೈಸೂರು,ಮೇ 15(ಪಿಎಂ)– ನರಸಿಂಹರಾಜ ಕ್ಷೇತ್ರದ (ಎನ್‌ಆರ್ ಕ್ಷೇತ್ರ) ಶಾಸಕರಾಗಿ ಆರನೇ ಬಾರಿಗೆ ತನ್ವೀರ್ ಸೇಠ್ ಆಯ್ಕೆಯಾಗಿದ್ದು, ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಸಂದೇಶ್‌ಸ್ವಾಮಿ (ಎಸ್.ಸತೀಶ್), ಅವರು ಈಗಲಾದರೂ ಕ್ಷೇತ್ರದ ಅಭಿವೃದ್ಧಿಗೆ ಗಮನ ನೀಡಬೇಕೆಂದು ಮನವಿ ಮಾಡಿದರು.

ಪರಾಜಿತಗೊಂಡ ಕಾರಣಕ್ಕೆ ಕ್ಷೇತ್ರದಿಂದ ನಾನು ವಿಮುಕ್ತನಾಗುವುದಿಲ್ಲ. ಈ ಕ್ಷೇತ್ರವು ನನ್ನ ಕರ್ಮಭೂಮಿ. ಉಸಿರು ಇರುವತನಕ ಕೈಲಾದಷ್ಟು ಜನಸೇವೆ ಮಾಡುತ್ತೇನೆ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಗೆ ಮತ ನೀಡಿದ ಕ್ಷೇತ್ರದ ಮತದಾರರಿಗೆ ಧನ್ಯವಾದ ಹೇಳುತ್ತೇನೆ. ಕ್ಷೇತ್ರದ ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡುವ ಮೂಲಕ ಶಾಸಕರು ಕ್ಷೇತ್ರದ ಅಭಿವೃದ್ಧಿಗೆ ಗಮನ ನೀಡಬೇಕು ಎಂದು ಕೋರಿದರು.

ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡಲು ಸದಾ ಸಿದ್ಧನಿದ್ದೇನೆ. ಕ್ಷೇತ್ರದಲ್ಲಿ ಅಭಿವೃದ್ಧಿಗೆ ನಾಂದಿ ಹಾಡಬೇಕೆಂಬ ಅಪೇಕ್ಷೆಯಲ್ಲಿ 3 ಬಾರಿ ಸ್ಪರ್ಧಿಸಿ, ಪರಾಜಿತಗೊಂಡಿದ್ದೇನೆ. ಕ್ಷೇತ್ರದ ಗಾಯಿತ್ರಿಪುರಂ ಭಾಗದಲ್ಲಿ 3 ಬಾರಿ ಪಾಲಿಕೆ ಸದಸ್ಯನಾಗಿ, ಜೊತೆಗೆ ಮೇಯರ್ ಆಗಿ ಅಭಿವೃದ್ಧಿ ಪೂರಕವಾಗಿ ಕೆಲಸ ಮಾಡಿದ್ದೇನೆ ಹಿತೈಷಿಗಳು, ಕ್ಷೇತ್ರದ ಜನತೆಯ ಅಪೇಕ್ಷೆ ಮೇರೆಗೆ 2013, 2018 ಮತ್ತು ಈಗ 2023ರಲ್ಲಿ ಸ್ಪರ್ಧೆ ಮಾಡಿದ್ದೆ. 2013ರಲ್ಲಿ 30 ಸಾವಿರ, 2018ರಲ್ಲಿ 44 ಸಾವಿರ, ಇದೀಗ 2023ರಲ್ಲಿ 52 ಸಾವಿರಕ್ಕೂ ಅಧಿಕ ಮತಗಳನ್ನು ಕ್ಷೇತ್ರದ ಜನತೆ ನನಗೆ ನೀಡಿದ್ದಾರೆ ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಸುಸಜ್ಜಿತ ಸರ್ಕಾರಿ ಆಸ್ಪತ್ರೆ, ಉನ್ನತ ಶಿಕ್ಷಣಕ್ಕಾಗಿ ಕಾಲೇಜು ನಿರ್ಮಾಣದ ಜೊತೆಗೆ ಮೌಲ ಸೌಕರ್ಯ ಒದಗಿಸಲು ಶಾಸಕರು ಮುಂದಾಗಬೇಕು. ಗಾಂಜಾ ಸೇರಿದಂತೆ ಇನ್ನಿತರ ಮಾದಕ ವಸ್ತುಗಳ ಮಾರಾಟ ಜಾಲ ಕ್ಷೇತ್ರದಲ್ಲಿ ವ್ಯಾಪಿಸಿದೆ. ವ್ಯಸನಕ್ಕೆ ತುತ್ತಾದ ಯುವಕರು ನಿರುದ್ಯೋಗಿಗಳಾಗಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ. ತನ್ವೀರ್ ಸೇಠ್ ಅವರ ಮೇಲೂ ಹಲ್ಲೆ ಆಗಿತ್ತು. ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಅಪರಾಧ ಪ್ರಕರಣಗಳ ಬಗ್ಗೆ ಅವಲೋಕಿಸಿದರೆ ಕ್ಷೇತ್ರದ ಪರಿಸ್ಥಿತಿ ಅರ್ಥವಾಗುತ್ತದೆ. ಇಂತಹ ಪರಿಸ್ಥಿತಿ ಪರಿವರ್ತಿಸಲು ಶಾಸಕರಿಗೆ ಅವಕಾಶವಿತ್ತು. ಆದರೆ ಅವರು ಮಾಡಿಲ್ಲ ಎಂದು ದೂರಿದರು.



ಕಳೆದ 25 ವರ್ಷಗಳಿಂದ ಕ್ಷೇತ್ರದಲ್ಲಿ ಅಭಿಮಾನಿಗಳು, ಸ್ನೇಹಿತರು ನನ್ನ ಬೆಂಬಲಿಸಿದ್ದಾರೆ. ಅವರಿಗೆಲ್ಲಾ ಕೃತಜ್ಞತೆ ಸಲ್ಲಿಸುತ್ತೇನೆ. ಬಿಜೆಪಿಯಿಂದ 2 ಬಾರಿ ಟಿಕೆಟ್ ದೊರೆತಿದ್ದು, ಇದಕ್ಕಾಗಿ ಪಕ್ಷದ ವರಿಷ್ಠರು, ಮುಖಂಡರು, ಕಾರ್ಯಕರ್ತರಿಗೆ ಧನ್ಯವಾದ ಹೇಳುತ್ತೇನೆ. ಪಕ್ಷದಿಂದ ಕ್ಷೇತ್ರಗಳನ್ನು ಎ, ಬಿ ಮತ್ತು ಸಿ ಎಂದು ವರ್ಗೀಕರಿಸಲಾಗಿತ್ತು. ಅಂತೆಯೇ ಎನ್‌ಆರ್ ಕ್ಷೇತ್ರವನ್ನು ಸಿ ದರ್ಜೆ ಎಂದು ಘೋಷಿಸಲಾಗಿತ್ತು. ಇದೀಗ ಕ್ಷೇತ್ರವನ್ನು ಪಕ್ಷದ ಮಾನದಂಡಗಳಿಗೆ ಅನುಗುಣವಾಗಿ ಎ ದರ್ಜೆಗೇರಿಸಿದ್ದೇನೆ. ಕ್ಷೇತ್ರದ ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಸೂಕ್ತ ಸ್ಥಾನಮಾನ ಕಲ್ಪಿಸಬೇಕು. ಆ ಮೂಲಕ ಕ್ಷೇತ್ರದ ಜನತೆಗೆ ಅನುಕೂಲವಾಗುವಂತೆ ಮಾಡಬೇಕೆಂದು ಪಕ್ಷದ ಮುಖಂಡರಲ್ಲಿ ಮನವಿ ಮಾಡುತ್ತೇನೆ ಎಂದರು.

2013ರಲ್ಲಿ 30 ಸಾವಿರ ಮತಗಳನ್ನು ಪಡೆದಿದ್ದರೆ, ಈಗ 52 ಸಾವಿರ ಮತಗಳನ್ನು ಕ್ಷೇತ್ರದ ಜನತೆ ನನಗೆ ಕೊಟ್ಟಿದ್ದಾರೆ. ಹಾಗಾಗಿ ತೃಪ್ತಿ ಇದ್ದು, ಮುಂದೊಂದು ದಿನ ಬದಲಾವಣೆಗೆ ಅವಕಾಶ ದೊರೆಯುವ ವಿಶ್ವಾಸವಿದೆ. ನನಗೆ ಮತ ಕೊಟ್ಟ ಭಾಗಕ್ಕೆ ನಾನು ಶಾಸಕನಂತೆಯೇ ಕೆಲಸ ಮಾಡುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕ್ಷೇತ್ರದಲ್ಲಿ ಯಾವ ಭಾಗದಲ್ಲಿ ನಿಮಗೆ ಮತ ಹಾಕಿಲ್ಲ ಎಂಬುದಕ್ಕೆ ಪ್ರತಿಕ್ರಿಯಿಸಿ, ಈಗಾಗಲೇ ಹೇಳಿದ ಅಲ್ಪಸಂಖ್ಯಾತರು ನನಗೆ ಓಟು ಕೊಟ್ಟಿಲ್ಲ. 2013ರಲ್ಲಿ ಜೆಡಿಎಸ್‌ನಿಂದ ಸ್ಪರ್ಧೆ ಮಾಡಿದ್ದಾಗ ಇವರ ಮತಗಳು ದೊರೆತಿದ್ದವು. ಈ ಬಾರಿ ಯಾವ್ಯಾವ ಭಾಗದಲ್ಲಿ ನನಗೆ ಮತ ಹಾಕಿದ್ದಾರೆ ಎಂಬುದು ಸದ್ಯ ಗೊತ್ತಿಲ್ಲ. ಆದರೆ 70ರಿಂದ 80 ಬೂತ್‌ಗಳಲ್ಲಿ ಮತ ನನಗೆ ಬಂದಿಲ್ಲ ಎಂದು ಹೇಳಿದರು.

ಒಬ್ಬ ಶಾಸಕರಿಗೆ ಎಷ್ಟು ಅಧಿಕಾರ ಇದೆಯೆಂದು ನಿಮಗೆ ಗೊತ್ತಿದೆ. ಅಯೂಬ್‌ಖಾನ್, ಸಂದೇಶ್ ಸ್ವಾಮಿಯಂತಹವರು ಅಭಿವೃದ್ಧಿ ಕೈಗೊಳ್ಳಲು ಇವರನ್ನು ತಡೆಯುತ್ತಾರೆ ಎಂದರೆ ನಂಬಲು ಸಾಧ್ಯವೇ? ಹೀಗೆಂದು ಅವರು ಹೇಳಬಹುದೇ? 35ನೇ ವಾರ್ಡ್‌ನಲ್ಲಿ ನನ್ನ ಪುತ್ರ ಸಾತ್ವಿಕ್ ಗೆದ್ದ ಹಿನ್ನೆಲೆಯಲ್ಲಿ ಹೆಚ್.ಡಿ.ರೇವಣ್ಣ ಲೋಕೋಪಯೋಗಿ ಸಚಿವರಾಗಿದ್ದಾಗ, ಮನವಿ ಮೇರೆಗೆ ವಾರ್ಡಿನ ಒಂದು ರಸ್ತೆ ಅಭಿವೃದ್ಧಿಗೆ ರೇವಣ್ಣನವರು 8 ಕೋಟಿ ರೂ. ಅನುದಾನ ಕಲ್ಪಿಸಿದರು. ಇದೇ ಶಾಸಕರು ನನ್ನ ಗಮನಕ್ಕೆ ತಂದಿಲ್ಲವೆಂದು ಆರೋಪ ಮಾಡಿದರು. ಆದರೆ ಈ ರಸ್ತೆ ಅಭಿವೃದ್ಧಿ ತಡೆಯಲು ಸಾಧ್ಯವಾಯಿತೇ? ಅಭಿವೃದ್ಧಿ ಮಾಡಬೇಕೆಂಬ ಇಚ್ಛಾಶಕ್ತಿ ಇದ್ದರೆ ಮಾಡಲು ಸಾಧ್ಯವಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸೋಲಿಗೆ ಕಾರಣವೇನು....

ಅಲ್ಲಿ ಅತೀ ಹೆಚ್ಚು ಅಲ್ಪಸಂಖ್ಯಾತ ಸಮುದಾಯವಿದೆ ಹಳೆ ಮೈಸೂರು ಭಾಗದ ನಾಲ್ಕು ಜಿಲ್ಲೆಗಳಲ್ಲಿ ನಮ್ಮ ಕೋಮಿಗೆ ಸೇರಿದವರು ಒಬ್ಬರಾದರೂ ಗೆಲ್ಲಬೇಕು ಎಂಬುದು ಈ ಸಮುದಾಯದ ಅಪೇಕ್ಷೆ ಇರಬಹುದು. ಅದು ತಪ್ಪಲ್ಲ. ಆ ಜನಾಂಗಕ್ಕೂ ಸೇರಿ ಎಲ್ಲಾ ಸಮುದಾಯಗಳಿಗೆ ಶಾಸಕರು ಮೂಲ ಸೌಕರ್ಯ ಕಲ್ಪಿಸಿ ಕೊಡಲಿ. ಈ ಸಮುದಾಯವು ಅವರಿಗೆ 60ರಿಂದ 70 ಸಾವಿರ ಮತ ಹಾಕಿದರೆ, ನನಗೆ 7ರಿಂದ 8 ಸಾವಿರ ಮತ ಕೂಡ ಹಾಕಿಲ್ಲ. ಹಿಂದೂಗಳಲ್ಲಿ ಶೇ.50ರಷ್ಟು ಮತಗಳು ನಮ್ಮಿಬ್ಬರಿಗೂ ವಿಭಜನೆಯಾಗಿವೆ. ಹಾಗಾಗಿ ಕೇವಲ ಐದಾರು ವಾರ್ಡಿನ ತಮ್ಮ ಜನಕ್ಕೆ ಮಾತ್ರ ಸೀಮಿತವಾಗ ಬಾರದು ಎಂದು ತನ್ವೀರ್‌ಸೇಠ್ ಅರ್ಥ ಮಾಡಿಕೊಳ್ಳಬೇಕು ಎಂದು ಸಂದೇಶ್‌ಸ್ವಾಮಿ ಕುಟುಕಿದರು.

ಕೆಲವು ಹಿಂದೂಗಳಿರುವ ಭಾಗದಲ್ಲಿ ನನಗೆ 2 ಸಾವಿರ ಮತ ಹಾಕಿದ್ದರೆ, ಅವರಿಗೆ 4 ಸಾವಿರ ಮತ ಚಲಾವಣೆಯಾಗಿವೆ. ಪ್ರಚಾರಕ್ಕೆ ಬರಬೇಡಿ ಎಂದು ಅವರ ವಿರುದ್ಧ ಗಾಂಧಿನಗರದಲ್ಲಿ ಪ್ರತಿಭಟನೆ ವ್ಯಕ್ತವಾಗಿತ್ತು. ಈ ಭಾಗದಲ್ಲಿ ಅವರಿಗೆ ನಾಲ್ಕೂವರೆ ಸಾವಿರ ಮತಗಳು ಬಂದಿದ್ದರೆ, ನನಗೆ ಎರಡೂವರೆ ಸಾವಿರ ಮತಗಳು ಬಂದಿವೆ. ಇಲ್ಲಿ ಹಿಂದೂಗಳು ಧರ್ಮ ನೋಡಿ ಮತ ಚಲಾವಣೆ ಮಾಡಿಲ್ಲ ಎಂದರು.

ಗ್ಯಾರಂಟಿ ಭರವಸೆಯಿಂದ ಬಿಜೆಪಿಗೆ ಹಿನ್ನಡೆ: ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಯಕ್ರಮಗಳನ್ನು ಕ್ಷೇತ್ರದ ಜನತೆ ನಂಬಿದ್ದಾರೆ. ಇದರಿಂದಲೇ ನನಗೆ ಹಿನ್ನಡೆಯಾಗಿದೆ. ಇಡೀ ರಾಜ್ಯದಲ್ಲಿ ಬಹುಶಃ ಇದೇ ಆಗಿದ್ದು, ಅಧಿಕಾರದ ಚುಕ್ಕಾಣಿ ಹಿಡಿಯುತ್ತಿರುವ ಕಾಂಗ್ರೆಸ್, ತಮ್ಮ ಗ್ಯಾರಂಟಿ ಭರವಸೆಗಳನ್ನು ಶೀಘ್ರದಲ್ಲಿ ಈಡೇರಿಸಬೇಕೆಂದು ಮನವಿ ಮಾಡಿದರು. ಎನ್‌ಆರ್ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಡಾ.ಭಾನುಪ್ರಕಾಶ್, ಮಾಜಿ ಅಧ್ಯಕ್ಷ ಸು.ಮುರಳಿ, ಪ್ರಧಾನ ಕಾರ್ಯದರ್ಶಿ ಸ್ವಾಮಿಗೌಡ ಗೋಷ್ಠಿಯಲ್ಲಿದ್ದರು.

ವರ್ಗಾವಣೆಗೊಂಡ ನ್ಯಾಯಾಧೀಶರಿಗೆ ಬೀಳ್ಕೊಡುಗೆ



ಮೈಸೂರು, ಮೇ 15(ಎಸ್‌ಪಿಎನ್)– ಇತ್ತೀಚೆಗೆ ಮೈಸೂರಿನಿಂದ ಬೇರೆ ಬೇರೆ ಜಿಲ್ಲೆಗಳಿಗೆ ವರ್ಗಾವಣೆಗೊಂಡ ನ್ಯಾಯಾಧೀಶರನ್ನು ಮೈಸೂರು ವಕೀಲರ ಸಂಘದ ಪದಾಧಿಕಾರಿಗಳು ಸನ್ಮಾನಿಸಿದರು.

ಮೈಸೂರು ವಕೀಲರ ಸಂಘದ ವತಿಯಿಂದ ಸೋಮವಾರ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ 8 ನ್ಯಾಯಾಧೀಶರನ್ನು ಸನ್ಮಾನಿಸಿ, ಬೀಳ್ಕೊಡಲಾಯಿತು. ಜಿಲ್ಲಾ ನ್ಯಾಯಾಧೀಶರಾದ ಸರಸ್ವತಿ, ವಿಷ್ಣು ಕೋಶಂದರ್, ಹೊಸಮಣಿ ಪುಂಡಲಿಕ, ಮಲ್ಲಿಕಾರ್ಜುನ, ದೊಡ್ಡೇಗೌಡ, ಹಿರಿಯ ಶ್ರೇಣಿ ನ್ಯಾಯಾಧೀಶರಾದ ಕೆ.ವಿದ್ಯಾ, ಎ.ಎಂ.ಚೈತ್ರಾ, ದೇವರಾಜ ಬೂತೆ, ಕಿರಿಯ ಶ್ರೇಣಿ ನ್ಯಾಯಾಧೀಶರಾದ ಗೀತಾ ಕುಂಬರ್, ಧನವಂತಿ ಅವರನ್ನು ಹಂಗಾಮಿ ಪ್ರಧಾನ ಜಿಲ್ಲಾ ಮತ್ತು ಸತ್ರ ಜಿಲ್ಲಾ ನ್ಯಾಯಾಧೀಶ ಮಲ್ಲಿಕಾರ್ಜುನ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್ ನೇತೃತ್ವದಲ್ಲಿ ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ಕೋವಿಡ್ ಸಂದರ್ಭದಲ್ಲಿ ವಕೀಲರಾದ ಎಸ್.ಜೆ.ಲಕ್ಷ್ಮೇಗೌಡ, ಎಸ್.ಬಿ. ನಟೇಶ್, ಬಾಲಚಂದ್ರ ಸೇರಿದಂತೆ ಒಟ್ಟು 86 ವಕೀಲರು ಸಾವನ್ನಪ್ಪಿದರು. ಈ ವೇಳೆ ಕಣ್ಣು ಮುಂದೆ ನಮ್ಮ ಸ್ನೇಹಿತರ ಸಾವು ಸಂಭವಿಸಿದರೂ ಏನೂ ಮಾಡಲಾಗದ ಸ್ಥಿತಿ ನಿರ್ಮಾಣವಾಗಿತ್ತು ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕೆ.ಎಸ್.ಬಿ.ಸಿ.ಸದಸ್ಯ ಚಂದ್ರಮೌಳಿ, ಖಜಾಂಚಿ ಮಹದೇವಸ್ವಾಮಿ, ಜಂಟಿ ಕಾರ್ಯದರ್ಶಿ ನಾಗೇಶ್, ಮಹಿಳಾ ಜಂಟಿ ಕಾರ್ಯದರ್ಶಿ ಭಾಗ್ಯಮ್ಮ, ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಮೇ 18, 19ರಂದು ಶೈಕ್ಷಣಿಕ, ಸಾಂಸ್ಕೃತಿಕ ಸ್ಪರ್ಧೆ



ಮೈಸೂರು,ಮೇ 15(ಪಿಎಂ)– ಮೈಸೂರಿನ ಜೆಪಿ ನಗರದ ಹಿಂದೂಸ್ಥಾನ್ ಕಾಲೇಜಿನ ವಿದ್ಯಾರ್ಥಿ ಪರಿಷತ್ 'ಹಿತಾನ್ಸ್' ವತಿಯಿಂದ ಮೇ 18 ಮತ್ತು 19ರಂದು 'ಸ್ಪೆಕ್ಟ್ರಾ' ಶೀರ್ಷಿಕೆಯಡಿ ರಾಷ್ಟ್ರೀಯ ಮಟ್ಟದ ಅಂತರ ಕಾಲೇಜು ವ್ಯವಹಾರ ನಿರ್ವಹಣಾ, ಮಾಹಿತಿ ತಂತ್ರಜ್ಞಾನ, ವಾಯುಯಾನ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಸಿ.ಕೆ.ಪ್ರಿಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜು ಆವರಣದಲ್ಲಿ ಸ್ಪರ್ಧೆಗಳು ನಡೆಯಲಿದ್ದು, ಒಟ್ಟು 12 ವಿಧದ ಸ್ಪರ್ಧೆಗಳು ನಡೆಯಲಿವೆ. ಅತಿ ಹೆಚ್ಚು ಸ್ಪರ್ಧೆಗಳಲ್ಲಿ ವಿಜೇತರಾದ ತಂಡಕ್ಕೆ 20 ಸಾವಿರ ನಗದು ಹಾಗೂ ಟ್ರೋಫಿ ದೊರೆಯಲಿದೆ. ಎರಡನೇ ಸ್ಥಾನಗಳಿಸುವ ತಂಡಕ್ಕೆ 10 ಸಾವಿರ ರೂ. ನಗದು ಹಾಗೂ ಟ್ರೋಫಿ ಲಭಿಸಲಿದೆ ಎಂದರು.

ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ ಕಾನೂನು, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಬಹುದು. ಪ್ರತಿ ಸ್ಪರ್ಧೆಗೆ ಪ್ರವೇಶ ಶುಲ್ಕ ನಿಗದಿ ಮಾಡಿದ್ದು, ಹೆಚ್ಚಿನ ವಿವರಗಳಿಗೆ ಮೊ.ಸಂ. 80950 78302 ಸಂಪರ್ಕಿಸಬಹುದು ಎಂದು ತಿಳಿಸಿದರು. ಸ್ಪೆಕ್ಟ್ರಾ ಸಂಚಾಲಕರಾದ ಆರ್.ಡಿ.ಸೂಕ್ಷ್ಮ, ಸವಿತಾ, ಮೋಹನ್ ಕುಮಾರ್, ನೋಂದಣಿ ವಿಭಾಗದ ಸಂಚಾಲಕ ವಿ.ಈಶ್ವರ್ ಗೋಷ್ಠಿಯಲ್ಲಿದ್ದರು.

ಚಾಮುಂಡೇಶ್ವರಿ ದರ್ಶನ ಪಡೆದ ಕೇಂದ್ರ ಸಚಿವೆ ಶೋಭಾ

ಮೈಸೂರು, ಮೇ 15(ಎಸ್‌ಪಿಎನ್)– ಮೈಸೂರಿನ ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಮಂಗಳವಾರ ಸಂಜೆ ಚಾಮುಂಡಿಬೆಟ್ಟಕ್ಕೆ ತೆರಳಿ, ದೇವಿ ದರ್ಶನ ಪಡೆದರು.

ಈ ವೇಳೆ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ನೂತನ ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್ ಸೇರಿದಂತೆ ಇತರೆ ಮುಖಂಡರು ಉಪಸ್ಥಿತರಿದ್ದರು.

ನಂತರ ಮೈಸೂರು ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮೈಸೂರು ಗ್ರಾಮಾಂತರ ಘಟಕದ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮಹಿಳಾ ಮುಖಂಡರಾದ ಹೇಮಾ ನಂದೀಶ್, ಸೋಮಸುಂದರ್, ಖಂಡೇಸ್, ಪ್ರದೀಪ್ ಕುಮಾರ್, ಜಯರಾಮ್ ಭೇಟಿ ಮಾಡಿ ಹೂಗುಚ್ಛ ನೀಡಿ, ಸ್ವಾಗತಿಸಿದರು.



ಮೇ 20ರಂದು ಮೈಸೂರು ನಗೆ ಉತ್ಸವ

ಮೈಸೂರು,ಮೇ 15(ಪಿಎಂ)– ರೋಹಿತ್ ಪದಕಿ ಪ್ರೊಡಕ್ಷನ್ಸ್ ವತಿಯಿಂದ ಮೇ 20ರಂದು ಹಮ್ಮಿಕೊಂಡಿರುವ ಮೈಸೂರು ನಗೆ ಉತ್ಸವದಲ್ಲಿ ಕಾಮಿಡಿ ಬ್ರಿಗೇಡ್ ತಂಡವು ಹಾಸ್ಯ ಕಾರ್ಯಕ್ರಮ ನಡೆಸಿಕೊಡಲಿದೆ ಎಂದು ಬ್ರಿಗೇಡ್‌ನ ಸಹ ಸಂಸ್ಥಾಪಕ ರಾಮಚರಣ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6.30ರಿಂದ ರಾತ್ರಿ 8ರವರೆಗೆ ಮೈಸೂರಿನ ಮಾನಸ ಗಂಗೋತ್ರಿಯ ಲಲಿತಕಲಾ ಕಾಲೇಜಿನ ಸಭಾಂಗಣದಲ್ಲಿ ನಗೆ ಉತ್ಸವ ನಡೆಯಲಿದೆ. ಕಾರ್ಯಕ್ರಮಕ್ಕೆ ಟಿಕೆಟ್ ದರ 100 ರೂ. ನಿಗದಿ ಪಡಿಸಲಾಗಿದೆ. ಬುಕ್ ಮೈಶೋನಲ್ಲಿ ಟಿಕೆಟ್‌ಗಳು ದೊರೆಯಲಿವೆ ಎಂದರು. ಬ್ರಿಗೇಡ್‌ನ ವ್ಯವಸ್ಥಾಪಕ ಅರ್ಜುನ್ ನಾಡಿಗ್ ಗೋಷ್ಠಿಯಲ್ಲಿದ್ದರು.

ಮೈಸೂರಲ್ಲಿ ಮೇ 26ರಿಂದ ಮೂರು ದಿನ ಮಾವು ಮೇಳ



● ಕುಪ್ಪಣ್ಣ ಪಾರ್ಕ್‌ನಲ್ಲಿ ನಡೆಯಲಿರುವ ಮಾವು ಮೇಳ ● ಮೇ 26 ರಿಂದ 28ರವರೆಗೆ ನಡೆಯಲಿದೆ ● 20 ಮಳಿಗೆಗಳಲ್ಲಿ ವಿವಿಧ ಬಗೆಯ ಮಾವು ಮಾರಾಟ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಮೇ 15 – ಹಣ್ಣುಗಳ ರಾಜ ಮಾವಿನಹಣ್ಣು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು, ವಿವಿಧ ಬಗೆಯ ಮಾವಿನಹಣ್ಣು ಗ್ರಾಹಕರ ನಾಲಿಗೆಯ ರುಚಿ ತಣಿಸುತ್ತಿವೆ. ನೈಸರ್ಗಿಕ ವಿಧಾನದಲ್ಲಿ ಹಣ್ಣಾಗಿರುವ ಮಾವಿನ ಹಣ್ಣನ್ನು ಗ್ರಾಹಕರಿಗೆ ತಲುಪಿಸುವ ನಿಟ್ಟಿನಲ್ಲಿ ತೋಟಗಾರಿಕಾ ಇಲಾಖೆ ಮೈಸೂರಲ್ಲಿ ಮೂರು ದಿನಗಳ ಮಾವಿನ ಮೇಳ ಆಯೋಜಿಸುತ್ತಿದೆ.

ಪ್ರತಿವರ್ಷವೂ ತೋಟಗಾರಿಕಾ ಇಲಾಖೆ ವತಿಯಿಂದ ಮೈಸೂರಲ್ಲಿ ಮಾವಿನ ಮೇಳ ಆಯೋಜಿಸುವ ಸಂಪ್ರದಾಯ ಹೊಂದಿದ್ದು, ನೋಂದಾಯಿತ ರೈತರು ನೈಸರ್ಗಿಕ ವಿಧಾನದ ಮೂಲಕ ಬೆಳೆದ ಮಾವಿನಹಣ್ಣುಗಳನ್ನು ನೇರವಾಗಿ ಗ್ರಾಹಕರ ಕೈ ತಲುಪಿಸುವ ವ್ಯವಸ್ಥೆ ಮಾಡುತ್ತಾ ಬಂದಿದೆ. ಕರ್ನಾಟಕ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಈ ಬಾರಿಯ ಮಾವಿನಮೇಳ ಒಂದು ವಾರ ವಿಳಂಬವಾಗಿ ನಡೆಸಲಾಗುತ್ತಿದ್ದು, ಮೇ 26, 27 ಮತ್ತು 28ರಂದು ಮೂರು ದಿನಗಳ ಕಾಲ ವಿವಿಧ ಬಗೆಯ ಮಾವಿನಹಣ್ಣುಗಳು ಒಂದೇ ಕಡೆ ಗ್ರಾಹಕರಿಗೆ ಲಭ್ಯವಾಗಲಿದೆ.

ಸಿದ್ಧತೆ ನಡೆಯುತ್ತಿದೆ

ಕುಪ್ಪಣ್ಣ ಪಾರ್ಕ್‌ನಲ್ಲಿ ಈ ಬಾರಿ ಮೂರು ದಿನಗಳ ಮಾವು ಮೇಳ ನಡೆಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಹಾಪ್‌ಕಾಮ್ಸ್ ಹಾಗೂ ತೋಟಗಾರಿಕಾ ಇಲಾಖೆಯಲ್ಲಿ ನೋಂದಾಯಿಸಿಕೊಂಡಿರುವ ರೈತರೊಂದಿಗೆ ಸಭೆ ನಡೆಸಲಾಗಿದೆ. ಮೇಳದಲ್ಲಿ ಪಾಲ್ಗೊಳ್ಳಲು 10 ರೈತರು ಮುಂದೆ ಬಂದಿದ್ದಾರೆ. ಇನ್ನಷ್ಟು ರೈತರು ತಾವು ಬೆಳೆದಿರುವ ಮಾವಿನ ಹಣ್ಣುಗಳನ್ನು ಮೇಳಕ್ಕೆ ತಂದು ಮಾರಾಟ ಮಾಡಲಿದ್ದಾರೆ. ರೈತರಿಂದ ನೇರವಾಗಿ ಗ್ರಾಹಕರ ಕೈ ಸೇರಬೇಕೆಂಬ ಸದುದ್ದೇಶದಿಂದ ಮೇಳ ಹಮ್ಮಿಕೊಳ್ಳಲಾಗಿದೆ. ಅಲ್ಲದೇ, ಗ್ರಾಹಕರ ಆರೋಗ್ಯ ಕಾಪಾಡುವುದರೊಂದಿಗೆ ಮಾವು ಬೆಳೆಯಲ್ಲಿ ನೈಸರ್ಗಿಕ ಪದ್ಧತಿ ಅನುಸರಿಸಲು ರೈತರನ್ನು ಉತ್ತೇಜಿಸುವ ನಿಟ್ಟಿನಲ್ಲಿ ಮಾವಿನ ಮೇಳದಲ್ಲಿ ನೈಸರ್ಗಿಕ ಪದ್ಧತಿಯಲ್ಲೇ ಮಾಗಿಸಿರುವ ಹಣ್ಣುಗಳ ಮಾರಾಟಕ್ಕೆ ಕ್ರಮ ಕೈಗೊಳ್ಳಲಾಗಿದೆ. 20 ಮಳಿಗೆಗಳಲ್ಲಿ ಮಾವಿನಹಣ್ಣುಗಳ ಮಾರಾಟ ನಡೆಯಲಿದ್ದು, ಮೇಳದ ಯಶಸ್ಸಿಗೆ ಕ್ರಮ ಕೈಗೊಳ್ಳಲಾಗುತ್ತದೆ.

- ಕೆ.ರುದ್ರೇಶ್, ಉಪ ನಿರ್ದೇಶಕ, ತೋಟಗಾರಿಕಾ ಇಲಾಖೆ

ಉತ್ತಮ ಗುಣಮಟ್ಟದ ಹಣ್ಣುಗಳನ್ನು ಗ್ರಾಹಕರಿಗೆ ತಲುಪಿಸಲು ಮಾವು ಮೇಳ ಆಯೋಜಿಸಲಾಗಿದೆ. 20 ಮಳಿಗೆಗಳಲ್ಲಿ ಮಾವಿನಹಣ್ಣು ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ. ರೈತರಿಗೆ ಆದ್ಯತೆ ನೀಡಲಾಗಿದ್ದು, ಮೈಸೂರು ಜಿಲ್ಲೆಯ 10 ಮಾವು ಬೆಳೆಗಾರರು ಮೇಳದಲ್ಲಿ ಪಾಲ್ಗೊಳ್ಳಲು ಬಯಸಿದ್ದು, ಇನ್ನಷ್ಟು ರೈತರು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಮೇಳದಲ್ಲಿ ರತ್ನಗಿರಿ, ಅಲ್ಫಾನ್ಸೋ, ಬಾದಾಮಿ, ಬೈಗಾನಪಲ್ಲಿ, ರಸಪುರಿ, ಮಲಗೋವಾ, ತೋತಾಪುರಿ, ಮಲ್ಲಿಕಾ, ಸೆಂದೂರ, ನೀಲಂ, ದಶೇರಿ ಸೇರಿದಂತೆ ವಿವಿಧ ತಳಿಯ ಮಾವಿನಹಣ್ಣುಗಳನ್ನು ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಮೇಳದಲ್ಲಿ ಮಾರಾಟಕ್ಕಿಡುವ ಮಾವಿನಹಣ್ಣುಗಳಲ್ಲಿ ರಾಸಾಯನಿಕ ವಸ್ತು ಬಳಸಿ ಹಣ್ಣು ಮಾಡಲಾಗಿದೆಯೇ ಎಂದು ಪರಿಶೀಲನೆ ನಡೆಸಲಾಗುತ್ತದೆ. ಮೇಳದಲ್ಲಿ ಬರುವ ಎಲ್ಲಾ ರೈತರಿಗೂ ಮೊದಲೇ ಎಚ್ಚರಿಕೆ ನೀಡಲಾಗಿದ್ದು, ನೈಸರ್ಗಿಕ ಪದ್ಧತಿಯಲ್ಲಿ ಬೆಳೆದ ಹಣ್ಣುಗಳನ್ನಷ್ಟೇ ತರುವಂತೆ ಸೂಚನೆ ನೀಡಲಾಗಿದೆ. ಅಲ್ಲದೇ, ರಾಸಾಯನಿಕ ವಸ್ತು ಬಳಸಿದ್ದರೆ ಅದನ್ನು ಪತ್ತೆ ಮಾಡಲು ಆಹಾರ ಸುರಕ್ಷತಾ ಇಲಾಖೆ ಅಧಿಕಾರಿಗಳಿಂದ ಪರಿಶೀಲಿಸಲು ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.

ಸಾಮಾನ್ಯವಾಗಿ ಕೆಲವರು ಕ್ಯಾಲ್ಸಿಯಂ ಕಾರ್ಬೈಡ್ ಬಳಸಿ ಮಾವಿನಹಣ್ಣುಗಳನ್ನು ಮಾಗಿಸುತ್ತಾರೆ ಎಂಬ ದೂರುಗಳು ಕೇಳಿ ಬಂದಿದ್ದು, ಇದರಿಂದ ಗ್ರಾಹಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಸಾಯನಿಕ ವಸ್ತು ಬಳಕೆ ಮಾಡಿದ ಹಣ್ಣುಗಳ ಮಾರಾಟ ನಿಷೇಧಿಸಲಾಗಿದೆ. ರಾಸಾಯನಿಕ ಬಳಸಿರುವ ಹಣ್ಣುಗಳು ಹ [illegible] ಆಕರ್ಷಕವಾಗಿ, ಗಾಢ ಬಣ್ಣದಿಂದ ಕೂಡಿರುತ್ತವೆ. ಮೇಲ್ನೋಟಕ್ಕೆ ಅವುಗಳನ್ನು ಗುರುತಿಸಬಹುದಾಗಿದೆ. ಸುಲಭವಾಗಿ ಪತ್ತೆ ಮಾಡಲು ಸಹಕಾರಿಯಾಗಲಿದೆ.

ಹಾಪ್‌ಕಾಮ್ಸ್, ಎಪಿಎಂಸಿಯಲ್ಲಿರುವ ಬೆಲೆಗೆ ಅನುಗುಣವಾಗಿ ಮಾವಿನ ಮೇಳದಲ್ಲಿ ಮಾರಾಟ ಮಾಡುವ ಹಣ್ಣು ಬೆಲೆ ನಿಗದಿ ಮಾಡಲಾಗುತ್ತದೆ. ಪ್ರತಿದಿನ ಮಾವಿನಹಣ್ಣಿನ ಬೆಲೆ ನಿಗದಿ ಮಾಡಿ, ಮಳಿಗೆ ಮುಂದೆ ಹಣ್ಣುಗಳ ಬೆಲೆ ಫಲಕ ಹಾಕುವಂತೆ ಸೂಚನೆ ನೀಡಲು ನಿರ್ಧರಿಸಲಾಗಿದೆ.

ಸಸ್ಯ ಮೇಳ: ಮಾವು ಮೇಳದಲ್ಲೇ ವಿವಿಧ ಸಸ್ಯಗಳ ಮಾರಾಟಕ್ಕೂ ವ್ಯವಸ್ಥೆ ಕಲ್ಪಿಸಲಾಗಿದೆ. ತೋಟಗಾರಿಕಾ ಇಲಾಖೆಯ ನರ್ಸರಿಯಲ್ಲಿರುವ ವಿವಿಧ ಹಣ್ಣು ಹಾಗೂ ಅಲಂಕಾರಿಕಾ ಗಿಡಗಳನ್ನು ಮಾರಾಟ ಮಾಡಲಾಗುತ್ತದೆ. ತೆಂಗಿನ ಗಿಡ, ಮಾವು, ಹಲಸು, ಸೀಬೆ, ನೇರಳೆ, ಜಂಬುನೇರಳೆ, ನುಗ್ಗೆ ಸೇರಿದಂತೆ ವಿವಿಧ ಗಿಡಗಳನ್ನು ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಸ್ಥಳೀಯ, ಲೋಕಸಭಾ ಚುನಾವಣೆಗೆ ಪಕ್ಷ ಸಂಘಟನೆ

ಮತದಾರರ ತೀರ್ಪಿಗೆ ತಲೆಬಾಗುವೆ: ಡಾ.ಎಂ.ರೇವಣ್ಣ

ತಿ.ನರಸೀಪುರ, ಮೇ 15– ಕ್ಷೇತ್ರದಲ್ಲಿ ಬಿಜೆಪಿ ಸೋಲಿಗೆ ಹತಾಶರಾಗದೇ ಮುಂಬರುವ ಲೋಕಸಭಾ ಚುನಾವಣೆಗೆ ತಳಮಟ್ಟದಿಂದ ಪಕ್ಷವನ್ನು ಸಂಘಟಿಸಬೇಕಿದೆ ಎಂದು ತಿ.ನರಸೀಪುರ ಮೀಸಲು ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಡಾ.ಎಂ.ರೇವಣ್ಣ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆಯಲ್ಲಿ ಸೋಲು–ಗೆಲುವು ಸಹಜ. ಕ್ಷೇತ್ರದ ಮತದಾರರು ನೀಡಿರುವ ತೀರ್ಪಿಗೆ ತಲೆ ಬಾಗುತ್ತೇನೆ. ಚುನಾವಣೆ ವೇಳೆ ನನ್ನ ಬೆಂಬಲಕ್ಕೆ ನಿಂತ ಪಕ್ಷದ ಕಾರ್ಯಕರ್ತರು, ಹಿರಿಯ ಮುಖಂಡರು, ಪದಾಧಿಕಾರಿಗಳು ಹಾಗೂ ನಮಗೆ ಮತ ನೀಡಿದ ಎಲ್ಲಾ ಮತದಾರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಹಾಗೆಯೇ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸರ್ಕಾರದಲ್ಲಿ ಉನ್ನತ ಅಧಿಕಾರ ಸಿಗುವಂತಾಗಲಿ, ಆ ಮೂಲಕ ಕ್ಷೇತ್ರ ಮತ್ತು ರಾಜ್ಯದ ಹೆಚ್ಚಿನ ಅಭಿವೃದ್ಧಿಗೆ ಶ್ರಮಿಸಲಿ ಎಂದು ರೇವಣ್ಣ ಶುಭ ಕೋರಿದರು.

ಜನಸೇವೆಗಾಗಿ ವೈದ್ಯ ವೃತ್ತಿಗೆ ರಾಜೀನಾಮೆ ನೀಡಿದೆ!: ಜನಸೇವೆ ಮಾಡುವ ಕನಸನ್ನೊತ್ತು ವೈದ್ಯ ವೃತ್ತಿಗೆ ರಾಜೀನಾಮೆ ನೀಡಿ ಬಂದೆ. ಚುನಾವಣೆ ವೇಳೆ ಕ್ಷೇತ್ರದಾದ್ಯಂತ



ಎಲ್ಲಾ ಹೋಬಳಿ ಜನರು ತೋರಿದ ಅಭಿಮಾನಕ್ಕೆ ಋಣಿಯಾಗಿದ್ದೇನೆ. ಸೋತ ಮಾತ್ರಕ್ಕೆ ಕ್ಷೇತ್ರ ಬಿಡುವಂತಹ ವ್ಯಕ್ತಿ ನಾನಲ್ಲ. ನಾನಿಲ್ಲಿ ಬಂದಿರುವುದು ಜನಸೇವೆ ಮಾಡಲೆಂದು, ಇನ್ನು ಮುಂದೆಯೂ ತಾಲೂಕಿನಲ್ಲಿ ಆರೋಗ್ಯ ಸೇವೆ ಮುಂದುವರೆಸಲು ತೀರ್ಮಾನಿಸಿದ್ದೇನೆ. ಖಾಸಗೀ ಕ್ಲಿನಿಕ್ ತೆರೆದು ಚುನಾವಣಾ ಪೂರ್ವದಲ್ಲಿ ಜನತೆಗೆ ಕೊಟ್ಟ ಮಾತನ್ನು ತಪ್ಪದೇ ಪಂಚಾಯ್ತಿ ಮಟ್ಟದಲ್ಲಿ 2 ತಿಂಗಳಿಗೊಮ್ಮೆ ಉಚಿತ ಆರೋಗ್ಯ ಶಿಬಿರಗಳನ್ನು ನಡೆಸುತ್ತೇನೆ ಎಂದರು.

ಕಟ್ಟ ಕಡೆ ವ್ಯಕ್ತಿಗೂ ಯೋಜನೆ ತಲುಪಬೇಕು: ಸಂವಿಧಾನದಡಿ ಸರ್ಕಾರದಿಂದ ದೊರಕುವ ಸವಲತ್ತುಗಳು ಕಟ್ಟ ಕಡೆ ವ್ಯಕ್ತಿಗೂ ದೊರಕುವಂತಾಗಬೇಕು. ಈ ಸಂಬಂಧ ನೂತನ ಜನಪ್ರತಿನಿಧಿಗಳಿಗೆ ನಾನೂ ಸಹ ಮನವಿ ಮಾಡುತ್ತೇನೆ ಎಂದರು.

ನ್ಯೂನತೆಗಳನ್ನು ಸರಿಪಡಿಸೋಣ: ಕ್ಷೇತ್ರದಲ್ಲಿ ನಮಗೆ ಸೋಲಾಗಿರುವುದಕ್ಕೆ ಆತ್ಮವಿಮರ್ಶೆ ಮಾಡಿಕೊಂಡು ಆಗಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಮುಂಬರುವ ಸ್ಥಳೀಯ ಸಂಸ್ಥೆ ಹಾಗೂ ಲೋಕಸಭಾ ಚುನಾವಣೆಗೆ ಕ್ಷೇತ್ರವನ್ನು ಸದೃಢಗೊಳಿಸುವ ಕೆಲಸ ಮಾಡೋಣ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಅಧ್ಯಕ್ಷ ಸಿದ್ದೇಗೌಡ, ದಯಾನಂದ ಪಟೇಲ್, ಮೂಗೂರು ಶಕ್ತಿ ಕೇಂದ್ರದ ಅಧ್ಯಕ್ಷ ಅರವಿಂದ್, ಕರೋಹಟ್ಟಿ ಬಸವರಾಜು, ಮೂಗೂರು ಕುಮಾರ್, ಕೊತ್ತೇಗಾಲ ಕಿಟ್ಟಿ, ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಮರಡೀಪುರ ನಾಗರಾಜು, ಆಡಿಟರ್ ಮಂಜು, ನಿಲಸೋಗೆ ಬಸವರಾಜು ಇತರರಿದ್ದರು.

ಕಡಿಮೆ ಅವಧಿಯಲ್ಲಿ ಹೆಚ್ಚು ಮತ

ಚುನಾವಣೆಗೆ ಸಿಕ್ಕ ಕಡಿಮೆ ಅವಧಿಯಲ್ಲಿ 21 ಸಾವಿರಕ್ಕೂ ಹೆಚ್ಚಿನ ಮತ ಗಳಿಸಿದ್ದೇವೆ. ಪಕ್ಷದ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಿ ಉತ್ತಮ ಸಾಧನೆ ತೋರಿದ್ದಾರೆ. ಹಾಗಾಗಿ ಮುಂದಿನ ಚುನಾವಣೆಗೆ ನಾವು ಈಗಿನಿಂದಲೇ ಪಕ್ಷವನ್ನು ಬಲಪಡಿಸಬೇಕಾದ ಅನಿವಾರ್ಯತೆ ಇದೆ. ನಮ್ಮ ಕ್ಷೇತ್ರಾಧ್ಯಕ್ಷ ಸ್ಥಾನದ ಅವಧಿ ಮುಗಿಯುತ್ತಾ ಬಂದಿದ್ದು, ಹೊಸ ತಾಲೂಕು ಅಧ್ಯಕ್ಷರ ಆಯ್ಕೆ ನಡೆಯಬೇಕಿದೆ. ಡಾ.ರೇವಣ್ಣ ಸೇರಿದಂತೆ ಪಕ್ಷದ ಮುಂಚೂಣಿ ಘಟಕದ ನಾಯಕರು ಉತ್ತಮ ಕೆಲಸ ಮಾಡಲಿದ್ದಾರೆ. ಹಾಗೆಯೇ ಆಯ್ಕೆಯಾಗಿರುವ ಶಾಸಕ ಮಹದೇವಪ್ಪ ಕ್ಷೇತ್ರದಲ್ಲಿ ಉಳಿದಿರುವ ಅಭಿವೃದ್ಧಿ ಕಾರ್ಯಗಳ ಕಡೆಗೆ ತಮ್ಮ ಚಿತ್ತ ಹರಿಸಿ ಮೊದಲು ಹದಗೆಟ್ಟ ರಸ್ತೆಗಳಿಗೆ ಮುಕ್ತಿ ಕಾಣಿಸಲಿ.

–ಕೆ.ಸಿ.ಲೋಕೇಶ್ ನಾಯಕ್, ಕ್ಷೇತ್ರಾಧ್ಯಕ್ಷ.

ಡಿಕೆಶಿ ಮುಖ್ಯಮಂತ್ರಿ ಮಾಡಲು ಒತ್ತಾಯ



ಭೇರ್ಯ, ಮೇ 15– ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ರಾಜ್ಯದ ನೂತನ ಮುಖ್ಯಮಂತ್ರಿ ಮಾಡುವಂತೆ ಕೆ.ಆರ್.ನಗರ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ವಿರ್ಲೆ ಅಣ್ಣೇಗೌಡ ಕಾಂಗ್ರೆಸ್ ಹೈಕಮಾಂಡ್ ಅನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪಕ್ಷದ ಸಿದ್ಧಾಂತದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ನೀಡಬೇಕು. ಈ ಹಿಂದಿನಿಂದಲೂ ಯಾರು ಪಕ್ಷದ ಅಧ್ಯಕ್ಷರಾಗಿರುತ್ತಾರೋ ಅವರೇ ರಾಜ್ಯದ ಮುಖ್ಯಮಂತ್ರಿಯಾಗಿರುವುದು. ಈ ಹಿಂದೆ ವಿರೇಂದ್ರ ಪಾಟೀಲ್, ಎಸ್.ಎಂ.ಕೃಷ್ಣ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಅಧ್ಯಕ್ಷರಾಗಿ ಮುಖ್ಯಮಂತ್ರಿಯಾದ ಉದಾಹರಣೆ ಇದೆ ಎಂದರು.

ಈ ಬಾರಿ ರಾಜ್ಯದ ಒಕ್ಕಲಿಗ ಸಮುದಾಯ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದಾರೆ. ರಾಜ್ಯದಲ್ಲಿ ಪಕ್ಷಕ್ಕೆ ಸ್ಪಷ್ಟ ಬಹುಮತ ಬರಲು ಡಿ.ಕೆ.ಶಿವಕುಮಾರ್ ಕಾರಣರಾಗಿದ್ದಾರೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಕಾಂಗ್ರೆಸ್ ಹೈಕಮಾಂಡ್ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಒತ್ತಾಯಿಸಿದರು.

ಸೋಲಿನಿಂದ ಧೃತಿಗೆಟ್ಟಿಲ್ಲ: ಅಶ್ವಿನ್ ಕುಮಾರ್

ತಿ.ನರಸೀಪುರ, ಮೇ 15– ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಕೊಟ್ಟ ತೀರ್ಪಿಗೆ ತಲೆ ಬಾಗಲೇಬೇಕು. ಆದರೆ ಸೋಲಿನಿಂದ ಧೃತಿಗೆಟ್ಟಿಲ್ಲ ಎಂದು ಕ್ಷೇತ್ರದ ಪರಾಜಿತ ಜೆಡಿಎಸ್ ಅಭ್ಯರ್ಥಿ ಅಶ್ವಿನ್ ಕುಮಾರ್ ತಿಳಿಸಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ನಡೆದ ಚುನಾವಣಾ ಸಂಬಂಧ ಚರ್ಚೆ ಹಾಗೂ ಆತ್ಮಾವಲೋಕನ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಬಾರಿ ಜನರು ನನಗೆ ಆಶೀರ್ವದಿಸಿದ್ದರು. ಈ ಬಾರಿ ಜನರು ನನ್ನ ವಿರುದ್ಧ ಜನಾದೇಶ ನೀಡಿದ್ದಾರೆ. ನನಗೆ ನೀಡಿದ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಈ ಬಾರಿ



ಗೆಲುವಿನ ವಾತಾವರಣವಿತ್ತು. ಆದರೂ ಚುನಾವಣೆಯಲ್ಲಿ ಸೋತಿದ್ದೇವೆ. ಸೋಲಿಗೆ ಕಾರಣ ಹುಡುಕುವ ಮೂಲಕ ಮುಂದಿನ ದಿನಗಳಲ್ಲಿ ಪಕ್ಷ ಸಂಘಟಿಸಿ ಕ್ಷೇತ್ರದ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತೇನೆ ಎಂದರು. ಈ ವೇಳೆ ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಕು.ಶಿ.ಭೃಂಗೀಶ್, ಗುರುಪ್ರಸಾದ್, ದೊಡ್ಡೇಬಾಗಿಲು ಮಹದೇವಯ್ಯ, ಕನ್ನಳ್ಳಿಮೋಳೆ ಚಿಕ್ಕಸ್ವಾಮಿ, ರಾಜೇಶ್, ಮೂಗೂರು ಶಿವಮೂರ್ತಿ, ಮಹೇಶ್ ಮತ್ತಿತರರಿದ್ದರು.

ಹೆಚ್‌ಸಿಎಂ ಗೆಲುವು ಕ್ಷೇತ್ರದ ಜನರ ಗೆಲುವು



ಬನ್ನೂರು, ಮೇ 15– ಡಾ.ಹೆಚ್.ಸಿ.ಮಹದೇವಪ್ಪನವರ ಗೆಲುವು ಕ್ಷೇತ್ರದ ಜನರ ಗೆಲುವು. ಕ್ಷೇತ್ರದಲ್ಲಿ ಅವರು ಮಾಡಿರುವ ಅಭಿವೃದ್ಧಿ ಕಾರ್ಯಗಳಿಗೆ ಜನರು ಮನ್ನಣೆ ನೀಡಿ ಮತ್ತೊಮ್ಮೆ ಅವರನ್ನು ಶಾಸಕರನ್ನಾಗಿ ಆಯ್ಕೆ ಮಾಡಿದ್ದಾರೆ ಎಂದು ಮಲಿಯೂರು ಗ್ರಾಪಂ ಮಾಜಿ ಅಧ್ಯಕ್ಷ ಜಯರಾಮೇಗೌಡ ತಿಳಿಸಿದರು.

ಪಟ್ಟಣ ಸಮೀಪದ ಬೆಟ್ಟಳ್ಳಿ ಗ್ರಾಮದಲ್ಲಿ ಚುನಾವಣೆಯಲ್ಲಿ ತಿ.ನರಸೀಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ.ಮಹದೇವಪ್ಪ ಜಯಗಳಿಸಿದ ಹಿನ್ನೆಲೆಯಲ್ಲಿ ವಿಜಯೋತ್ಸವ ಆಚರಿಸಿ ಮಾತನಾಡಿದ ಅವರು, ಇದೊಂದು ಅಭೂತಪೂರ್ವ ಗೆಲುವಾಗಿದೆ. ಕ್ಷೇತ್ರದ ಜನತೆ ಕಾಂಗ್ರೆಸ್ ಬೆಂಬಲಿಸಿ ಮಹದೇವಪ್ಪನವರಿಗೆ ಗೆಲುವು ತಂದುಕೊಟ್ಟಿದ್ದಾರೆ ಎಂದರು.

ಇದೇ ವೇಳೆ ಮುಖಂಡರಾದ ಉಮೇಶ್, ಲಿಂಗರಾಜು, ಶಿವರಾಮು, ಕೆಂಚಪ್ಪ ಯಲ್ಲಪ್ಪ, ಪುಟ್ಟಸ್ವಾಮಿ, ಕೃಷ್ಣೇಗೌಡ, ಚಿಂಟು, ಶಶಾಂಕ್, ಅನಿಲ್, ಪ್ರಕಾಶ್, ಕೇಶವ, ನಾರಾಯಣಸ್ವಾಮಿ, ಕೇಶವಮೂರ್ತಿ, ವೆಂಕಟೇಶ, ಸಿದ್ದಯ್ಯ, ವಡ್ಡಲಯ್ಯ, ರಾಜು, ಕೆಂಪಣ್ಣ, ಚಲುವೇಗೌಡ, ರಂಗಸ್ವಾಮಿ, ಸುಪ್ರೀತ ಸೇರಿದಂತೆ ಇತರರಿದ್ದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಲೆಂದು ವಿಶೇಷ ಪೂಜೆ

ಸುತ್ತೂರು, ಮೇ 15– ಸಿದ್ದರಾಮಯ್ಯನವರು 2ನೇ ಬಾರಿಗೆ ಮುಖ್ಯಮಂತ್ರಿಯಾಗಲೆಂದು ವರುಣ ಕ್ಷೇತ್ರ ವ್ಯಾಪ್ತಿಯ ಕೀಳನಪುರ ಗ್ರಾಮ ಸಮೀಪದ ಕಾಡುಬೆಟ್ಟದಲ್ಲಿರುವ ಸ್ವಯಂ ಉದ್ಭವ ಶ್ರೀ ಮಹದೇಶ್ವರ ದೇವಾಲಯದಲ್ಲಿ ಶ್ರೀ ಮಲೆ ಮಹದೇಶ್ವರ ಸೇವಾ ಸಮಿತಿ, ವರುಣ ಕ್ಷೇತ್ರದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಶ್ರೀ ಮಲೆ ಮಹದೇಶ್ವರ ಸೇವಾ ಸಮಿತಿ ಧರ್ಮದರ್ಶಿ ಮಂಡಳಿ ಮಾಜಿ ಸದಸ್ಯ ಮಹದೇವಪ್ಪ, ಸಿದ್ದರಾಮಯ್ಯನವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಮಾಡಿದ ಅಭಿವೃದ್ಧಿ ಕೆಲಸಗಳನ್ನು ನೋಡಿ ಮತದಾರರು ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಿದ್ದಾರೆ. ಆದ್ದರಿಂದ ಈ ಬಾರಿಯೂ ರಾಜ್ಯದ ಅಭಿವೃದ್ಧಿಗೆ ಶ್ರಮಿಸಲು ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಬೇಕೆಂದು ಅಭಿಪ್ರಾಯಪಟ್ಟರು. ಈ ವೇಳೆ ಕೀಳನಪುರ, ವರಕೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಮುಖಂಡರು, ಕಾರ್ಯಕರ್ತರು, ವರಕೋಡು ಶಿವಣ್ಣ, ಮಹೇಶ್, ಬೋರೇಗೌಡ, ಮಂಜುನಾಥ್, ಬೋರಪ್ಪ, ಕೀಳನಪುರ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆ ಮಣಿ ಮಹದೇವಪ್ಪ, ಮೇಗಳಾಪುರ ಮಹೇಶ್, ನಾಗರಾಜು, ಗ್ರಾಮಸ್ಥರು ಹಾಜರಿದ್ದರು.



ವಿವೇಕಾನಂದ ಪ್ರೌಢಶಾಲೆಗೆ ಶೇ.100ರಷ್ಟು ಫಲಿತಾಂಶ

ಬನ್ನೂರು, ಮೇ 15– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇಲ್ಲಿನ ವಿವೇಕಾನಂದ ಪ್ರೌಢಶಾಲೆಗೆ ಶೇ.100ರಷ್ಟು ಫಲಿತಾಂಶ ಬಂದಿದೆ.

ಪರೀಕ್ಷೆಗೆ ಹಾಜರಾಗಿದ್ದ 254 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಪೈಕಿ 10 ಮಂದಿ 600ಕ್ಕೂ ಹೆಚ್ಚು ಅಂಕ ಪಡೆದಿದ್ದು, 37 ಮಂದಿ 560ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. ಕನ್ನಡ ವಿಷಯದಲ್ಲಿ 11 ವಿದ್ಯಾರ್ಥಿಗಳು 125ಕ್ಕೆ 125, ಹಿಂದಿಯಲ್ಲಿ ಐವರು, ಗಣಿತ, ವಿಜ್ಞಾನದಲ್ಲಿ ತಲಾ ಓರ್ವ, ಸಮಾಜ ವಿಜ್ಞಾನದಲ್ಲಿ ಇಬ್ಬರು ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದಿದ್ದಾರೆ. ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ ಅಭಿನಂದಿಸಿದೆ.

ಸೂಡಾನ್‌ನಿಂದ ಮರಳಿರುವವರಿಗೆ 5 ಲಕ್ಷ ನೆರವಿಗೆ ದಸಂಸ ಮನವಿ



ಹುಣಸೂರು, ಮೇ 15– ಜೀವನ ನಿರ್ವಹಣೆಗಾಗಿ ದೂರದ ಸೂಡಾನ್‌ಗೆ ಹೋಗಿ ಸಂಕಷ್ಟಕ್ಕೆ ಸಿಲುಕಿ, ಸರ್ಕಾರದ ನೆರವಿನಿಂದ ವಾಪಸ್ಸಾಗಿರುವ ಹಕ್ಕಿಪಿಕ್ಕಿ ಸಮುದಾಯಕ್ಕೆ ನೆರವಾಗಬೇಕೆಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ನಿಂಗರಾಜ ಮಲ್ಲಾಡಿ ಆಗ್ರಹಿಸಿದರು.

ಸೂಡಾನ್‌ನಲ್ಲಿ ಆಂತರಿಕ ಯುದ್ಧದಿಂದ ನರಕಯಾತನೆ ಅನುಭವಿಸಿ ಪ್ರಾಣ ಉಳಿಸಿಕೊಂಡು ಪಕ್ಷಿರಾಜಪುರಕ್ಕೆ ವಾಪಸ್ಸಾಗಿರುವವರನ್ನು ಭೇಟಿ ಮಾಡಿದ ದಸಂಸ ಮುಖಂಡ ನಿಂಗರಾಜ ಮಲ್ಲಾಡಿ ನೇತೃತ್ವದ ತಂಡ ಅಲೆಮಾರಿ ಹಕ್ಕಿಪಿಕ್ಕಿ ಸಮುದಾಯದ 15 ಕುಟುಂಬಗಳಿಗೆ ಧೈರ್ಯ ಹೇಳಿ, ವ್ಯಾಪಾರಕ್ಕಾಗಿ ತೆಗೆದುಕೊಂಡು ಹೋಗಿದ್ದ ಲಕ್ಷಾಂತರ ರೂ. ಬೆಲೆ ಬಾಳುವ ಔಷಧಿಯನ್ನು ಅಲ್ಲೆ ಬಿಟ್ಟು ಬಂದಿರುವ ಈ ಕುಟುಂಬಗಳು ತುಂಬಾ ಸಂಕಷ್ಟದಲ್ಲಿದ್ದು, ಈ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಪರಿಹಾರವನ್ನು ಸರ್ಕಾರದಿಂದ ಕೊಡಿಸಲು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು ಮುಂದಾಗಬೇಕು ಎಂದು ಮನವಿ ಮಾಡಿದರು.

ವಾಪಸ್ಸಾಗಿರುವ ಮಹಿಳೆಯರು ಅಲ್ಲಿನ ಪರಿಸ್ಥಿತಿ, ತಾವು ಅನುಭವಿಸಿದ ಯಾತನೆಯನ್ನು ಮುಖಂಡರಿಗೆ ಮನವರಿಕೆ ಮಾಡಿಕೊಟ್ಟು, ಮಾಧ್ಯಮಗಳು ನಾವು ಮಾಡಿಕೊಂಡ ಮನವಿಯನ್ನು ಸರ್ಕಾರ ಮತ್ತು ಜಿಲ್ಲಾಡಳಿತಕ್ಕೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದರಿಂದಾಗಿ ನಾವು ಪ್ರಾಣ ಉಳಿಸಿಕೊಂಡು ಸ್ವಗ್ರಾಮಕ್ಕೆ ಮರಳಿದ್ದೇವೆ ಎಂದು ತಿಳಿಸಿದರು.

ನಮ್ಮ ದೇಶದಲ್ಲೇ ನಾವು ಮಾರಾಟ ಮಾಡುವ ಗಿಡಮೂಲಿಕೆ ಔಷಧಗಳಿಗೆ ಬ್ರಾಂಡ್ ಸಿಕ್ಕರೆ ಇಲ್ಲೇ ಮಾರಾಟ ಮಾಡಿ ಬದುಕು ಕಟ್ಟಿಕೊಳ್ಳಲು ಸಿದ್ಧರಿದ್ದು, ಅಲೆಮಾರಿ ಸಮುದಾಯಕ್ಕೆ ಮೀಸಲಿರುವ ಅನುದಾನ ಕೊಡಿಸುವ ಬಗ್ಗೆ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆತಂದು ನೆರವಾಗುವಂತೆ ಮನವಿ ಮಾಡಿದರು.

ಈ ವೇಳೆ ದಲಿತ ಸಂಘರ್ಷ ಸಮಿತಿ ಮುಖಂಡರಾದ ದೇವೇಂದ್ರ, ಕೆಂಪರಾಜು, ಕಟ್ಟೆಮಳಲವಾಡಿ ನಸ್ರುಲ್ಲಾ ಖಾನ್ ಸೇರಿದಂತೆ ಅನೇಕ ದಲಿತ ಸಂಘರ್ಷ ಸಮಿತಿ ಸದಸ್ಯರು ಹಾಜರಿದ್ದರು.

ವೆಂಕಟೇಶ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ



ಬೆಟ್ಟದಪುರ, ಮೇ 15– ಪಿರಿಯಾಪಟ್ಟಣ ಕ್ಷೇತ್ರದ ನೂತನ ಶಾಸಕ ಕೆ.ವೆಂಕಟೇಶ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಮುಖಂಡ, ನಿವೃತ್ತ ಸಹಾಯಕ ಅಭಿಯಂತರ ಕೆ.ಕೆ.ತಿಮ್ಮಪ್ಪ ಮಾತನಾಡಿ, ಈ ಹಿಂದೆ ಶಾಸಕ ಕೆ.ವೆಂಕಟೇಶ್ ತಾಲೂಕಿಗೆ ಹಲವು ಶಾಶ್ವತ ಯೋಜನೆಗಳನ್ನು ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದರು. ಈ ಬಾರಿ ಅವರು 19 ಸಾವಿರಕ್ಕೂ ಹೆಚ್ಚು ಮತ ಪಡೆದು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಅಲ್ಲದೆ ಪಿರಿಯಾಪಟ್ಟಣ ತಾಲೂಕು ಹಾಸನ, ಕೊಡಗು ಜಿಲ್ಲೆಯ ಗಡಿಭಾಗವಾಗಿದ್ದು, ತಾಲೂಕಿನ ಮತ್ತಷ್ಟು ಅಭಿವೃದ್ಧಿಗಾಗಿ ಕೆ.ವೆಂಕಟೇಶ್ ಅವರಿಗೆ ಕಾಂಗ್ರೆಸ್ ಪಕ್ಷ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಕೃಷ್ಣೇಗೌಡ, ಪುಟ್ಟರಾಜು, ಕೆ.ನಾಗರಾಜು, ಕೆ.ಕೆ.ಕೃಷ್ಣೇಗೌಡ, ಮಾಜಿ ಎಪಿಎಂಸಿ ಅಧ್ಯಕ್ಷ ಜಯಚಂದ್ರ, ದರ್ಶಿನಿ ಮಹೇಶ್, ಗಣೇಶ್, ಬೆಟ್ಟದಪುರ ಗುತ್ತಿಗೆದಾರ ಲೋಕೇಶ್ ಸೇರಿದಂತೆ ಇನ್ನಿತರರಿದ್ದರು.

ಕೆ.ಆರ್.ನಗರ, ಸಾಲಿಗ್ರಾಮ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ

ನೂತನ ಶಾಸಕ ಡಿ.ರವಿಶಂಕರ್ ಭರವಸೆ



ಕೆ.ಆರ್.ನಗರ, ಮೇ 15– ಕ್ಷೇತ್ರದ ಮತದಾರರು ಮೆಚ್ಚುವಂತೆ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಕ್ಷೇತ್ರದ ನೂತನ ಶಾಸಕ ಡಿ.ರವಿಶಂಕರ್ ಭರವಸೆ ನೀಡಿದರು.

ಪಟ್ಟಣದ ಕನಕ ಗುರುಪೀಠಕ್ಕೆ ಭೇಟಿ ನೀಡಿ, ಶ್ರೀ ಶಿವಾನಂದಪುರಿ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದು, ಬಳಿಕ ಮಾಜಿ ಸಚಿವ ದಿ.ಎಸ್.ನಂಜಪ್ಪ ಸೇರಿದಂತೆ ಹಲವು ಮುಖಂಡರ ಮನೆಗೆ ಭೇಟಿ ನೀಡಿ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಅವರು, ಈ ಬಾರಿ ಕ್ಷೇತ್ರದ ಜನತೆ ಕಾಂಗ್ರೆಸ್ ಪಕ್ಷಕ್ಕೆ ನಿರೀಕ್ಷೆಗೂ ಮೀರಿ ಬೆಂಬಲ ನೀಡಿ, ನನಗೆ ಆಶೀರ್ವಾದ ಮಾಡಿದ್ದಾರೆ. ಆದ್ದರಿಂದ ಸರ್ವ ಜನಾಂಗದ ಅಭಿವೃದ್ಧಿಗಾಗಿ ದುಡಿಯುತ್ತೇನೆ. ಎರಡೂ ತಾಲೂಕುಗಳಲ್ಲಿ ಆಗಬೇಕಾದ ಕೆಲಸಗಳ ಬಗ್ಗೆ ಶೀಘ್ರ ಅಧಿಕಾರಿಗಳ ಸಭೆ ಕರೆದು ಮಾಹಿತಿ ಪಡೆಯುತ್ತೇನೆ ಎಂದರು.

ಸರ್ಕಾರದ ಸವಲತ್ತುಗಳನ್ನು ಫಲಾನುಭವಿಗಳ ಮನೆ ಬಾಗಿಲಿಗೆ ತಲುಪಿಸುವ ಕೆಲಸ ಮಾಡುವ ಜೊತೆಗೆ ಸರ್ಕಾರದಿಂದ ಹೆಚ್ಚು ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿ ಪಡಿಸುತ್ತೇನೆ. ಕೆ.ಆರ್.ನಗರ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಮತ್ತು ಸಾಲಿಗ್ರಾಮ ಗ್ರಾಪಂ ಅನ್ನು ಪಪಂ ಆಗಿ ಮಾಡಲು ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಚುನಾವಣೆಯಲ್ಲಿ ನನ್ನ ಗೆಲುವಿಗಾಗಿ ದುಡಿದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸೇರಿದಂತೆ ನನಗೆ ಮತ ನೀಡಿ ನನ್ನ ಗೆಲುವಿಗೆ ಕಾರಣರಾದ ಕ್ಷೇತ್ರದ ಸಮಸ್ತ ಜನತೆಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದ ಡಿ.ರವಿಶಂಕರ್ ಬಳಿಕ ಪಟ್ಟಣದ ಹೋಟೆಲ್‌ಗಳಿಗೆ ತೆರಳಿ ಜನತೆಗೆ ಕೃತಜ್ಞತೆ ತಿಳಿಸಿದರು.

ಇದೇ ವೇಳೆ ಜಿಪಂ ಮಾಜಿ ಅಧ್ಯಕ್ಷ ಸಿದ್ದಪ್ಪ, ತಾಪಂ ಮಾಜಿ ಅಧ್ಯಕ್ಷ ಚಂದ್ರಶೇಖರ್, ಪುರಸಭೆ ಮಾಜಿ ಸದಸ್ಯ ಕೆ.ಎಲ್.ಕುಮಾರ್, ಕೆ.ವಿನಯ್, ಮುಖಂಡರಾದ ಕೃಷ್ಣಭಟ್, ವೇಣುಗೋಪಾಲ್, ಕೆ.ಪಿ.ಜಗದೀಶ್, ಅಶ್ರಫ್, ಭೀಮ್‌ರಾವ್‌ಸಾಠೇ, ಜಾವಿದ್‌ಪಾಷ, ಲೋಕೇಶ್, ಪಿ.ಮಹದೇವ್, ಬಸವರಾಜು, ಶಿವಣ್ಣ, ಪುಟ್ಟರಾಜು, ಕಿರಣ್, ಮಠದ ವ್ಯವಸ್ಥಾಪಕ ಕೃಷ್ಣಮೂರ್ತಿ ಮತ್ತಿತರರಿದ್ದರು.


ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿದರೆ ಶೈಕ್ಷಣಿಕ ಪ್ರಗತಿ ಸಾಧ್ಯ



ಹೆಚ್.ಡಿ.ಕೋಟೆ, ಮೇ 15– ಸರ್ಕಾರಿ ಶಾಲೆಗಳಲ್ಲಿ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿದರೆ ಬಡತನದಲ್ಲೂ ಶೈಕ್ಷಣಿಕ ಪ್ರಗತಿ ಕಾಣಬಹುದು ಎಂದು ಸಮಾಜ ಸೇವಕರೂ ಆದ ಸುಭಾಷ್ ವಿದ್ಯುತ್ ಘಟಕದ ಸೀನಿಯರ್ ಮ್ಯಾನೇಜರ್ ಸೇಂದಿಲ್ ಕುಮಾರ್ ತಿಳಿಸಿದರು.

ಪಟ್ಟಣದಲ್ಲಿ 'ಮೈಸೂರು ಮಿತ್ರ' ಸೇರಿದಂತೆ ಇನ್ನಿತರ ಪತ್ರಿಕೆಗಳನ್ನು ಮನೆ ಮನೆಗೆ ವಿತರಿಸುತ್ತಿದ್ದ ಸಂತು, ಗೌತಮ್, ಜೀವನ್, ತೇಜಸ್, ವಿನಯ್ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಅಭಿನಂದಿಸಿ ಅವರು ಮಾತನಾಡಿದರು. ನಾನು ಸಹ ಬಡತನದಲ್ಲೇ ಬೆಳೆದಿದ್ದು, ಕಷ್ಟಪಟ್ಟು ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ಉನ್ನತ ಸ್ಥಾನಕ್ಕೆ ಬಂದಿದ್ದೇನೆ. ಬಡತನದಲ್ಲಿರುವ ವಿದ್ಯಾರ್ಥಿಗಳ ಕಷ್ಟ ಸುಖ ಏನೆಂದು ತಿಳಿದಿದ್ದು, ಇಂತಹ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ನೀಡುವುದು ನಮ್ಮ ಆದ್ಯ ಕರ್ತವ್ಯ ಎಂದರು. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸಾಕಷ್ಟು ಕೆಲಸ ಮಾಡಲಾಗುತ್ತಿದ್ದು, ಹಿಂದುಳಿದ ತಾಲೂಕನ್ನು ಶೈಕ್ಷಣಿಕವಾಗಿ ಮುಂದೆ ತರುವ ಕೆಲಸ ಮತ್ತಷ್ಟು ಸಕ್ರಿಯವಾಗಬೇಕಿದೆ ಎಂದರು.

ಮನೆ ಮನೆಗೆ ಪತ್ರಿಕೆ ವಿತರಿಸುವ ಮೂಲಕ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗುವುದು ಹೆಮ್ಮೆಯ ವಿಚಾರ ಎಂದರು. ಈ ವೇಳೆ ತಾಲೂಕು ಪತ್ರಕರ್ತರ ಸಂಘದ ಉಪಾಧ್ಯಕ್ಷ ಮಂಜು ಕೋಟೆ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ್, ವಕೀಲರಾದ ಎಂ.ಬಿ.ಶ್ರೀನಿವಾಸ್, ಶಶಿಧರ್ ಮೂರ್ತಿ ಸೇರಿದಂತೆ ಇತರರಿದ್ದರು.



ಬೆಂಗಳೂರಿನಲ್ಲಿ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಹಾಗೂ ದಿ.ಆರ್.ಧ್ರುವನಾರಾಯಣ್ ಪುತ್ರ, ನಂಜನಗೂಡು ಶಾಸಕ ದರ್ಶನ್ ಮಾಜಿ ಉಪಮುಖ್ಯಮಂತ್ರಿ, ಶಾಸಕ ಜಿ.ಪರಮೇಶ್ವರ್ ಅವರನ್ನು ಅಭಿನಂದಿಸಿ, ಆಶೀರ್ವಾದ ಪಡೆದರು.

ಪ್ರಕಾಶ್ ನಿಧನ



ಹೆಚ್.ಡಿ.ಕೋಟೆ, ಮೇ 15– ತಾಲೂಕಿನ ಎನ್.ಬೇಗೂರು ಗ್ರಾಪಂ ಸದಸ್ಯ ಪ್ರಕಾಶ್ (50) ಸೋಮವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

MYSORE RACE CLUB LIMITED
P B No. 11, Race course Road, Mysore – 570 010
Tel. No. 2521675, Email : secretary@mysoreraceclub.com

TENDER NOTIFICATION

Sealed Tenders are invited to run a **Vegetarian** and a **Non - Vegetarian Stall** at the Mysore Race Club Ltd., premises on Inter Venue Betting and on-course race days for a period of one year.

The tender forms can be obtained from the Office of the Mysore Race Club Ltd., during office hours on any working day on cash / DD / online payment of Rs.5000/-* (non – refundable). The sealed tenders shall be submitted to the Secretary & CEO, Mysore Race Club Ltd., Race Course Road, Mysore – 570 010, within 7 days from the date of publication of this advertisement. The Mysore Race Club Ltd. reserves to itself the right to accept or reject any or all tender(s) without assigning any reason.

* GST applicable extra.
Date : 15/05/2023

By Order,
Secretary & CEO
Mysore Race Club Ltd.,

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

6ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿರುವ
ಶಿವಣ್ಣನವರು
ದುಃಖತಪ್ತರು: ನೀಲಮ್ಮ ಮತ್ತು ಕುಟುಂಬವರ್ಗ, ಗುಂಡುರಾವ್‌ನಗರ, ಮೈಸೂರು.

ಹಸಿರು ನಮ್ಮ ಉಸಿರು

44 ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶ್ರೀ ಶಿವಯೋಗಿಸ್ವಾಮಿ ವಿದ್ಯಾಸಂಸ್ಥೆ (ರಿ) ಗಾಂಧಿನಗರ, ಮೈಸೂರು
ಮಹದೇವಪುರ ಮುಖ್ಯ ರಸ್ತೆ, ಗಾಂಧಿನಗರ, ಮೈಸೂರು-570007.
ಖಾಲಿಯಿರುವ ಸಹ ಶಿಕ್ಷಕ ಹುದ್ದೆಗಳಿಗೆ ನೇಮಕಾತಿ ಪ್ರಕಟಣೆ

ಕ್ರಮ ಸಂ.	ವಿಷಯ	ಹುದ್ದೆ ಸಂಖ್ಯೆ	ವಿದ್ಯಾರ್ಹತೆ	ಮೀಸಲು
1.	ಕನ್ನಡ	1	B.A., B.Ed. ಕನ್ನಡ ಐಚ್ಛಿಕ	ಬಿಂದು-1 ಪರಿಶಿಷ್ಟ ಜಾತಿ-ಇತರೆ
2.	ವಿಜ್ಞಾನ (CBZ)	1	B.Sc.,B.Ed (CBZ)	ಬಿಂದು-2 ಸಾಮಾನ್ಯ-ಇತರೆ
3.	ಆಂಗ್ಲ	1	B.Sc.,B.Ed ಆಂಗ್ಲ ಐಚ್ಛಿಕ	ಬಿಂದು- ಪರಿಶಿಷ್ಟ ಪಂಗಡ-ಇತರೆ

ಅರ್ಹ ಅಭ್ಯರ್ಥಿಗಳು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿದ ಪೂರ್ಣ ದಾಖಲೆಗಳೊಂದಿಗೆ ಈ ಜಾಹಿರಾತು ಪ್ರಕಟಣೆಗೊಂಡ ದಿನಾಂಕದಿಂದ 21 ದಿನಗಳ ಅಂದರೆ 06-06-2023 ರೊಳಗಾಗಿ ಅರ್ಜಿ ಸಲ್ಲಿಸುವುದು. ತದನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳು ರೂ.500/- ಗಳು ಹಾಗೂ ಸಾಮಾನ್ಯ ಅಭ್ಯರ್ಥಿಗಳು ರೂ.1000/- ಗಳ ಡಿ.ಡಿ.ಯನ್ನು ಗೌರವ ಕಾರ್ಯದರ್ಶಿಯವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಡೆದುಕೊಂಡು ಅರ್ಜಿ ಜೊತೆ ಲಗತ್ತಿಸಿ ಗೌರವ ಕಾರ್ಯದರ್ಶಿಗಳು, ಶ್ರೀ ಶಿವಯೋಗಿಸ್ವಾಮಿ ವಿದ್ಯಾಸಂಸ್ಥೆ (ರಿ) ಗಾಂಧಿನಗರ, ಮೈಸೂರು ಇವರಿಗೆ ನೋಂದಣಿ ಅಂಚೆ ಮೂಲಕ ಕಳುಹಿಸುವುದು. ಪ್ರತಿ ಒಂದನ್ನು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು. ಇವರಿಗೆ ಸಲ್ಲಿಸುವುದು. ದಿನಾಂಕ 12-06-2023 ರಂದು ಬೆಳಗ್ಗೆ 11-00 ಗಂಟೆಗೆ ಮೇಲ್ಕಂಡ ಸಂಸ್ಥೆಯ ಕೇಂದ್ರ ಕಛೇರಿಯಲ್ಲಿ ಸಂದರ್ಶನ ನಡೆಯಲಿದ್ದು, ಅಭ್ಯರ್ಥಿಗಳೂ ಮೂಲ ದಾಖಲೆಗಳೊಂದಿಗೆ ಹಾಜರಾಗುವುದು. ಸಂದರ್ಶನಕ್ಕೆ ಹಾಜರಾಗುವ ಬಗ್ಗೆ ಪತ್ರವನ್ನು ಸಹ ಕಳುಹಿಸಲಾಗುತ್ತಿದ್ದು, ಪತ್ರ ತಲುಪದಿದ್ದಲ್ಲಿ ಈ ಜಾಹಿರಾತನ್ನೇ ಪತ್ರವೆಂದು ಭಾವಿಸುವುದು.

ಸಹಿ/- ಗೌರವ ಕಾರ್ಯದರ್ಶಿ ಶ್ರೀ ಶಿವಯೋಗಿಸ್ವಾಮಿ ವಿದ್ಯಾಸಂಸ್ಥೆ (ರಿ)
ದಿನಾಂಕ: 15-05-2023 ಗಾಂಧಿನಗರ, ಮೈಸೂರು-570007

ಭಾರತೀಯ ವಿದ್ಯಾ ಭವನ ಶಾಲೆ

BHARATIYA VIDYA BHAVAN MYSURU

\# ಸಿಎ-4, ವಿಜಯನಗರ ಮೊದಲನೇ ಹಂತ, 1ನೇ ಕ್ರಾಸ್, ಮೈಸೂರು-570017. ಫೋ. 0821-2416106 / 2412141

2022-23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಬಂದಿರುತ್ತದೆ.

ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳು-161, ಅತ್ಯುನ್ನತ ಶ್ರೇಣಿ-124, ಪ್ರಥಮ ಶ್ರೇಣಿ-37

ಭಾರತೀಯ ವಿದ್ಯಾ ಭವನ ಶಾಲೆಗೆ ಕಿರೀಟಪ್ರಾಯರಾದ ವಿದ್ಯಾರ್ಥಿಗಳು

SANJANA Y R 620 | LALITH KUMAR C-620 | HARSHA VARDHAN M R 618 | THANMAYA RAMESH-617 | KIRAN KUMAR S-616 | ROHAN G 616 | NUTHAN C 615 | SATHYA Y 615 | AVANTHIKA REDDY S-614 | DHANUSH GOPAL-614 | CHAITRA V 613 | SRIMAYEE C 613 | KEERTHANA T S 612

ABHILASH V 611 | JAHNAVI M.N.R. 611 | IMPANA K M 611 | TARUN T 609 | GOWRI N 608 | VIKAS S SHETTY-608 | PRASTHAVIKA B 606 | NAYANA C 605 | SPOORTHI S 605 | PRIYANKA M L 604 | SARVESH A 604 | MYTHRI K 603 | NIVEDITHA PRIYA N-602

HIMAVANTH S 598 | MEGHANA K S 598 | NIKITHA G 596 | PUNEETH C 596 | THAMOHAR KIRAN A-596 | MANJUNATH S R 595 | YADUNANDAN GOWDA V-595 | KIRAN S 595 | ROHITH P 595 | AMULYA C L 594 | ASHISH S 594 | MOHITH M S 594 | PREETHAM L 594

NAGENDRA PRASAD-593 | SANIKA M 593 | BHAVANA S 592 | DIVEESH BALAJI V-592 | BHUMIKA R GOWDA-591 | CHIRAG N RAJ 591 | SOGASU K V 591 | YASHASWINI C S 591 | MONISHA R 590 | SUMANTH GOWDA H M-590 | DILIP KUMAR K-587 | VAIBHAV S GOWDA-586 | ATHISH SRINIVAS-585

MAYUR S K 585 | PREETHM S 585 | PRUTHVISH M L 585 | HEMANTH R 584 | TEJAS M S 584 | SANJANA S 583 | SUHANI N S 583 | PREETHAM Y 583 | PRANATHI C K 582 | NRUTHYA M KARIAPPA-582 | PREETHAM B V 582 | SRUJAN J 581 | YASHWANTH GOWDA S-581

DEEKSHITH K R-580 | KEERTHANA C E 580 | YASHAS M S 580 | RISHIKESHAV U 579 | MEGHANA K 579 | VARSHINI Y C 578 | SONIYA A 578 | SANJANA P 578 | SOWJANYA N 578 | CHIRAG N 577 | PRAJWAL KUMAR A S-577 | SUSHANTH B N 576 | HEMANTH N A 570

NAMITHA SHREEYA S M-570 | SUKRUTH RAJ 569 | PRUTHVI P 568 | SUKRUTH H S 568 | SHREYAS S GOWDA -567 | ESHITHA B 566 | LIKITHA K P 566 | INCHARA S GOWDA-565 | NAVANEETHA M 565 | YASHWANTH C D 565 | BHUVAN R 564 | PUNYA R N 563 | ARADHANA SANTHOSH -563

DISHA H S. 562 | KISHAN N 562 | SANJANA P 561 | AISHWARYA M 561 | MANYA P GOWDA -560 | KHUSHI S 560 | VAIBHAV BOPANNA N P -560 | ROHITH V T 559 | HARSHA D GOWDA-559 | BHUVANA N ESHWAR - 558 | YASHASHWINI K 557 | DHIRAJ G 556 | SAMBHAVI CHOULAPALLI -556

PREETHAM K K 552 | HITHASHREE M U-552 | SAIPRAJWAL N 551 | YASHASVITHA D URS-551 | TANUJA S M 550 | CHINMAYI P 547 | KRUTHI A 547 | POOJA V 547 | MANOJ K GOWDA -546 | JHENKARA R 546 | DHANUSH P GOWDA-545 | MONISHA MJ 544 | KOUSHIK Y 542

SHASHANK D GOWDA-540 | SUMUKH S 539 | MANOJ K H 537 | NIKHITHA G R 537 | HARISHITHA P. 536 | CHAITHRA B K 535 | KUSHI N 534

ಸಾಧನೆಯ ಹಿಂದಿರುವ ಪ್ರೇರಕ ಶಕ್ತಿ

Sri Krishnappa M N, I-L Kannada | Smt. Nagamani, I-L Kannada | Smt. S V Kalavathi, I-L Sanskrit | Smt. Bhagyalakshmi N, II-L English | Sri Kantharaj, III-L Hindi

Smt. H N Prapulla, Science | Smt. Dimple K S, Science | Smt. Leelavathi Y, Mathematics | Smt. Shashikala D R, Social Science | Smt. Poornima V, Social Science

ವಿದ್ಯಾರ್ಥಿಗಳ ಸಾಧನೆಗೆ ಕಾರಣಕರ್ತರಾದ ಪೋಷಕರು, ಬಿವಿಬಿ ಶಾಲೆಯ ಬೋಧಕ ವೃಂದಕ್ಕೆ ಆಡಳಿತ ಮಂಡಳಿ, ಪ್ರಾಂಶುಪಾಲರು ಮತ್ತು ಶಿಕ್ಷಕ ವೃಂದದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು

Sri K. B. Ganapathy, Chairman | Dr. C. Naganna, Vice-Chairman | Sri P. S. Ganapathy, Hon. Secretary | Dr. A. T. Bhashyam, Hon. Treasurer | Smt. Vijaya Narasimham, Principal